(ಸದನವು ಬೆಳಿಗ್ಗೆ 11.15ಕ್ಕೆ ಸಮಾವೇಶಗೊಂಡಿತು)

(ಸಭಾಧ್ಯಕ್ಷರಾದ ಶ್ರೀ ಕೆ.ಜಿ. ಬೋಪಯ್ಯನವರು ಅಧ್ಯಕ್ಷ ಪೀಠವನ್ನಲಂಕರಿಸಿದ್ದರು)

1. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆಗೆ ಸರ್ಕಾರದ ಉತ್ತರ.

ವಿಷಯ: ರಾಜ್ಯದ 100 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶಗಳೆಂದು ಸರ್ಕಾರ ಘೋಷಿಸಿದ್ದು, ಬರಪರಿಹಾರ ಕಾಮಗಾರಿಗಳನ್ನು ಸಮರೋಪಾದಿ ಯಲ್ಲಿ ಕೈಗೊಳ್ಳುವ ಬಗ್ಗೆ.

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೆ, ನಾನು ಉತ್ತರ ಕೊಡುವ ಮೊದಲು ಸನ್ಮಾನ್ಯ ವಿಪಕ್ಷ ನಾಯಕರು ಒಂದನ್ನು ಕ್ಲಾರಿಫೈ ಮಾಡಬೇಕೆಂದು ಕೇಳುತ್ತೇನೆ. ಇವತ್ತು ಎಲ್ಲ ಮಾಧ್ಯಮಗಳಲ್ಲಿ, ಹೌಸ್‌ನೊಳಗೆ ಸದಾನಂದಗೌಡರು ಕೋಪಗೊಂಡಿದ್ದಾರೆ, ಸದಾನಂದಗೌಡರಿಗೆ ಸಿಟ್ಟು ಬಂದಿದೆ, ಮತ್ತೊಂದು ಬಂದಿದೆ ಎಂದು ಹೆಡ್‌ಲೈನ್ಸ್ ಆಗಿದೆ. ನೀವು ನನಗೆ ಸಿಟ್ಟು ಬಂದಿಲ್ಲ ಎಂದು ಹೇಳಿದರೆ ಅದು ನಾಳೆ ಪೇಪರ್‌ನಲ್ಲಿ ಬರುತ್ತದೆ, ಅದಕ್ಕೋಸ್ಕರ ಕೇಳುತ್ತಿದ್ದೇನೆ. ವಾಸ್ತವವಾಗಿ ನನಗೆ ಸಿಟ್ಟು ಬರಲೇ ಇಲ್ಲ, ನಾನು ಸಿಟ್ಟು ಮಾಡಿಕೊಂಡೇ ಇಲ್ಲ.

ಶ್ರೀ ಸಿದ್ದರಾಮಯ್ಯ : ಮುಖ್ಯಮಂತ್ರಿಗಳು ಯಾವಾಗಲೂ ನಗುತ್ತಿದ್ದರು, ನಿನ್ನೆ ಏಕೋ ಸ್ವಲ್ಪ ಸಿಟ್ಟು ಮಾಡಿಕೊಂಡಿದ್ದರು.

ಶ್ರೀ ಡಿ.ವಿ. ಸದಾನಂದಗೌಡ : ನೀವು ಹಾಗೆ ಹೇಳಿದರೆ ಹೇಗೆ?

ಶ್ರೀ ಸಿದ್ದರಾಮಯ್ಯ : ನೀವು ಹೀಗೆ ನಗುತ್ತಾ ಇರಿ, ಅಷ್ಟೇ ಸಾಕು.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಸಭಾಧ್ಯಕ್ಷರೆ, ನಿಯಮ 69ರಡಿಯಲ್ಲಿ ಪ್ರಸ್ತುತ ರಾಜ್ಯ ಎದುರಿಸುತ್ತಿರುವಂಥ ಬರ ಪರಿಸ್ಥಿತಿಯ ಬಗ್ಗೆ ವಿಸ್ತೃತವಾದಂಥ ಚರ್ಚೆ ನಡೆದಿದೆ. ಸನ್ಮಾನ್ಯ ಸಿದ್ದರಾಮಯ್ಯನವರಿಂದ ಪ್ರಾರಂಭ ಮಾಡಿ, ಸುಮಾರು 21 ಜನ ಸುದೀರ್ಘವಾಗಿ ಬರ ಪರಿಸ್ಥಿತಿಯ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಅವರ ಹೆಸರುಗಳನ್ನು ನಾನು ಉಲ್ಲೇಖ ಮಾಡುವುದಿಲ್ಲ. ಇಲ್ಲಿಯವರೆಗೆ ಕೈಗೊಂಡಂಥ ಕ್ರಮಗಳು ಮತ್ತು ಅವರು

ಅಪೇಕ್ಷೆ ಮಾಡಿದಂಥ ಇನ್ನಷ್ಟು ಹೆಚ್ಚು ಕ್ರಮಗಳನ್ನು ಕೈಗೊಳ್ಳಬೇಕು, ಇನ್ನೂ ಹಲವಾರು ಕಡೆಗಳಲ್ಲಿ ಇನ್ನೂ ಹೆಚ್ಚು ಕಾರ್ಯತತ್ಪರರಾಗಬೇಕು ಎನ್ನುವ ರೀತಿಯಲ್ಲಿ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಒಂದು ಸಂತೋಷದ ಸಂಗತಿಯೆಂದರೆ, ಬಹುಶಃ ಭಾರಿ ಸಮಯದ ನಂತರ ಸದನದ ಕಲಾಪ ಅತ್ಯಂತ ಸುಸೂತ್ರವಾಗಿ ಮತ್ತು ಗಂಭೀರ ವಿಚಾರದಲ್ಲಿ ಅತ್ಯಂತ ಗಂಭೀರವಾದಂಥ ಚರ್ಚೆ ನಡೆದಿರುವುದು ತುಂಬಾ ಸಮಾಧಾನಕರ ಮತ್ತು ಸ್ವಾಗತಾರ್ಹ ಸಂಗತಿ ಎಂದು ನಾನು ಭಾವಿಸುತ್ತಿದ್ದೇನೆ. ಇದರಲ್ಲಿ ಪಾಲ್ಗೊಂಡ ವಿಪಕ್ಷದ ಮತ್ತು ನಮ್ಮ ಪಕ್ಷದ ಎಲ್ಲರಿಗೆ ನಾನು ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸಲು ಇಚ್ಛೆಪಡುತ್ತಿದ್ದೇನೆ. ಇವತ್ತು ಬರ ಪರಿಸ್ಥಿತಿಯ ಬಗ್ಗೆ ನಾನು ಬಹಳ ಸುದೀರ್ಘವಾಗಿ ಮಾತನಾಡಲು ಇಚ್ಛೆಪಡುವುದಿಲ್ಲ. ಏಕೆಂದರೆ, ಒಂದಷ್ಟು ವಿಚಾರಗಳ ಬಗ್ಗೆ ಬಹಳ ಹಿಂದೆಯೇ ಬರ ಪರಿಸ್ಥಿತಿಯ ಬಗ್ಗೆ ಸನ್ಮಾನ್ಯ ಸಿದ್ದರಾಮಯ್ಯನವರು ಮತ್ತು ಮೇಲ್ಮನೆಯ ವಿಪಕ್ಷ ನಾಯಕಿ ಮೋಟಮ್ಮನವರು ನನಗೆ ಪತ್ರ ಬರೆದಿದ್ದರು. ಬರ ಪರಿಸ್ಥಿತಿಯ ಬಗ್ಗೆ ಸರ್ಕಾರ ಇನ್ನೂ ಬಹಳ ಗಂಭೀರವಾಗಿ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳಲಿಲ್ಲ, ಇದನ್ನು ಇನ್ನಷ್ಟು ಹೆಚ್ಚು war-footing ರೀತಿಯಲ್ಲಿ ತೆಗೆದುಕೊಳ್ಳಬೇಕು ಎನ್ನುವ ರೀತಿಯಲ್ಲಿ ಪತ್ರಗಳನ್ನು ಬರೆದಿದ್ದರು. ಆ ಸಂದರ್ಭದಲ್ಲಿ ನಾನು ಅವರಿಗೊಂದು ವಿವರವಾದ ಪತ್ರವನ್ನು ಬರೆದಿದ್ದೆ. ಸರ್ಕಾರ ಏನೆಲ್ಲ ಕ್ರಮಗಳನ್ನು ತೆಗೆದುಕೊಂಡಿದೆ ಮತ್ತು ಇನ್ನು ಮುಂದೆ ಈ ಬರ ಪರಿಸ್ಥಿತಿ ಯನ್ನು ಇನ್ನಷ್ಟು ಚೆನ್ನಾಗಿ ನಿಭಾಯಿಸಲು ನಿಮ್ಮ ಸಲಹೆ ಸೂಚನೆಗಳನ್ನು ನಾನು ಸ್ವಾಗತ ಮಾಡುತ್ತೇನೆ ಎನ್ನುವಂಥ ಮಾತನ್ನು ಕೂಡ ನಾನು ಅವರಿಗೆ ತಿಳಿಸಿದ್ದೆನು ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿ ಒಳನಾಡು ಪ್ರದೇಶದಲ್ಲಿ ಮಳೆ ಸಮರ್ಪಕವಾಗಿ ಆಗಲಿಲ್ಲ. 40 ವರ್ಷಗಳ ಅಂತರದಲ್ಲಿ ಈ ವರ್ಷ ಅತೀ ಕಡಿಮೆ ಮಳೆಯಾಗಿದೆ. 2011ರ ಸೆಪ್ಟೆಂಬರ್ ತಿಂಗಳಲ್ಲಿ, ಕಳೆದ 40 ವರ್ಷಗಳ ಇತಿಹಾಸದಲ್ಲೇ ಅತ್ಯಂತ ಕಡಿಮೆ ಮಳೆಯಾಗಿದೆ. ಉತ್ತರ ಒಳನಾಡು ಪ್ರದೇಶದಲ್ಲಿ ಸೆಪ್ಟೆಂಬರ್, ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಶೇಕಡ 62, ಶೇಕಡ 28 ಮತ್ತು ಶೇಕಡ 90ರಷ್ಟು ಮಳೆ ಕೊರತೆಯಾಗಿದೆ. ಹಾಗಾಗಿ, ಹಿಂಗಾರು ಮತ್ತು ಮುಂಗಾರು ಕೃಷಿಗೆ ಭಾರಿ ಹಿನ್ನಡೆಯಾದುದನ್ನು ನಾವು ಕಂಡಿದ್ದೇವೆ. ಪ್ರತಿ ತಿಂಗಳೂ ವಾಸ್ತವಿಕವಾಗಿ ಇದನ್ನು ತಿಳಿದು ಕೊಳ್ಳುಂಥ ಪ್ರಯತ್ನಗಳನ್ನು ನಾವು

ಮಾಡಿದ್ದೇವೆ. ಪ್ರಾರಂಭದ ಹಂತದಲ್ಲಿ ಮಳೆ ಕಡಿಮೆಯಾದಾಗಲೇ ನಾವು ಇದರ ಬಗ್ಗೆ ಆಲೋಚನೆ ಮಾಡಿದ್ದೇವೆ. ಒಂದು ಕಡೆ ಮಳೆ ಕಡಿಮೆ ಯಾಗಿದ್ದರೆ, ಕರಾವಳಿ ಪ್ರದೇಶದ ಭಾಗಗಳಾದ ಕೊಡಗಿನಿಂದ ಹಿಡಿದು, ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ, ಹಾವೇರಿಯವರೆಗೆ ಅತಿವೃಷ್ಟಿಯಿಂದ ಸ್ವಲ್ಪ ತೊಂದರೆಯಾದುದನ್ನು ನಾವು ಗಮನಿಸಿದ್ದೇವೆ. ಈ ಬಾರಿ ಒಟ್ಟು ಶೇಕಡ 20ಕ್ಕಿಂತ ಅಧಿಕ ಮಳೆಯ ಕೊರತೆಯಾಗಿರುವುದನ್ನು ನಾವು ಐಡೆಂಟಿಫೈ ಮಾಡಿದ್ದೇವೆ. ಈ ರೀತಿ ಐಡೆಂಟಿಫೈ ಮಾಡುವುದನ್ನು ನಾವು ಸೆಪ್ಟೆಂಬರ್ ತಿಂಗಳ ಕೊನೆಯಲ್ಲಿಯೇ ನಾವು ಪ್ರಾರಂಭ ಮಾಡಿದ್ದೇವೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯ ಪ್ರಕಾರ ಬರವನ್ನು ಅಸೆಸ್‌ಮೆಂಟ್ ಮಾಡಬೇಕಾದುದೇ ಸೆಪ್ಟೆಂಬರ್ ತಿಂಗಳ ನಂತರ. ಗೈಡ್‌ಲೈನ್ಸ್‌ನಲ್ಲಿಯೂ ಅದೇ ರೀತಿ ಹೇಳಿದೆ. ಪೂರ್ವಭಾವಿಯಾಗಿ ಇದಕ್ಕೆ ಬೇಕಾದಂಥ ಎಲ್ಲಾ ತಯಾರಿಗಳನ್ನು ಮಾಡಿಕೊಳ್ಳುವಂಥ ಪ್ರಯತ್ನ ಗಳನ್ನು ಸರ್ಕಾರ ಮಾಡಿತು. ವಾಡಿಕೆಗಿಂತ ಕಡಿಮೆ ಮಳೆಯಾದುದನ್ನು ನಾವು ಪ್ರತಿ ತಿಂಗಳೂ ಅಸೆಸ್ ಮಾಡಿದ್ದೇವೆ. ಜೂನ್ ತಿಂಗಳಲ್ಲಿ ಸುಮಾರು 258 ಹೋಬಳಿಗಳಲ್ಲಿ, 55 ತಾಲ್ಲೂಕಿನಲ್ಲಿ ಸಾಮಾನ್ಯ ಕೊರತೆಯಾಗಿದೆ, ತೀವ್ರ ಕೊರತೆ 37 ಹೋಬಳಿಗಳಲ್ಲಿ, 3 ತಾಲ್ಲೂಕುಗಳಲ್ಲಿ ಆಗಿದೆ. ಜುಲೈ ತಿಂಗಳಲ್ಲಿ ಸಾಮಾನ್ಯ ಕೊರತೆ 288 ಹೋಬಳಿಗಳಲ್ಲಿ, 70 ತಾಲ್ಲೂಕುಗಳಲ್ಲಿ ಆಗಿದೆ. ಮತ್ತು ತೀವ್ರ ಕೊರತೆ 2 ತಾಲ್ಲೂಕುಗಳಲ್ಲಿ 15 ಹೋಬಳಿಗಳಲ್ಲಿ ಆಗಿದೆ. ಅದರ ನಂತರದ್ದು ಪ್ರಾಮುಖ್ಯ. ಆಗಸ್ಟ್ ತಿಂಗಳು ಬಿಟ್ಟು ಸೆಪ್ಟೆಂಬರ್ ತಿಂಗಳಲ್ಲಿ ವಿಶೇಷವಾದಂಥ ಮಳೆ ಬರದೆ ತೀವ್ರ ಕೊರತೆ ಎದುರಿಸಿದೆವು. ಆ ತಿಂಗಳಲ್ಲಿ ಸುಮಾರು 98 ತಾಲ್ಲೂಕುಗಳಲ್ಲಿ 407 ಹೋಬಳಿಗಳಲ್ಲಿ ಭಾರಿ ಮಳೆಯ ಕೊರತೆ ಆಯಿತು. ಅದೂ ಅಲ್ಲದೆ ಸಾಮಾನ್ಯ ಕೊರತೆ 33 ತಾಲ್ಲೂಕುಗಳ 164 ಹೋಬಳಿಗಲ್ಲಿ ಆಗಿತ್ತು. ಅಕ್ಟೋಬರ್ ತಿಂಗಳಲ್ಲಿ ಕೂಡ 27 ತಾಲ್ಲೂಕುಗಳ 77 ಹೋಬಳಿ ಗಳಲ್ಲಿ ಮಳೆಯ ಕೊರತೆ ಆಗಿದ್ದನ್ನು ಕಂಡಿದ್ದೇವೆ. ನವೆಂಬರ್ ತಿಂಗಳಿನಲ್ಲಿ 316 ಹೋಬಳಿಗಳಲ್ಲಿ ಮತ್ತು 89 ತಾಲ್ಲೂಕುಗಳಲ್ಲಿ ಆಗಿರುವ ತೀವ್ರ ಕೊರತೆಯನ್ನು ನಾವು ಕಂಡಿದ್ದೇವೆ. ನಾವು ನಮ್ಮ guidelines ಆಧಾರದಲ್ಲಿ ಶೇಕಡ 20ಕ್ಕಿಂತ ಅಧಿಕ ಮಳೆ ಕೊರತೆ ಆದುದನ್ನು ಮತ್ತು ನಾಲ್ಕು ವಾರಗಳ ಅವಧಿಯಲ್ಲಿ ಒಣ ಹವೆ ಇರುವಂಥ ಸರ್ಕಾರಿ ಮಾರ್ಗಸೂಚಿ ಆಧಾರದಲ್ಲಿ ಬರಪೀಡಿತ ತಾಲ್ಲೂಕುಗಳು ಯಾವುವು ಎಂಬುದನ್ನು ಘೋಷಣೆ ಮಾಡುವುದಕ್ಕೆ ಪ್ರಯತ್ನ ಪಟ್ಟೆವು. ನಾನು ಈ ಸಭೆಗೆ

ಭಾರಿ ಸ್ಪಷ್ಟವಾಗಿ ತಿಳಿಸಲಿಕ್ಕೆ ಇಚ್ಛೆಪಡುತ್ತಿದ್ದೇನೆ. ನಾವು ಸೆಪ್ಟೆಂಬರ್ ಕೊನೆಯಲ್ಲಿಯೇ ಇದನ್ನೆಲ್ಲ ಅಧ್ಯಯನ ಮಾಡಿಕೊಂಡು ಬಂದೆವು. ಅಕ್ಟೋಬರ್ ಮೂರನೇ ತಾರೀಖಿ ನಿಂದ ನಾವು ಇದರ ಬಗ್ಗೆ ತೀವ್ರ ಕಾರ್ಯಾಚರಣೆ ಮಾಡಬೇಕೆನ್ನುವ ದೃಷ್ಟಿಯಿಂದ ನಾವು ಜಿಲ್ಲಾಧಿಕಾರಿಗಳ ಮತ್ತು CEO ಗಳ ಸಭೆಯನ್ನು ಕರೆಯುವ ಕೆಲಸ ಮಾಡಿದ್ದೇವೆ ಮೂರನೇ ತಾರೀಖಿಗೆ ಹವಾಮಾನ ಪರಿಸ್ಥಿತಿಯನ್ನು ಅಧ್ಯಯನ ಮಾಡುವ ಪ್ರಯತ್ನ ಮಾಡಿದೆ. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳನ್ನು ಮತ್ತು ಜಿಲ್ಲಾ ಪಂಚಾಯತ್ CEO ಗಳನ್ನು ಕರೆದು ಹವಾಮಾನ ಅಧ್ಯಯನ ಮಾಡಿದ್ದೇವೆ. ಈ ಹವಾಮಾನ ಪರಿಸ್ಥಿತಿಯ ಬಗ್ಗೆ ಬೇರೆ ಬೇರೆ ಇಲಾಖೆಗಳ ಮುಖ್ಯಸ್ಥರೊಂದಿಗೆ ಚರ್ಚೆ ಮಾಡಿ ದಿನಾಂಕ: 4.10.2010ಕ್ಕೆ 70 ಮತ್ತು 7.10.2011ಕ್ಕೆ 14, 15–10–2011ಕ್ಕೆ 6, ಹಾಗೂ 8.11.2011ರಲ್ಲಿ 9 ತಾಲ್ಲೂಕುಗಳು, ಈ ರೀತಿ 23 ಜಿಲ್ಲೆಗಳ 99 ತಾಲ್ಲೂಕು ಗಳಲ್ಲಿ 207 ಹೋಬಳಿಗಳನ್ನು ಬರಪೀಡಿತ ಪ್ರದೇಶ ಎನ್ನುವ ಘೋಷಣೆ ಯನ್ನು ಮಾಡಿದೆವು. ಈ ಕೆಲಸ ಕಾರ್ಯಗಳನ್ನು ಮಾಡಿದ ಮೇಲೆ ಇಡೀ ರಾಜ್ಯದಲ್ಲಿ War-footing ನಲ್ಲಿ ಎಲ್ಲವನ್ನೂ ಕೈಗೆತ್ತಿಕೊಳ್ಳಬೇಕು ಎನ್ನುವ ಪ್ರಯತ್ನಗಳನ್ನು ಮಾಡಿದೆವು. ಒಂದು ರೀತಿಯಲ್ಲಿ ಎಲ್ಲದಕ್ಕೂ ತೊಂದರೆ ಯಾಯಿತು. ನಾವು ನೋಡಿದ ರೀತಿಯಲ್ಲಿ ರಾಜ್ಯದಲ್ಲಿ 3475 ಸಣ್ಣ ನೀರಾವರಿ ಕೆರೆಗಳಲ್ಲಿ 1245 ಕೆರೆಗಳಿಗೆ ನೀರೇ ಬಂದಿಲ್ಲ. 30% ನಷ್ಟು ನೀರು ತುಂಬಿದೆ. ಸುಮಾರು 460 ಕೆರೆಗಳಲ್ಲಿ 30–50% ನೀರು ತುಂಬಿದೆ, 744 ಕೆರೆಗಳು 50–99% ತುಂಬಿದೆ. ನಮಗೆ ಸಿಕ್ಕಿದಂಥ ದಾಖಲೆಗಳ ಪ್ರಕಾರ ಈ ಪರಿಸ್ಥಿತಿ ಆಗಿದೆ. ಬಿತ್ತನೆ ಮತ್ತು ಮಳೆಯ ಪರಿಸ್ಥಿತಿ ಬಗ್ಗೆ ಉಲ್ಲೇಖ ಮಾಡುವುದಾದರೆ, ಒಳನಾಡು ಪ್ರದೇಶಗಳಲ್ಲಿ ಸಮರ್ಪಕವಾಗಿ ಮಳೆ ಆಗದಿರುವ ಹಿನ್ನೆಲೆಯಲ್ಲಿ ಮುಂಗಾರು ಬೆಳೆ ಕೊನೆಯ ಹಂತದಲ್ಲಿ ತೇವಾಂಶದ ಕೊರತೆಗೆ ತುತ್ತಾಯಿತು. ಒಟ್ಟು ಸುಮಾರು 74.65 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಇತ್ತು, ಆದರೆ, 69.15 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಆಯಿತು. 22.56 ಲಕ್ಷ ಹೆಕ್ಟೇರ್ ಪ್ರದೇಶದ ಬೆಳೆ ಮಳೆಯು ಕೊರತೆಯಿಂದ ಹಾನಿಯಾಗಿದೆ. ಇದರಿಂದ loss ಎಷ್ಟಾಗುತ್ತದೆ ಎನ್ನುವುದನ್ನು cost of cultivation ನ ಆಧಾರದಲ್ಲಿ ಅಂದಾಜು ಮಾಡುವಂಥ ಪ್ರಯತ್ನ ಗಳನ್ನು ಮಾಡಿದ್ದೇವೆ. ಸುಮಾರು 4245.84 ಕೋಟಿ ರೂಪಾಯಿಗಳಷ್ಟು ಲುಕ್ಸಾನು ಆಗಿರುವುದು ನಮಗೆ ಈಗಾಗಲೇ ಗೊತ್ತಾಗಿದೆ. ಹಿಂಗಾರು

ಹಂಗಾಮಿನಲ್ಲಿ ಅಕ್ಟೋಬರ್ ಮತ್ತು ನವೆಂಬರ್ ತಿಂಗಳಿನಲ್ಲಿ ಉತ್ತರ ಒಳನಾಡಿನಲ್ಲಿ ಮತ್ತೆ ಮಳೆಯ ಕೊರತೆ ಮುಂದುವರೆಯಿತು. ಹಿಂಗಾರು ಅವಧಿಗೆ ಒಟ್ಟು 35.55 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬಿತ್ತನೆ ಗುರಿಯನ್ನು ನಾವು ಹೊಂದಿದ್ದೆವು. ಆದರೆ, 24.83 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಕೃಷಿ ಬಿತ್ತನೆ ಅಂದರೆ ಶೇಕಡ 70ರಷ್ಟು ಮಾತ್ರ ಆಗಿದೆ. ಅದೂ ಕೂಡ ತೇವಾಂಶದ ಕೊರತೆಯಿಂದ ತೊಂದರೆಯಾಗಿರುವುದನ್ನು ನಾವು ಕಂಡಿದ್ದೇವೆ. ಇದು ತಿಳಿದ ತಕ್ಷಣ ನಾವು ಎಲ್ಲಾ ಜಿಲ್ಲಾಧಿಕಾರಿಗಳ ಜೊತೆ ನಿರಂತರ ಸಂಪರ್ಕ ಇಟ್ಟುಕೊಳ್ಳುವ ಕೆಲಸ ಮಾಡಿದ್ದೇವೆ. ಬರದ ಛಾಯೆ ಗೊತ್ತಾದ ತಕ್ಷಣ ಬರ ಪರಿಹಾರ ಕಾಮಗಾರಿಗೆ ಎಷ್ಟೆಷ್ಟು ಹಣ ಬೇಕು ಎನ್ನುವುದನ್ನು identify ಮಾಡಿ ಜಿಲ್ಲಾಧಿಕಾರಿಗಳಿಗೆ ಹಣ ಬಿಡುಗಡೆ ಮಾಡುವ ಕೆಲಸ ಮಾಡಿದ್ದೇವೆ. SDRF ನಿಂದ ಕೇಂದ್ರ ಸರ್ಕಾರದಿಂದ ಮೊದಲನೇ ಕಂತು ರೂಪದಲ್ಲಿ 66.38 ಕೋಟಿ ರೂ. ಬಿಡುಗಡೆ ಆಗಿತ್ತು. ರಾಜ್ಯ ಸರ್ಕಾರ ತನ್ನ ಪಾಲನ್ನು ಸೇರಿಸಿ ಸುಮಾರು 89.25 ಕೋಟಿ ರೂಪಾಯಿ ಸೇರಿಸಿ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡುವ ಕೆಲಸ ಮಾಡಿದ್ದೇವೆ. ನಾನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಈಗಾಗಲೇ ವಿರೋಧ ಪಕ್ಷದ ನಾಯಕರು ಮತ್ತು ಉಳಿದ ಸದಸ್ಯರು ಮಾತನಾಡುತ್ತಾ ರಾಜ್ಯ ಸರ್ಕಾರ ಸಾಕಷ್ಟು ಹಣ ಬಿಡುಗಡೆ ಮಾಡಲಿಲ್ಲ, ಸಾಕಷ್ಟು ಬರಪರಿಹಾರ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಿಲ್ಲ, ಒಂದು ವೇಳೆ ಬಿಡುಗಡೆ ಮಾಡಿದ್ದೇವೆಂದು ಹೇಳಿದರೂ ಕೂಡ ಜಿಲ್ಲಾಧಿಕಾರಿಗಳು, CEO ಗಳು ಅದನ್ನು ವಿನಿಯೋಗ ಮಾಡಲಿಲ್ಲ ಎನ್ನುವ ರೀತಿಯಲ್ಲಿ ಹೇಳಿದರು. ನಾನೇ ಮುಖ್ಯಮಂತ್ರಿಯಾಗಿ 23 ಬರಪೀಡಿತ ಜಿಲ್ಲೆಗಳಲ್ಲಿ 20 ಜಿಲ್ಲೆಗಳಿಗೆ ಹೋಗಿದ್ದೇನೆ. ನಾನು ಹೋದಾಗಲೆಲ್ಲ ಅಲ್ಲಿಯ ನಮ್ಮ ಅಧಿಕಾರಿಗಳ ಜೊತೆ ಸಮಾಲೋಚನೆ ಮಾಡುವಂಥದ್ದು, ಅಲ್ಲಿರುವ ಬಹುತೇಕ ಶಾಸಕರನ್ನು ಕರೆಸಿಕೊಂಡು ಮಾತನಾಡಿ reveiw ಮಾಡುವ ಕೆಲಸ ಮಾಡಿದ್ದೇನೆ. ಬಳ್ಳಾರಿ, ಚಾಮರಾಜನಗರಕ್ಕೆ ಹೋಗಿಲ್ಲ. ಹಾಸನಕ್ಕೆ ಮೊನ್ನೆ ಹೋಗಿ ಸಣ್ಣ review ಮಾಡಿ ಬಂದಿದ್ದೇನೆ. ಆದೆ, ಅಲ್ಲಿ ಅಧಿಕೃತ review ಮಾಡಲಿಲ್ಲ. ಆದರೆ, ಅಲ್ಲಿರುವ ಜಿಲ್ಲಾಧಿಕಾರಿ, CEO ಮತ್ತು ಅಧಿಕಾರಿಗಳ ಜೊತೆ ಮಾತನಾಡಿದ್ದೇನೆ. ಇದನ್ನು ನಿಭಾಯಿಸುವ ಕೆಲಸವನ್ನು ಸರ್ಕಾರ ಮಾಡಲಿಲ್ಲ ಎಂದು ಹೇಳುವುದು ಖಂಡಿತವಾಗಿ ಸರಿಯಲ್ಲ. ದಿನಾಂಕ: 3.12.2011 ರಂದು ಮತ್ತು ಇವತ್ತಿಗೂ ನಾವು ಲೆಕ್ಕ ನೋಡಿದರೆ,

ಬೇಕಾದರೆ ಯಾವ್ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟಿದೆ ಎನ್ನುವ ಅಂಕಿಅಂಶಗಳನ್ನು ಕೊಡಬಹುದು. ಸುಮಾರು 153.49 ಕೋಟಿ ರೂಪಾಯಿ ಜಿಲ್ಲಾಧಿಕಾರಿಗಳ PD account ನಲ್ಲಿ ಇವತ್ತಿಗೂ ಕೂಡ ಲಭ್ಯವಿದೆ. ಅದನ್ನು ವಿನಿಯೋಗ ಮಾಡಲಿಕ್ಕೆ ಆ ಜಿಲ್ಲಾಧಿಕಾರಿಗಳಿಗೆ ಪೂರ್ಣ ಅಧಿಕಾರಗಳನ್ನು ಕೊಟ್ಟಿದ್ದೇವೆ. ಈಗಾಗಲೇ ಹಿಂಗಾರು ಬಿತ್ತನೆಗೆ 1.35 ಲಕ್ಷ ಕ್ವಿಂಟಾಲ್ ಬಿತ್ತನೆ ಬೀಜವನ್ನು ಶೇಕಡ 50ರ subsidy ಯಲ್ಲಿ ರೈತರಿಗೆ ಕೊಡುವ ಕೆಲಸ ಮಾಡಿದ್ದೇವೆ. ಬರ ಬಂದ ಸಂದರ್ಭದಲ್ಲಿ ಹಿಂಗಾರಿನಲ್ಲಿ ರಸಗೊಬ್ಬರಕ್ಕೆ ಭಾರಿ ಬೇಡಿಕೆ ಇಲ್ಲದಿದ್ದರೂ ಕೂಡ ನಾವು ಅದರ ಬಗ್ಗೆ ಭಾರಿ ನಿಗಾ ವಹಿಸುವ ಕೆಲಸ ಮಾಡಿದ್ದೇವೆ. ಶೇಕಡ 50ರ ದರದಲ್ಲಿ ಸಂರಕ್ಷಣಾ ಔಷಧಗಳನ್ನು ವಿತರಣೆ ಮಾಡುವ ಕೆಲಸವನ್ನು ಮಾಡಿದ್ದೇವೆ. ಬರಪರಿಸ್ಥಿತಿ ಯಲ್ಲಿ ಬೇಕಾದಂಥದ್ದು. ನಮ್ಮ ಮೇಲೆ ಇದ್ದ ಆರೋಪಗಳೇನೆಂದರೆ ದನಗಳೆಲ್ಲ ಕಸಾಯಿಖಾನೆಗೆ ಹೋಗುತ್ತಿವೆ. ದನಗಳಿಗೆ ಸರಿಯಾದ fodder ಒದಗಿಸಲಿಲ್ಲ, ಮೇವು ಲಭ್ಯವಿಲ್ಲ ಎಂದು ಹೇಳಿದ್ದಾರೆ. ರಾಜ್ಯದಲ್ಲಿ ಎಲ್ಲೂ ಕೂಡ ಮೇವಿಗೆ ಕೊರತೆ ಇಲ್ಲ. ಬೇಕಾದರೆ ಅಂಕಿಅಂಶಗಳನ್ನು ಸದನದ ಮುಂದಿಡಲು ತಯಾರಿದ್ದೇನೆ ಪ್ರಾರಂಭದಲ್ಲಿ ಬರ ಎಂದು ಘೋಷಣೆ ಎಂದು ಆದತಕ್ಷಣ ನಮ್ಮ ರಾಜ್ಯದಿಂದ ಹೊರ ರಾಜ್ಯಕ್ಕೆ ಮೇವು ಸಾಗಾಣಿಕೆ ಮಾಡುವುದನ್ನು ನಿಷೇಧಿಸುವ ಆದೇಶವನ್ನು ಆ ಸಂದರ್ಭದಲ್ಲಿ ಮಾಡಿದ್ದೇವೆ. ಮೇವು ಖರೀದಿ ಮತ್ತು ಸಾಗಾಣಿಕೆಗೆ ಸಂಬಂಧಪಟ್ಟಂತೆ ದರ ಪಟ್ಟಿಯನ್ನು ಕೂಡ ಪರಿಷ್ಕರಣೆ ಮಾಡಿದ್ದೇವೆ.

ಶ್ರೀ ಸಿದ್ದರಾಮಯ್ಯ : ಬರ ಪ್ರಾರಂಭವಾದಾಗ ದರ ಪರಿಷ್ಕರಣೆ ಮಾಡಿದ್ದೀರಿ.

ಶ್ರೀ ಡಿ.ವಿ. ಸದಾನಂದಗೌಡ : 2003-04ರಲ್ಲಿ ಆ ದರ ಇತ್ತು.

ಶ್ರೀ ಸಿದ್ದರಾಮಯ್ಯ : ನಾವು ಇಲ್ಲಿ ಚರ್ಚೆ ಪ್ರಾರಂಭ ಮಾಡಿದ ಮೇಲೆ ನೀವು ಮೇವು ದರ ಪರಿಷ್ಕರಣೆ ಮಾಡಿ ಆದೇಶ ಹೊರಡಿಸಿದ್ದೀರಿ. ಆ ಆದೇಶವನ್ನು ಹೊರಡಿಸಿದ ದಿನಾಂಕ ನೋಡಿ.

ಶ್ರೀ ಉಮೇಶ್ ವಿ. ಕತ್ತಿ : ಜಿಲ್ಲಾಧಿಕಾರಿಗಳಿಗೆ ಮೇವಿನ rate fixation ಅಧಿಕಾರ ಕೊಟ್ಟಿದ್ದೇವೆ. ಅವರು negotiation ಮಾಡಿ ಖರೀದಿ ಮಾಡಬಹುದೆಂದು ಎಲ್ಲಾ ಜಿಲ್ಲೆಗಳಿಗೆ ತಿಳಿಸಿದ್ದೇವೆ.

ಶ್ರೀ ಸಿದ್ದರಾಮಯ್ಯ : ಯಾವತ್ತು ಆದೇಶ ಹೊರಡಿಸಿದ್ದೀರಿ, ಆ date ಹೇಳಿ. ನಾನೇ ಓದಿದ್ದೇನೆ. It is only in the month of December.

ಶ್ರೀ ಡಿ.ವಿ. ಸದಾನಂದ ಗೌಡ : May be.

ಶ್ರೀ ಸಿದ್ದರಾಮ್ಯಯ : ನಾನು ಏಕೆ ಹೇಳಿದೆ ಎಂದರೆ to rectify this.

ಶ್ರೀ ಡಿ.ವಿ. ಸದಾನಂದಗೌಡ : Actually ಏನಾಗಿತ್ತು ಎಂದರೆ, ಅದರ ಬಗ್ಗೆ ಉಲ್ಲೇಖ ಮಾಡಿದರೆ ಮಾಡಬಹುದು. 2003-04ರಲ್ಲಿ ಇದ್ದಂಥ ಪರಿಸ್ಥಿತಿಯನ್ನು 2006-07ರಲ್ಲಿ ಬದಲಾವಣೆ ಮಾಡಬೇಕೆಂದು Cabinet Sub Committee ರಚನೆಯಾಗಿತ್ತು. ಆ Sub Committee ಯಲ್ಲಿ ಹಿಂದೆ ಇದ್ದಷ್ಟೇ ಸಾಕು, ದರ ಪರಿಷ್ಕರಣೆ ಮಾಡುವುದು ಬೇಡ ಎಂದು ನಿಲ್ಲಿಸಿದ್ದರು. ನಾವು ಇತ್ತೀಚಿನ ದಿನಗಳಲ್ಲಿ ಈ ಬರ ಕಂಡುಕೊಂಡ ಮೇಲೆ ನಮಗೆ ಅನಿಸಿದ್ದು ಏನೆಂದರೆ, ದರ ಪರಿಷ್ಕರಣೆ ಮಾಡದಿದ್ದರೆ ಪಡೆದುಕೊಳ್ಳಲು ಸ್ವಲ್ಪ ಕಷ್ಟವಾಗಬಹುದು ಎನ್ನುವ ದೃಷ್ಟಿಯಲ್ಲಿ ದರ ಪರಿಷ್ಕರಣೆ ಮಾಡುವ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. ನಿಮಗೆ ಅದರ ಆದೇಶವನ್ನು ಕಳುಹಿಸಿಕೊಡುತ್ತೇನೆ. ದರ ಪರಿಷ್ಕರಣೆ ಮಾಡಿರುವುದು ದಿನಾಂಕ:5.12.2011. ಆದರೆ, ವಿರೋಧ ಪಕ್ಷದ ನಾಯಕರೆ, Scarcity ಗೆ ಅನುಗುಣವಾಗಿ ಕೆಲಸ ಮಾಡುವುದನ್ನು ಸರ್ಕಾರ ಮಾಡಿದೆ ಎಂದು ಹೇಳುತ್ತೇನೆ. ನೀವು ಎಲ್ಲದ್ದಕ್ಕೂ ಒಂದು ಸಲ ಕೇಳಿ. ಆಗ ಎಲ್ಲಾ ಸರಿಹೋಗುತ್ತದೆ. ನಾವು ಸುಮಾರು 15 ಗೋಶಾಲೆಗಳನ್ನು ತೆರೆಯುವ ದೃಷ್ಟಿಯಿಂದ ಈಗಾಗಲೇ ಚಿತ್ರದುರ್ಗದಲ್ಲಿ ಗೋಶಾಲೆ ಪ್ರಾರಂಭಿಸಿದ್ದೇವೆ. ಬಿಜಾಪುರದಲ್ಲಿ 3 ಗೋಶಾಲೆ ಪ್ರಾರಂಭಿಸಿದ್ದೇವೆ. ಗೋಶಾಲೆಗಳನ್ನು ಯಾರೇ ಮಾಡಲಿ ಗೋವುಗಳನ್ನು ರಕ್ಷಣೆ ಮಾಡುವುದು ನಮ್ಮ ಜವಾಬ್ದಾರಿ. ಅದಕ್ಕಾಗಿ ಬಿಜಾಪುರದ ಇಂಡಿ ತಾಲ್ಲೂಕಿನಲ್ಲಿ 3 ಗೋಶಾಲೆಗಳನ್ನು ಈಗಾಗಲೇ ಪ್ರಾರಂಭಿಸಿದ್ದೇವೆ. ಗುಲ್ಬರ್ಗಾ, ತುಮಕೂರು, ಗದಗದಲ್ಲಿ ಒಂದೊಂದು ಮತ್ತು ಇಂಡಿಯಲ್ಲಿ ಮೂರು, ಚಿತ್ರದುರ್ಗ ಸೇರಿದಂತೆ ಒಟ್ಟು 15 ಗೋಶಾಲೆಗಳನ್ನು ಪ್ರಾರಂಭಿಸಿದ್ದೇವೆ. ಅದಕ್ಕೆ ಬೇಕಾದ ಎಲ್ಲಾ ವ್ಯವಸ್ಥೆ ಮಾಡುವ ಕೆಲಸ ಮಾಡಿದ್ದೇವೆ. ಈಗ ಕೂಡ ಸರ್ಕಾರ ಬದ್ಧವಾಗಿದೆ. ಎಲ್ಲಾದರೂ ಗೋಶಾಲೆಗಳ ತುರ್ತು ಅವಶ್ಯಕತೆ ಇದ್ದರೆ, ಯಾವುದೇ ರೀತಿಯ ತೊಂದರೆಯಾಗದಂತೆ ತಕ್ಷಣ ಗೋಶಾಲೆ ತೆರೆಯುವುದಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. Fodder ಪರಿಸ್ಥಿತಿ ಅತ್ಯಂತ

ಚೆನ್ನಾಗಿದೆ. ಮುಂದಿನ ಸುಮಾರು ಆರೇಳು ವಾರಗಳಿಗೆ ಬೇಕಾದ fodder ಎಲ್ಲಾ ಜಿಲ್ಲೆಗಳಲ್ಲಿ ಲಭ್ಯವಿದೆ. ಗುಲಬರ್ಗಾದಲ್ಲಿ ಅವಶ್ಯವಿದ್ದರೆ ಗೋಶಾಲೆ ತೆರೆಯುವುದಕ್ಕೆ ಖಂಡಿತ ತಯಾರಿದ್ದೇವೆ.

ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್ : ಅಲ್ಲಿ ಅವಶ್ಯಕತೆ ಇದೆ.

ಶ್ರೀ ಡಿ.ವಿ. ಸದಾನಂದಗೌಡ : ಈಗಾಗಲೇ 87 ಲಕ್ಷದ 90 ಸಾವಿರದ 992 ಟನ್‌ನಷ್ಟು ಮೇವು stock ಇದೆ. ಎಲ್ಲಾ ಜಿಲ್ಲೆಗಳಲ್ಲಿ ಮೇವಿನ ಕೊರತೆ ಇರುವುದಿಲ್ಲ. ಏಳು ವಾರಗಳ ಮೇವು ಲಭ್ಯವಿದೆ. ಸುಮಾರು 5,066 ಜಾನುವಾರುಗಳನ್ನು ಸಂರಕ್ಷಿಸುವ ಕೆಲಸವನ್ನು ಈಗಾಗಲೇ ಮಾಡಿದ್ದೇವೆ. ಉದ್ಯೋಗ ಖಾತರಿ ಯೋಜನೆ ಬಗ್ಗೆ ಬಹಳಷ್ಟು ಚರ್ಚೆ ನಡೆದಿದ್ದನ್ನು ನಾವು ಕಂಡಿದ್ದೇವೆ. ಉದ್ಯೋಗ ಖಾತರಿ ಯೋಜನೆಯಿಂದ ಮಾತ್ರ, ಅವರಿಗೆ ಬೇರೆ ಯಾವುದೇ ಉದ್ಯೋಗಗಳನ್ನು ಕೊಡುವಂಥ ವ್ಯವಸ್ಥೆಗಳನ್ನು ಸರ್ಕಾರದಿಂದ ಮಾಡಲಿಲ್ಲವೆಂದು ಹೇಳಿದರು. ಇಗಾಗಲೇ ನಾವು ಜಿಲ್ಲಾಪಂಚಾಯತ್‌ಗಳಿಗೆ ಆದೇಶ ಕೊಟ್ಟಿದ್ದೇವೆ, ಇದನ್ನು ಅತ್ಯಂತ ಯಶಸ್ವಿಯಾಗಿ ಅನುಷ್ಠಾನ ಮಾಡಬೇಕೆಂದು ಗುಳೆ ಹೋಗದ ಹಾಗೆ ಎಲ್ಲಾ ಕಡೆ ಸಾಕಷ್ಟು ಲಭ್ಯವಿರುವ ಹಣವನ್ನು ಸದ್ವಿನಿಯೋಗ ಮಾಡುವ ಕೆಲಸವನ್ನು ಈಗಾಗಲೇ ಮಾಡಿದ್ದೇವೆ. ಇನ್ನು ನಮಗೆ ಸ್ವಲ್ಪಮಟ್ಟಿಗೆ ಮೇವಿನ ಕೊರತೆ ಆಗಲಿಕ್ಕೆ ಸಾಧ್ಯವಿಲ್ಲ. ಎಲ್ಲಾ ಕಡೆ ಕಟಾವು ಪ್ರಾರಂಭವಾಗಿದೆ. ಆದಕಾರಣ ಎಲ್ಲಾ ಕಡೆಗಳಿಂದ ನಾವು fodder ಗಳನ್ನು ಸಂಗ್ರಹಣೆ ಮಾಡಿ ಮೇವಿನ ಕೊರತೆಯನ್ನು ನೀಗಿಸುವಂಥ ಎಲ್ಲಾ ಜವಾಬ್ದಾರಿಗಳನ್ನು ತೆಗೆದುಕೊಳ್ಳುವ ಕೆಲಸಕಾರ್ಯಗಳನ್ನು ಮಾಡುತ್ತೇವೆ. ವಿಶೇಷವಾಗಿ ಕುಡಿಯುವ ನೀರಿನ ಬಗ್ಗೆ ಹೇಳುವುದಾದರೆ, ಬೇರೆ ಬೇರೆ ಕಡೆಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಇದೆ ಎನ್ನುವುದನ್ನು ಉಲ್ಲೇಖ ಮಾಡಿದ್ದಾರೆ. ಕುಡಿಯುವ ನೀರಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ರಾಜ್ಯ ಮತ್ತು ಕೇಂದ್ರ ವಲಯದ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಯೋಜನೆಯಿಂದ ಸುಮಾರು 27 ಸಾವಿರದ 765 ಕುಡಿಯುವ ನೀರಿಗೆ ಸಂಬಂಧಪಟ್ಟ ಕಾಮಗಾರಿಗಳನ್ನು ಸುಮಾರು 1500 ಕೋಟಿ ರೂಪಾಯಿಗಳಲ್ಲಿ ಕ್ರಿಯಾಯೋಜನೆ ಮಾಡಿ ಅದನ್ನು War-footing ನಲ್ಲಿ ತೆಗೆದು ಕೊಳ್ಳುವ ಕೆಲಸಕಾರ್ಯಗಳನ್ನು ನಮ್ಮ RDPR ಇಲಾಖೆ ಈಗಾಗಲೇ ಕೈಗೆತ್ತಿಕೊಂಡಿರುವುದನ್ನು ಗಮನಿಸಿದ್ದೀರಿ. ಈವರೆಗೆ ಸುಮಾರು 920 ಕೋಟಿ ರೂಪಾಯಿ ಬಿಡುಗಡೆ ಆಗಿದೆ. ಸುಮಾರು

270 ಕೋಟಿ ರೂಪಾಯಿ ವೆಚ್ಚವಾಗಿದೆ. ಅದನ್ನು ಮುಂದುವರಿಸುವ ಕೆಲಸ ಮಾಡುತ್ತಿದ್ದೇವೆ. 76 ಗ್ರಾಮಗಳಲ್ಲಿ ಕುಡಿಯುವ ನೀರಿಗೆ ತೀವ್ರ ಬರ ಬಂದಿದೆ. ಟ್ಯಾಂಕರುಗಳ ಮೂಲಕ ನೀರು ಕೊಡುವ ವ್ಯವಸ್ಥೆ ಮಾಡುತ್ತಿದ್ದೇವೆ. ಇತರೆ ಮೂಲಗಳಿಂದ ಕೂಡ ನೀರು ಪಡೆದುಕೊಳ್ಳಲಿಕ್ಕೆ ಎಲ್ಲಾ ಪ್ರಯತ್ನ ಮಾಡುತ್ತಿದ್ದೇವೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಯಿಂದ ಸುಮಾರು 122.04 ಕೋಟಿ ರೂಪಾಯಿ ಮೊತ್ತದ ಇನ್ನೊಂದು ಕ್ರಿಯಾ ಯೋಜನೆಯನ್ನು ತಯಾರಿಸಿದ್ದೇವೆ. ಅದರಲ್ಲಿ 52 ಕೋಟಿ ರೂಪಾಯಿ ಹೆಚ್ಚುವರಿ ಅನುದಾನವನ್ನು ಶಾಸಕರ ಅಧ್ಯಕ್ಷತೆಯಲ್ಲಿರುವ Task-Force ಗೆ ತುರ್ತಾಗಿ ಕುಡಿಯುವ ನೀರಿಗೆ ವೆಚ್ಚ ಮಾಡಲಿಕ್ಕೆ ಕೊಟ್ಟಿದ್ದೇವೆ. ಇನ್ನೂ ಹೆಚ್ಚಿನ ಹಣದ ಅವಶ್ಯಕತೆ ಇರುವ ಕಡೆ ಬಿಡುಗಡೆ ಮಾಡಲಿಕ್ಕೆ ತಯಾರಿದ್ದೇವೆ. Bore well ಬೇಕು ಎಂದು ಭಾರೀ ಬೇಡಿಕೆ ಬಂದಿದೆ. CRF guidelines ಆಧಾರದಲ್ಲಿ borewell ಗಳನ್ನು ಎಲ್ಲೆಲ್ಲಿ ಕೊರೆಯಲಿಕ್ಕೆ ಸಾಧ್ಯವಾಗುವುದಿಲ್ಲ ಅಂಥ ಕಡೆ ರಾಜ್ಯಸರ್ಕಾರ ಈಗಾಗಲೇ ಬಿಡುಗಡೆಯಾದ 52 ಕೋಟಿ ರೂಪಾಯಿಗಳಲ್ಲಿ borewell ಬೇಕೆಂದು ಅತ್ಯಂತ ತುರ್ತು ಅವಶ್ಯಕತೆ ಎಲ್ಲಿದೆ, ಅಲ್ಲಿ borewell ಕೊರೆಯಬಹುದು ಎನ್ನುವ ಸೂಚನೆ ಗಳನ್ನು ಈಗಾಗಲೇ ಕೊಡಲಾಗಿದೆ. ಬೇರೆ ಬೇರೆ ಜಿಲ್ಲೆಗಳಿಂದ ಅತೀ ದೊಡ್ಡ ಅವಶ್ಯ ಇದ್ದಲ್ಲಿ borewell ಕೊರೆಯಬೇಕೆಂದರೆ 36 ಕೋಟಿ ರೂಪಾಯಿ ನಮ್ಮಲ್ಲಿದ್ದು, ಆ ಹಣವನ್ನು ಬಿಡುಗಡೆ ಮಾಡಿ ಜಿಲ್ಲಾಧಿಕಾರಿಗಳಿಗೆ ಕೊಟ್ಟು borewell ಕೊರೆಸಲಿಕ್ಕೆ ಕೂಡ ನಾವು ತಯಾರಿದ್ದೇವೆ. ತುರ್ತು ಅವಶ್ಯಕತೆ ಇದ್ದ ಕಡೆ ಎಲ್ಲಿ ಬೇಕಾದರೂ ಕೊಡುವ ಪ್ರಯತ್ನ ಮಾಡುತ್ತೇವೆ. ಹಲವಾರು ಜನವಸತಿಗಳಲ್ಲಿ ಈಗಾಗಲೇ ಸುಮಾರು 2590 ಕೋಟಿ ರೂಪಾಯಿ ಅಂದಾಜಿನ ಸುಮಾರು 217 ರಾಜ್ಯ ಮಟ್ಟದ ಯೋಜನೆಗಳಿಗೆ ಈಗಾಗಲೇ ಮಂಜೂರಾತಿ ಕೊಟ್ಟು ಅದನ್ನು War-footingನಲ್ಲಿ ತೆಗೆದುಕೊಳ್ಳುವ ಕಾರ್ಯವನ್ನು ಮಾಡುತ್ತಿದ್ದೇವೆ. ಪ್ರಸಕ್ತ ಸಾಲಿನಲ್ಲಿ ನಾವು ಸುಮಾರು 85.25 ಕೋಟಿ ರೂಪಾಯಿಗಳನ್ನು ಜಿಲ್ಲಾಧಿಕಾರಿಗಳಿಗೆ ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಅವರ PD account ನಲ್ಲಿ ಸಾಕಷ್ಟು ಹಣ ಲಭ್ಯವಿರುವ ಕಾರಣ ಎಲ್ಲಿ ತುರ್ತು ಅವಶ್ಯಕತೆ ಇದೆ, ಅಲ್ಲಿಗೆ ಅವರಿಂದ ಕೋರಿಕೆ ಬಂದ ತಕ್ಷಣ ಹಣ ಬಿಡುಗಡೆ ಮಾಡುವ ಕೆಲಸವನ್ನು ಮಾಡುತ್ತಿದ್ದೇವೆ ನೀರಾವರಿ

ಪ್ರದೇಶದಲ್ಲಿ ಜಾನುವಾರುಗಳಿಗೆ ಹಸಿರು ಮೇವು ಸಿಗಲು ಅದನ್ನು ಬೆಳೆಯಲು ರೈತರಿಗೆ ಸುಮಾರು 42 ಲಕ್ಷ ರೂಪಾಯಿ ಮೊತ್ತದ ಮೇವಿನ ಬೀಜಗಳನ್ನು ಉಚಿತವಾಗಿ ಸರಬರಾಜು ಮಾಡುವ ಕೆಲಸವನ್ನು ಈಗಾಗಲೇ ಮಾಡಿದ್ದೇವೆ. Monitoring ಮಾಡುವ ಕೆಲಸ ನಮ್ಮ ಕಡೆಯಿಂದ ಅತ್ಯಂತ ಯಶಸ್ವಿಯಾಗಿ ನಡೆಯುತ್ತಿದೆ. ದಿನಾಂಕ: 15.10.2011 ರಂದು Video Conference ಮೂಲಕ ಜಿಲ್ಲಾಧಿಕಾರಿಗಳ ಜೊತೆ, ಅಲ್ಲಿಯ ಜಿಲ್ಲಾ ಅಧಿಕಾರಿಗಳ ಜೊತೆ ಅಲ್ಲಿಯ ಪರಿಹಾರ ಕಾರ್ಯಕ್ರಮಗಳ ಬಗ್ಗೆ ಸೂಕ್ತ ಆದೇಶವನ್ನು ಕೊಡುವಂಥದ್ದು ಮತ್ತು ವಿಚಾರಗಳನ್ನು ತಿಳಿದುಕೊಳ್ಳುವ ಕೆಲಸಕಾರ್ಯಗಳನ್ನು ಮಾಡಿದ್ದೇವೆ. ದಿನಾಂಕ: 18.11.2011ರಲ್ಲಿ ಕೂಡ ಈ ರೀತಿ Video Conference ಮೂಲಕ monitor ಮಾಡಿದ್ದೇವೆ. ಪ್ರತಿ ಗುರುವಾರ ನಾವು ಬರ ಪರಿಸ್ಥಿತಿ ಬಗ್ಗೆ ಬೇರೆ ಬೇರೆ ಜಿಲ್ಲೆಯ ಅಧಿಕಾರಿಗಳ ಜೊತೆ ಮಾತನಾಡಿ ಅಲ್ಲಿಂದ ವರದಿ ತರಿಸಿಕೊಂಡು ಆ ವರದಿಗಳ ಆಧಾರದ ಮೇಲೆ ಆ ಭಾಗದಲ್ಲಿನ ಕೆಲಸವನ್ನು ಮಾಡಿದ್ದೇವೆ. ಉದ್ಯೋಗ ಖಾತರಿ ಯೋಜನೆಯಲ್ಲಿ ಒಟ್ಟು 1,62,634 ಕಾಮಗಾರಿಗಳನ್ನು ಈಗಾಗಲೇ ಪ್ರಾರಂಭವಾಗಿವೆ. ಸುಮಾರು 15,014 ಕಾಮಗಾರಿಗಳು ಪೂರ್ಣಗೊಂಡಿವೆ. 1,47,620 ಕಾಮಗಾರಿಗಳನ್ನು ಚಾಲನೆಯಲ್ಲಿವೆ. ಒಟ್ಟು 1,083 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಈವರೆಗೆ 627.54 ಕೋಟಿ ರೂಪಾಯಿ ವೆಚ್ಚವಾಗಿದೆ. ಇನ್ನೂ ಕೂಡ ಸುಮಾರು 456 ಕೋಟಿ ರೂಪಾಯಿ ಬೇರೆ ಬೇರೆ ಜಿಲ್ಲೆಯಲ್ಲಿ ಉದ್ಯೋಗ ಖಾತರಿ ಯೋಜನೆಯಲ್ಲಿ ಈಗಾಗಲೇ ಲಭ್ಯವಿದೆ. ಅದನ್ನು ಸದ್ವಿನಿಯೋಗ ಮಾಡುವ ಕೆಲಸ ಮಾಡುತ್ತೇವೆ. ರಾಜ್ಯ ಸರ್ಕಾರ ಒಟ್ಟಾರೆಯಾಗಿ ಬಿಡುಗಡೆ ಮಾಡಿದ ಹಣದ ವಿವರ ಕೂಡ ಸದನದ ಮುಂದಿಡುವುದಕ್ಕೆ ಬಯಸುತ್ತೇನೆ. ಕಂದಾಯ ಇಲಾಖೆಯಿಂದ ಸುಮಾರು ರೂ.89.25 ಕೋಟಿಗಳು. ಆರ್.ಡಿ.ಪಿ.ಆರ್. ನಿಂದ ಸುಮಾರು ರೂ.52 ಕೋಟಿಗಳು. ಕೃಷಿ ಇಲಾಖೆಯಿಂದ ಸುಮಾರು ರೂ.42 ಲಕ್ಷ, ಕುಡಿಯುವ ನೀರಿಗೆಂದು ಮೀಸಲಿಟ್ಟ ವಿಶೇಷ ಹಣ ಸುಮಾರು ರೂ.36 ಕೋಟಿಗಳು. ಈಗ ಜಿಲ್ಲಾಧಿಕಾರಿಗಳ ಪಿ.ಡಿ.ಅಕೌಂಟ್‌ನಲ್ಲಿ ಸುಮಾರು ರೂ.153.49 ಕೋಟಿ. NREG ಯಲ್ಲಿ ಈಗಾಗಲೇ ಹೇಳಿದ ಹಾಗೆ ರೂ.456 ಕೋಟಿ. ಇವೆಲ್ಲವೂ ಅಲ್ಲಿ ಈಗಾಗಲೇ ಲಭ್ಯವಿರುವುದನ್ನು ನಾವು ಕಾಣುತ್ತಿದ್ದೇವೆ. ಇಲ್ಲಿ ಮತ್ತೊಂದು ವಿಚಾರ ಪ್ರಸ್ತಾಪವಾಗಿರುವುದನ್ನು ವಿಮಾ ಯೋಜನೆಯ ಬಗ್ಗೆ

ಪ್ರಮುಖವಾಗಿ ಪ್ರಸ್ತಾಪವಾಗಿದೆ. ರಾಷ್ಟ್ರೀಯ ಕೃಷಿ ವಿಮಾ ಯೋಜನೆ ಇದು ಅತ್ಯಂತ ಯಶಸ್ವಿಯಾಗಿ ಅನುಷ್ಠಾನವಾಗುತ್ತಿಲ್ಲ ಎನ್ನುವ ಮಾತುಗಳು ಕೂಡ ಕೇಳಿ ಬಂದಿವೆ. ಆದರೆ, ನಮಗೆ 3-4 ವರ್ಷಗಳ ವಿಚಾರಗಳನ್ನು ನೋಡಿದರೆ ಎಷ್ಟೆಷ್ಟು ಏನೇನಾಗಿದೆ ಎಂಬುದು ಗೊತ್ತಾಗುತ್ತದೆ. ಎಲ್ಲರಲ್ಲೂ ಇರುವಂಥದ್ದು ಕಳೆದ ಬಾರಿ ಬಾರಿ ಕಡಿಮೆ ನಷ್ಟ ಪರಿಹಾರ ವಿಮಾ ಯೋಜನೆಯಲ್ಲಿ ಆಗಿದೆ ಎಂದು ಇದೆ. ಕಳೆದ ವರ್ಷ ಬಹಳ ಒಳ್ಳೆಯ ಬೆಳೆ ನಮಗೆ ಸಿಕ್ಕಿದೆ. ಅದಕ್ಕಾಗಿ ರಾಷ್ಟ್ರೀಯ ಪ್ರಶಸ್ತಿಗಳು ನಮ್ಮ ರಾಜ್ಯಕ್ಕೆ ಬಂದಿರುವಂಥದ್ದನ್ನು ತಾವೆಲ್ಲಾ ಕಂಡಿದ್ದೀರಿ. ಆದಕಾರಣ, ಕಳೆದ ವರ್ಷ ವಿಮಾ ನಷ್ಟ ಪರಿಹಾರ ಕಡಿಮೆಯಾಗಿದೆ. 200708, 2008-09, 2009-10 ನ್ನು ಗಮನಿಸಿದಾಗ ರೈತರು ಇದನ್ನು ಎಷ್ಟರ ಮಟ್ಟಿಗೆ ವಿನಿಯೋಗ ಮಾಡಿಕೊಳ್ಳುತ್ತಿದ್ದಾರೆಂದು ನಮಗೆ ಗೊತ್ತಾಗುತ್ತದೆ. 2007-08 ರಲ್ಲಿ ಸುಮಾರು 6.37 ಲಕ್ಷ ರೈತರು ಸುಮಾರು 28 ಕೋಟಿಯಷ್ಟು ವಿಮಾ ಮೊತ್ತವನ್ನು ಪಡೆದುಕೊಂಡಿದ್ದರೆ, 2008-09 ರಲ್ಲಿ 149.64 ಕೋಟಿ ವಿಮಾ ಪರಿಹಾರವನ್ನು ರೈತರು ಪಡೆದುಕೊಂಡಿದ್ದಾರೆ. 2009-10 ರಲ್ಲಿ ಅದು 183.58 ಕೋಟಿಗೆ ಹೋಗಿದೆ. ಇದರ ಅರ್ಥ ರೈತರಿಗೆ ಇದನ್ನು ಅತ್ಯಂತ ಯಶಸ್ವಿಯಾಗಿ ಸದ್ವಿನಿಯೋಗ ಮಾಡಿಕೊಳ್ಳಲಿಕ್ಕೆ ಬೇಕಾದ ಎಲ್ಲಾ ಪೂರಕವಾದ ಕೆಲಸಗಳನ್ನು ಸರ್ಕಾರ ಮಾಡಿದೆ. ಈ ವರ್ಷದಲ್ಲಿ ಇದು 183 ಕೋಟಿ ಇರುವುದು 200 ರಿಂದ 225 ಕೋಟಿಗೂ ಹೋಗಲಿಕ್ಕೆ ಸಾಧ್ಯವಿದೆ. ಏಕೆಂದರೆ, ಕಟಾವು ಆದ ಮೇಲೆ ಬೆಳೆ ನಷ್ಟದ ಬಗ್ಗೆ ಗೊತ್ತಾಗುತ್ತದೆ. ಹೀಗಾಗಿ 50% ಗಿಂತ ಜಾಸ್ತಿ ಡ್ಯಾಮೇಜ್ ಆದಂಥ ಎಲ್ಲಾ ಕಡೆ ಇದು ಅನ್ವಯವಾಗುತ್ತದೆ. ಹೀಗೆ ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಲ್ಲಿ ಮುಂಗಾರು ಹಂಗಾಮಿನಲ್ಲಿ 25 ಜಿಲ್ಲೆಗಳಲ್ಲಿ 25 ಬೆಳೆಗಳಿಗೆ ಇದನ್ನು ವಿಸ್ತರಿಸುವ ಕೆಲಸ ಮಾಡಲಾಗಿದೆ. ಈ ಎಲ್ಲಾ ನಷ್ಟಗಳನ್ನು ಏನೆಂದರೆ, ಕ್ರಾಪ್ ಲಾಸ್ ಆಗಿದ್ದಕ್ಕೆ ಪರಿಹಾರ ಕೊಡಲಿಲ್ಲವೆನ್ನುವ ಈ ಒಂದು ಪ್ರಶ್ನೆ ಎಲ್ಲರ ಕಡೆಯಿಂದ ಬಂದಿದೆ. ಕ್ರಾಪ್ ಲಾಸ್ ಆಗಿದ್ದಕ್ಕೆ ಪರಿಹಾರ ಕೊಡಬೇಕು ಎನ್ನುವುದು ಸರ್ಕಾರದ ಇರಾದೆ ಇದೆ. ಆದರೆ, ಎಲ್ಲವೂ ಕೂಡ ಕೇಂದ್ರದಿಂದ ನಮಗೆ ಬರುವಂಥ ಪರಿಹಾರಗಳು ಬಂದಾಗ, ಆ ಎಲ್ಲಾ ವರದಿಗಳು ನಮಗೆ ಸಿಕ್ಕಿದ ಮೇಲೆ ನಾವು ಅದನ್ನು ಮಾಡುವ ಕೆಲಸ ಮಾಡುತ್ತೇವೆ. ಇವತ್ತು ಕೇಂದ್ರದ ಟೀಂ ಬರುತ್ತದೆ. ಇವತ್ತು ನಾಳೆ ಬರಪೀಡಿತ ಪ್ರದೇಶಗಳಲ್ಲಿ ಹೋಗಿ ಎಲ್ಲವನ್ನೂ ಅಧ್ಯಯನ ಮಾಡಿ ಅವರು ವರದಿ ಕೊಟ್ಟ ನಂತರ, ನಾವು ಕೂಡ ನಮ್ಮ ರಾಜ್ಯದ ಟೀಂ ಇದರಲ್ಲಿ ವಿಪಕ್ಷದ ನಾಯಕರು

ಎಲ್ಲರನ್ನೂ ಕೇಳಿಕೊಂಡು ಕೇಂದ್ರದಲ್ಲಿ ಇನ್ನಷ್ಟು ಬೇಡಿಕೆ ಇಡುವಂಥ ಕೆಲಸ ಮಾಡುತ್ತೇವೆ. ಅಕ್ಟೋಬರ್ ಅಂತ್ಯಕ್ಕೆ ಸುಮಾರು ರೂ.4,514 ಕೋಟಿ ನಷ್ಟವಾಗಿರುತ್ತದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಕೇಂದ್ರ ಸರ್ಕಾರಕ್ಕೆ ರೂ.723.24 ಕೋಟಿ ನೆರವು ಕೇಳಿ ಈಗಾಗಲೇ ನಮ್ಮ ವರದಿ ಕಳುಹಿಸಿದೆ. ಈ ಅಧ್ಯಯನದ ತಂಡ ವರದಿ ನೀಡಿದ ಬಳಿಕ ಮುಂದಿನ ಕೆಲಸ-ಕಾರ್ಯಗಳನ್ನು ನಾವು ಮಾಡುತ್ತೇವೆ. ಸಾಧಾರಣವಾಗಿ ಬೆಳೆ ನಷ್ಟವಾಯಿತು, ಇದಕ್ಕೆ ಪರಿಹಾರ ಕೊಡಬೇಕೆಂದರೆ, ಇದು ಫ್ಲಡ್‌ನಲ್ಲಿ ಆದರೆ ಮನೆ ಬಿದ್ದಿದ್ದು ಗೊತ್ತಾದ ತಕ್ಷಣ ಕೊಡಲಿಕ್ಕಾಗುತ್ತದೆ. ಆದರೆ, ಬರದಲ್ಲಿ ಬೆಳೆ ನಷ್ಟದ ಬಗ್ಗೆ ಅಸೆಸ್ ಮಾಡಬೇಕಾಗುತ್ತದೆ, ಹೀಗಾಗಿ ಇದನ್ನು ಮುಂದಿನ ದಿವಸಗಳಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಬಹುದು. ಕಳೆದ 11 ವರ್ಷಗಳಲ್ಲಿ ಸುಮಾರು ಒಂದು ಲಕ್ಷ ಕೋಟಿ ರೂಪಾಯಿ ನಷ್ಟವಾಗಿದೆ ಎಂದು ಮಾನ್ಯ ಸಿದ್ಧರಾಮಯ್ಯನವರು ಸದನದಲ್ಲಿ ಉಲ್ಲೇಖಿಸಿದರು. ನಾವು ಎಲ್ಲಾ ಅಂಕಿಅಂಶಗಳನ್ನು ತೆಗೆದುಕೊಂಡರೆ, ಕಳೆದ 11 ವರ್ಷಗಳಲ್ಲಿ ಹತ್ತು ಬಾರಿ ಬರ ಮತ್ತು 12 ಬಾರಿ ಅತಿವೃಷ್ಟಿಯಾಗಿದೆ. ಇವುಗಳ ಪರಿಹಾರಕ್ಕೆ ಕೇಂದ್ರ ಸರ್ಕಾರಕ್ಕೆ ಒಟ್ಟು ರೂ.28,742 ಕೋಟಿಗಳ ನೆರವನ್ನು ರಾಜ್ಯದ ವತಿಯಿಂದ ಕೇಳಲಾಗಿತ್ತು. ಆದರೆ, ನಮಗೆ ಲಭ್ಯವಾಗಿರುವುದು ಕೇವಲ 10.6% ಮಾತ್ರ. ಅಂದರೆ, ಸುಮಾರು ರೂ.3,414 ಕೋಟಿ ಮಾತ್ರ ರಾಜ್ಯಕ್ಕೆ ಬಂದಿದೆ. ಆದಕಾರಣ, ಒಂದು ಲಕ್ಷ ಕೋಟಿ ಲುಕ್ಸಾನು ಆಗಿದೆ ಎಂದು ಹೇಳುವಂಥದ್ದು ಅದು ಸ್ವಲ್ಪ ದೊಡ್ಡ ಮಾತು ಎಂದು ನಾನು ಭಾವಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ನಾನೇನು ಹೇಳಿದೆ ಎಂದರೆ, ಕಳೆದ 11 ವರ್ಷಗಳಲ್ಲಿ ಎಷ್ಟು ನಷ್ಟವಾಗಿದೆ ಎಂದು ನೀವೇ ಹೇಳಿದಿರಿ. ಅದನ್ನು ನೀವು ಕೇಂದ್ರ ಸರ್ಕಾರಕ್ಕೆ 11 ವರ್ಷಗಳಲ್ಲಿ ಮೆಮೊರ್‍ಯಾಂಡಂ ಮೂಲಕ ಕೊಟ್ಟಿದ್ದೀರಿ. ಅದು ವಾಸ್ತವಿಕವಾಗಿ ಲೆಕ್ಕ ಹಾಕಿದರೆ CRF norms ಪ್ರಕಾರ ಲೆಕ್ಕ ಹಾಕುವುದು ಒಂದು ನಷ್ಟ. Actual loss ಇನ್ನೊಂದು. Actual loss ಹೇಗೆ ಆಗುತ್ತದೆಂದರೆ, ನೀವೇ ಸರ್ಕಾರ ದವರು ಅದರ ಎರಡೂವರೆಪಟ್ಟು ಹೆಚ್ಚು ನಷ್ಟವಾಗಿರುತ್ತದೆಂದು ಹೇಳಿದ್ದೀರಿ. ಅದನ್ನು ನಾನು ಹೇಳಿಲ್ಲ. ಅದನ್ನು ಲೆಕ್ಕ ಹಾಕಿದರೆ it comes to about more then Rs.80,000 crores. ಇವರು ಕೇಂದ್ರ ಸರ್ಕಾರಕ್ಕೆ ಕೊಟ್ಟಿರುವ ಮೆಮೊರ್‍ಯಾಂಡಂನ ಪುಟ ಸಂಖ್ಯೆ: 18 ರಲ್ಲಿ ಈ ರೀತಿ ಇದೆ. 'The losses

estimated due to drought and floods during 2001-2009 is Rs.27,698 crore as per CRF guidelines.' ಇವರೇ ಹೇಳಿದ್ದಾರೆ, ನಾನಲ್ಲ. crores. 'And during 2010 the moss caused due to flood is Rs.1045 crore as per CRF guidelines. But the total loss is about 2.5 times the damages assessed as per the CRF and NCCF norms.' ಅವರೇ ಇದನ್ನು ಹೇಳಿರುವುದು. ಅದು ಎರಡೂವರೆ ಪಟ್ಟು ಎಂದರೆ about 40,000 X 2.5 times ಅಂದರೆ ಒಂದು ಲಕ್ಷ ಕೋಟಿ ಆಗುತ್ತದೆಂದು ನಾನು ಹೇಳಿದ್ದು. This is the statement made by the Government itself in their Memorandum submitted to the Government of India.

ಶ್ರೀ ಡಿ.ವಿ ಸದಾನಂದ ಗೌಡ : ಕೇಂದ್ರ ಸರ್ಕಾರಕ್ಕೆ ಕಳುಹಿಸಿರುವ ನಮ್ಮ ವರದಿಯಲ್ಲಿ ಎಷ್ಟು ಲುಕ್ಸಾನು ಆಗಿದೆ ಎಂದು ಅಂಕಿಅಂಶಗಳಲ್ಲಿ ಸ್ಪಷ್ಟವಾಗಿ mention ಮಾಡಿದ್ದೇವೆ. ಈಗಾಗಲೇ ನಾವು ಲುಕ್ಸಾನು ಆಗಿರುವ ಬಗ್ಗೆ ಪ್ರಸ್ತಾಪಿಸಿದ್ದೇವೆ. ಅಸೆಸ್‌ಮೆಂಟ್ ಅನ್ನು ನಾವು ಅಂಕಿಅಂಶಗಳ ಕಾರಣ ಕೊಟ್ಟಿದ್ದೇವೆ. Indirect ಆಗಿ Actual losses ಏನು ಎಂದು ಅಸೆಸ್‌ಮೆಂಟ್ ಮಾಡುವ ಕೆಲಸಗಳನ್ನು ನಮ್ಮ ಸರ್ಕಾರ ಮಾಡಿದೆ.

SRI SIDDARAMAIAH : Why I have intervened ಅಂದರೆ, it is imaginary, it is exaggeration ಎಂದು ಹೇಳಿದ್ದೀರಲ್ಲಾ, it is not at all an exaggeration. It is actual. That is what you said in your memorandum.

SRI D.V. SADANANDA GOWDA : Cost of cultivation is to be taken into consideration while calculating. That has been done by my Government. ಇನ್ನು ವಿಶೇಷವಾಗಿ ರೈತರ ಆತ್ಮಹತ್ಯೆಯ ಬಗ್ಗೆ ಪ್ರಸ್ತಾಪವಾಗಿದೆ. ರೈತರ ಆತ್ಮಹತ್ಯೆಗೆ ಕಾರಣವಾಗುತ್ತಿದೆ. ರಾಜ್ಯ ಸರ್ಕಾರ ರೈತರ ಪರವಾಗಿ ಏನೂ ಕೆಲಸ ಮಾಡುತ್ತಿಲ್ಲ, ಇದಕ್ಕಾಗಿ ರೈತರು ಆತ್ಮಹತ್ಯೆಗೆ ಹೆಚ್ಚೆಚ್ಚು ಶರಣಾಗುತ್ತಾರೆಂದು ಯಾವುದೋ ಒಂದು ಮಾಧ್ಯಮದ ಆಧಾರದ ಮೇಲೆ ಇಲ್ಲಿ ಪ್ರಸ್ತಾಪಿಸಿದರು. ನಮ್ಮಲ್ಲಿರುವ ಅಂಕಿಅಂಶಗಳ ಪ್ರಕಾರ, ಕರ್ನಾಟಕದಲ್ಲಿ 2008 ರಲ್ಲಿ 337 ಆತ್ಮಹತ್ಯೆಗಳಾಗಿವೆ. 2009ರಲ್ಲಿ 290 ಆತ್ಮಹತ್ಯೆಗಳಾಗಿವೆ. 2010ರಲ್ಲಿ 242 ಆತ್ಮಹತ್ಯೆಗಳಾಗಿವೆ. 2011ರಲ್ಲಿ 87 ಆತ್ಮಹತ್ಯೆಗಳಾಗಿವೆ. ಹೀಗಾಗಿ ನಮಗೆ ಗೊತ್ತಿದೆ. ನಾವು

ಮಾಡಿದ್ದಲ್ಲ. ಬಹಳ ಹಿಂದಿನ ದಿನಗಳಲ್ಲಿ ಹಿಂದೆ ಇದ್ದ ಸರ್ಕಾರಗಳು ರೈತರ ಆತ್ಮಹತ್ಯೆಯ ಬಗ್ಗೆ ವಿಶ್ಲೇಷಣೆ ಮಾಡುವುದಕ್ಕೆ Assistant Commissioner ರವರ ನೇತೃತ್ವದಲ್ಲಿ ಒಂದು ಸಮಿತಿ ರಚನೆಯಾಗಿ, ಆತ್ಮಹತ್ಯೆ ಮಾಡಿಕೊಂಡ ರೈತರೆಲ್ಲಾ ಈ ಒಂದು ಸಾಲದಿಂದಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆಯೇ ಎಂದು ವೆರಿಫಿಕೇಷನ್ ಮಾಡಿ ಅವರಿ ವರದಿ ಕೊಡಬೇಕೆಂದು ಒಂದು ಸಮಿತಿಯನ್ನು ರಚಿಸಲಾಗಿತ್ತು. ಆ ಕಮಿಟಿಯವರು ಕೊಟ್ಟ ಅಂಕಿಅಂಶಗಳ ಪ್ರಕಾರ ಗಣನೀಯವಾಗಿ ಕರ್ನಾಟಕ ರಾಜ್ಯದಲ್ಲಿ ರೈತರ ಆತ್ಮಹತ್ಯೆಗಳು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿವೆ. ಕಾರಣಗಳು ಏನೆಂಬುದು ನಿಮಗೆ ಗೊತ್ತಿದೆ. ನಮ್ಮ ಸರ್ಕಾರ ಬಂದ ಮೇಲೆ ರೈತರ ಪರವಾಗಿ ಏನೆಲ್ಲ ಮಾಡಿದೆ ಎಂಬುದನ್ನು ನಾನೇನು ಉಲ್ಲೇಖ ಮಾಡಬೇಕಾಗಿಲ್ಲ, ಇದು ಜಗತ್ತಿಗೆ ಗೊತ್ತಿರುವಂಥ ಸಂಗತಿಗಳಾಗಿರುವುದರಿಂದ ಅದನ್ನು ಇಲ್ಲಿ ಮತ್ತೆ ಉಲ್ಲೇಖ ಮಾಡತಕ್ಕಂಥ ಅವಶ್ಯಕತೆ ಇಲ್ಲ. 1% ಬಡ್ಡಿ ದರದಲ್ಲಿ ಸಾಲ ಕೊಟ್ಟು ಸಾಲದ ಶೂಲದಿಂದ ಹೊರಕ್ಕೆ ಬರಬೇಕೆಂಬ ಉದ್ದೇಶದಿಂದ ಮಾಡಲಾಗಿದೆ. ಮತ್ತೆ ಸುವರ್ಣಭೂಮಿ ಯೋಜನೆ ಜಾರಿಗೆ ತಂದಿದ್ದೇವೆ. ಮತ್ತೆ ಉಚಿತ ವಿದ್ಯುತ್ ಕೊಟ್ಟಿದ್ದೇವೆ. ಪ್ರತಿಯೊಬ್ಬ ರೈತ ಕೂಡ ಸ್ವಾಭಿಮಾನಿಯಾಗಿ ಬದುಕಬೇಕೆಂಬ ದೃಷ್ಟಿಯಿಂದ ಸರ್ಕಾರ ಹತ್ತು ಹಲವು ಕೆಲಸಕಾರ್ಯಗಳನ್ನು ಮಾಡಿ ಒಂದು ರೀತಿಯಲ್ಲಿ ಆತನಿಗೆ ಆತ್ಮಾಭಿಮಾನ ಹುಟ್ಟಿಸಿದೆ. ಇದರಿಂದ ಆತನು ಆತ್ಮಹತ್ಯೆಗೆ ಶರಣಾಗುವುದರಿಂದ ದೂರ ಮಾಡುವ ಕೆಲಸಕಾರ್ಯಗಳಲ್ಲಿ ನಮ್ಮ ಸರ್ಕಾರ ಯಶಸ್ವಿಯಾಗಿದೆ. ಇವತ್ತಿನ ದಿವಸ ಈ ದೇಶದಲ್ಲಿರುವ ಯಾವುದೇ ರಾಜ್ಯ ಸರ್ಕಾರಗಳು ಇಷ್ಟು ದೊಡ್ಡ ಪ್ರಮಾಣದಲ್ಲಿ ರೈತರ ಪರವಾಗಿ ನಿಂತು ಆತನ ಕಷ್ಟ ಸುಖದಲ್ಲಿ ಭಾಗಿಯಾಗುವಂಥ ಕೆಲಸಗಳನ್ನು ಮಾಡುತ್ತಿಲ್ಲ. ಇವತ್ತಿನ ದಿವಸ ನಿಮಗೆಲ್ಲ ಗೊತ್ತಿರುವ ಹಾಗೆ ಆಂಧ್ರ ಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿ ಇಲ್ಲಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಆತ್ಮಹತ್ಯೆಗಳು ಆಗುತ್ತಿರುವುದನ್ನು ನಾವು ಕಂಡಿದ್ದೇವೆ. ನಮ್ಮ ರಾಜ್ಯಕ್ಕೆ ಹೋಲಿಕೆ ಮಾಡಿದರೆ, ಮಹಾರಾಷ್ಟ್ರದಲ್ಲಿ 2008ನೇ ಸಾಲಿನಲ್ಲಿ 735, 2009ರಲ್ಲಿ 550, 2010 ರಲ್ಲಿ 454 ಮತ್ತು 2011 ರಲ್ಲಿ 123 ಆತ್ಮಹತ್ಯೆಗಳಾಗಿವೆ ಎಂದು ಅಲ್ಲಿನ ಸರ್ಕಾರ ವರದಿ ಮಾಡಿರುವಂಥ ಅಧಿಕೃತ ದಾಖಲೆ ಇದಾಗಿದೆ. ಮತ್ತೆ ಆಂಧ್ರ ಪ್ರದೇಶದಲ್ಲಿ 2008ರಲ್ಲಿ 469, 2009 ರಲ್ಲಿ 297, 2010ರಲ್ಲಿ 181 ಆತ್ಮಹತ್ಯೆ ಆಗಿರುವಂಥದ್ದು ಅಲ್ಲಿನ ದಾಖಲೆಗಳ ಮುಖಾಂತರ ನಮಗೆ ಸಿಕ್ಕಿವೆ. ಸನ್ಮಾನ್ಯ ಸಿದ್ದರಾಮಯ್ಯನವರು ಒಂದಿಷ್ಟು ವಿಚಾರಗಳನ್ನು ಬೇರೆ ಬೇರೆ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದ್ದಾರೆ.

ತುಂಬಾ ತಡವಾಗಿ ಬರಗಾಲ ಘೋಷಣೆ ಮಾಡಿದ್ದೀರಿ, ಇದಕ್ಕಿಂತ ಮುಂಚಿತವಾಗಿಯೇ ಘೋಷಣೆ ಮಾಡಬೇಕಾಗಿತ್ತೆಂಬ ಮಾತನ್ನು ಹೇಳಿದ್ದಾರೆ. ಆದರೆ, ಕೇಂದ್ರ ಸರ್ಕಾರದ ಗೈಡ್‌ಲೈನ್ಸ್ ಮತ್ತು ಇತರೆ ವಿಷಯಗಳ ಆಧಾರದಲ್ಲಿ ಸಾಮಾನ್ಯವಾಗಿ ಅಕ್ಟೋಬರ್ ತಿಂಗಳಲ್ಲಿ ಘೋಷಣೆ ಮಾಡಲಾಗುತ್ತದೆ. ಸೆಪ್ಟೆಂಬರ್ ತಿಂಗಳವರೆಗೆ ಆಗಿರುವ ಮಳೆ ಮತ್ತು ತೇವಾಂಶದ ಕೊರತೆಯನ್ನು ನೋಡಿಕೊಂಡು ಮಾಡತಕ್ಕಂಥದ್ದು ಇದೆ. ಈ ಒಂದು ಹಿನ್ನೆಲೆಯಲ್ಲಿ ನಾವು ಮುಂಚಿತವಾಗಿ ಅಂದರೆ, ಎಲ್ಲಾ ಕಡೆಯಿಂದ ಬರಗಾಲ ಪೀಡಿತ ಪ್ರದೇಶ ಎಂದು ಘೋಷಣೆ ಮಾಡಿ ಎಂದು ಬೇಡಿಕೆ ಬರುವುದಕ್ಕಿಂತ ಮುಂಚಿತವಾಗಿಯೇ ಆ ಕೆಲಸಕಾರ್ಯಗಳನ್ನು ಮಾಡಿದ್ದೇವೆ. ಮತ್ತೆ ಆ ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡಿದ ದಿನದಿಂದ ಇವತ್ತಿನವರೆಗೆ ಚೆನ್ನಾಗಿ ಸೂಪರ್ ವೈಸ್ ಮತ್ತು ಮಾನಿಟರ್ ಮಾಡತಕ್ಕಂಥ ಕೆಲಸಕಾರ್ಯಗಳನ್ನು ಮಾಡಿಕೊಂಡು ಬರಲಾಗಿದೆ. ಇವತ್ತಿನ ದಿವಸ ಬರಪೀಡಿತ ಪ್ರದೇಶಗಳಲ್ಲಿ ಕುಡಿಯುವ ನೀರು, ಫಾಡರ್, ಗೋಶಾಲೆ ಇವುಗಳೆಲ್ಲವನ್ನು ಸಮಯಕ್ಕೆ ಸರಿಯಾಗಿ ಮಾಡುವಂಥ ಕೆಲಸಗಳನ್ನು ಮಾಡಿಕೊಂಡು ಬಂದಿದ್ದೇವೆ. ಟೆಲಿಮೆಟ್ರಿಕ್ ಮಳೆ ಮಾಪನವನ್ನು ಎಲ್ಲಾ ಗ್ರಾಮಪಂಚಾಯತ್‌ಗಳಲ್ಲಿ ಹಾಕಬೇಕೆಂದು ಹೇಳಿದ್ದೀರಿ. ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಹೆಚ್ಚು ಮಳೆ ಮಾಪನ ಯಂತ್ರವಾದ ಟೆಲಿಮೆಟ್ರಿಕ್ ಮಿಷಿನ್ ಅನ್ನು ಅಳವಡಿಸಲಾಗಿದೆ. ಸುಮಾರು 770 ಗ್ರಾಮಪಂಚಾಯತ್‌ಗಳಲ್ಲಿ ಇದನ್ನು ಅಳವಡಿಸತಕ್ಕಂಥ ಕೆಲಸಕಾರ್ಯಗಳನ್ನು ಸರ್ಕಾರ ಮಾಡಿದೆ. ಹಂತ ಹಂತವಾಗಿ ಉಳಿದ ಎಲ್ಲಾ ಗ್ರಾಮ ಪಂಚಾಯತ್ ಕೇಂದ್ರಗಳಲ್ಲಿ ಇದನ್ನು ಸ್ಥಾಪಿಸಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ಇದನ್ನು ಆದಷ್ಟು ಬೇಗ ಮಾಡುವಂಥ ಕೆಲಸವನ್ನು ನಾವು ಮಾಡುತ್ತೇವೆ. ಮತ್ತೆ ಇದರ ಮುಖಾಂತರ ಅಲ್ಲಿರುವ ತೇವಾಂಶ ಮತ್ತೆ ಬಾಕಿ ಇರುವ ಎಲ್ಲಾ ಅಂಶಗಳ ಬಗ್ಗೆ ವರದಿ ಪಡೆದುಕೊಳ್ಳುವಂಥ ಕೆಲಸಕಾರ್ಯಗಳನ್ನು ಮಾಡಬೇಕೆಂದು ನಿಶ್ಚಯ ಮಾಡಿದ್ದೇವೆ. ಟಾಸ್ಕ್‌ಫೋರ್ಸ್ ಸಭೆಗಳು ನಡೆದಿಲ್ಲವೆಂಬುದು ಬಹಳ ದೊಡ್ಡ ಆರೋಪಗಳಿವೆ. ಟಾಸ್ಕ್‌ಫೋರ್ಸ್ ಸಭೆಗಳನ್ನು ಕರೆಯುವಂಥ ಸಂದರ್ಭದಲ್ಲಿ ನಮ್ಮ ಶಾಸಕರನ್ನು ಅಲ್ಲಿ ವಿಶ್ವಾಸಕ್ಕೆ ತೆಗೆದುಕೊಂಡು ಮಾಡುತ್ತಿಲ್ಲವೆಂದು ಹೇಳಿದ್ದಾರೆ.

SRI. SIDDARAMAIAH : MLA himself is the President.

SRI. D.V. SADANANDA GOWDA : This is true. ಆದರೆ, ಅಧಿಕಾರಿಗಳು ಯಾವುದೇ ಕೆಲಸ ಕಾರ್ಯಗಳನ್ನು ಮಾಡುವಂಥ ಸಂದರ್ಭದಲ್ಲಿ ಸ್ಥಳೀಯ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಟಾಸ್ಕ್ ಫೋರ್ಸ್ ಸಭೆಗಳನ್ನು ನಡೆಸಿಲ್ಲವೆಂಬ ಆರೋಪಗಳು ಬಂದಿವೆ. 15 ಜಿಲ್ಲೆ ಗಳಲ್ಲಿ ಟಾಸ್ಕ್‌ಫೋರ್ಸ್ ಸಮಿತಿಯ ಸಭೆಗಳು ನಡೆದಿವೆ ಉಳಿದ ಜಿಲ್ಲೆಗಳಲ್ಲಿ ಕೂಡ ಟಾಸ್ಕ್ ಫೋರ್ಸ್ ಸಭೆಗಳನ್ನು ನಡೆಸುವಂಥ ಕೆಲಸ ಕಾರ್ಯಗಳನ್ನು ಮಾಡಬೇಕೆಂಬ ಆದೇಶವನ್ನು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಕೊಡುವಂಥ ಕೆಲಸಕಾರ್ಯಗಳನ್ನು ಮಾಡಿದ್ದೇವೆ. 20 ಜಿಲ್ಲೆಗಳಿಗೆ ನಾನು ಭೇಟಿ ಕೊಟ್ಟು ಅಲ್ಲಿ ಒಂದು ರೀತಿಯ ರಿವ್ಯೂ ಮೀಟಿಂಗ್ ಮಾಡುವಂಥ ಕೆಲಸವನ್ನು ಮಾಡಿದ್ದೇವೆ. ಎಲ್ಲಾ ಜಿಲ್ಲೆಯಲ್ಲಿ ಮಾನ್ಯ ಅಧ್ಯಕ್ಷರ ನೇತೃತ್ವದಲ್ಲಿರುವ ಟಾಸ್ಕ್‌ಫೋರ್ಸ್ ಕಮಿಟಿಯ ಸಭೆಯನ್ನು ತಕ್ಷಣ ಕರೆದು ಮಾನಿಟರ್ ಮಾಡುವ ಕೆಲಸಕಾರ್ಯಗಳನ್ನು ಮಾಡಬೇಕೆಂದು ಮತ್ತು ಈ ಕೆಲಸ ಕಾರ್ಯಗಳಿಗೆ ಜಿಲ್ಲಾಧಿಕಾರಿಗಳು ಹೆಚ್ಚು ಸಹಕಾರ ಕೊಡಬೇಕೆಂಬ ಸೂಚನೆಯನ್ನು ರಾಜ್ಯದ ಎಲ್ಲಾ ಬರ ಪೀಡಿತ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಕೊಡುವಂಥ ಕೆಲಸಕಾರ್ಯಗಳನ್ನು ಮಾಡುತ್ತೇವೆ. ತುಮಕೂರು, ಚಿತ್ರದುರ್ಗ ಜಿಲ್ಲೆಯಲ್ಲಿ ಶೇಂಗಾ ಬೆಳೆದಿರುವಂಥವರು 20 ಸಾವಿರ ರೂಪಾಯಿಗಳಷ್ಟು ನಷ್ಟವನ್ನು ಅನುಭವಿಸಿದ್ದಾರೆ. ಆದರೆ, ಸರ್ಕಾರದಿಂದ ಕೇವಲ 2 ಸಾವಿರ ರೂಪಾಯಿ ಪರಿಹಾರ ಸಿಗುತ್ತದೆಂಬ ಮಾತನ್ನು ಸಹ ಪ್ರಸ್ತಾಪ ಮಾಡಿದ್ದಾರೆ. ಆದರೆ, ನಾವು ಸಿ.ಆರ್.ಎಫ್. ಗೈಡ್‌ಲೈನ್ಸ್ ಮುಖಾಂತರವೇ ಮುಂದಕ್ಕೆ ಹೋಗಬೇಕಾಗಿದೆ. ಗೈಡ್‌ಲೈನ್ಸ್ ಏನೇ ಇದ್ದರೂ ಸಹ ರಾಜ್ಯ ಸರ್ಕಾರಕ್ಕೆ ಹೆಚ್ಚು ಕೊಡುವುದಕ್ಕೆ ಏನು ತೊಂದರೆ ಎಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಪರಿಶೀಲನೆ ಮಾಡುವುದಕ್ಕೆ ನಾವು ಖಂಡಿತವಾಗಿ ಸಿದ್ಧರಿದ್ದೇವೆಂಬ ಮಾತನ್ನು ಹೇಳುವುದಕ್ಕೆ ನಾನು ಇಚ್ಛೆ ಪಡುತ್ತೇನೆ. ಆತ್ಮಹತ್ಯೆ ಮಾಡಿಕೊಂಡಿರುವಂಥವರು ಬ್ಯಾಂಕ್‌ನಲ್ಲಿ ಸಾಲ ಪಡೆದುಕೊಂಡಿದ್ದರೆ ಅಂಥವರಿಗೆ ಒಂದು ಲಕ್ಷ ಪರಿಹಾರ ಸಿಗುತ್ತದೆ. ಖಾಸಗಿಯವರಿಂದ ಸಾಲ ಪಡೆದುಕೊಂಡರೆ ಅದಕ್ಕೆ ಯಾವುದೇ ರೀತಿಯ ಪರಿಹಾರ ಸಿಗುವುದಿಲ್ಲ. ಆದ್ದರಿಂದ, ಇದಕ್ಕೆ ಒಂದು ಹೊಸ ರೀತಿಯಲ್ಲಿ ಆಲೋಚನೆಗಳನ್ನು ಮಾಡಬೇಕೆಂಬ ಪ್ರಸ್ತಾಪ ಸದನದಲ್ಲಿ ಬಂದಿದೆ. ಪ್ರಾಯಶಃ ಸರ್ಕಾರದಿಂದ ರಚಿತವಾಗಿರುವ ಸಮಿತಿಯ ತೀರ್ಮಾನದ ಆಧಾರದಲ್ಲಿ ಏನು ಪರಿಹಾರ ಕೊಡುವುದಕ್ಕೆ ಸಾಧ್ಯವಿದೆಯೋ ಅದನ್ನು ಸರ್ಕಾರ ಕೊಡುತ್ತಿದೆ. ಆದರೆ,

ಖಾಸಗಿಯವರಿಂದ ಪಡೆದುಕೊಂಡಿದ್ದಾಗ ಅದಕ್ಕೆ ಪರಿಹಾರ ಕೊಡುವುದಕ್ಕೆ ನಮ್ಮ ಸರ್ಕಾರದಿಂದ ರಚಿತವಾಗಿರುವ ಸಮಿತಿಯ ತೀರ್ಮಾನದಲ್ಲಿ ಯಾವುದೂ ಇಲ್ಲದೇ ಇರುವ ಹಿನ್ನೆಲೆಯಲ್ಲಿ ಇದಕ್ಕೆ ಬದಲಿ ಆಲೋಚನೆ ಮಾಡಬೇಕಾಗಿರುವಂಥ ಅವಶ್ಯಕತೆ ಇದನ್ನು ಮಾಡುವುದಕ್ಕೆ ಎಲ್ಲರೂ ಸೇರಿಕೊಂಡು ಪ್ರಯತ್ನವನ್ನು ಮಾಡಬೇಕಾಗಿದೆ. ರಾಜ್ಯ ಮಟ್ಟದಲ್ಲಿರುವ ವಿಪತ್ತು ನಿರ್ವಹಣ ಪ್ರಾಧಿಕಾರದ ಸಭೆಗಳನ್ನು ಕರೆದಿಲ್ಲ. ಆದ್ದರಿಂದ, ಆಗಾಗ ಈ ಸಭೆಯನ್ನು ಕರೆಯಬೇಕೆಂದು ಹೇಳಿದ್ದಾರೆ. ಈ ಒಂದು ನಿರ್ದಿಷ್ಟ ಕಾಲಮಿತಿಯಲ್ಲಿ ವಿಪತ್ತು ನಿರ್ವಹಣ ಪ್ರಾಧಿಕಾರದ ಸಭೆಗಳನ್ನು ಕರೆಯುವುದಕ್ಕೆ ಸೂಕ್ತ ಕ್ರಮವನ್ನು ಸರ್ಕಾರ ಕೈಗೊಳ್ಳುತ್ತದೆ. ಈ ಬಾರಿಯ ಬರ ಪರಿಹಾರದ ಕಾಮಗಾರಿಗಳಲ್ಲಿ ಅತ್ಯಂತ ಯಶಸ್ವಿಯಾಗಿ ನಿಭಾಯಿಸು ವಂಥ ಕೆಲಸ ಕಾರ್ಯಗಳನ್ನು ಸರ್ಕಾರ ಮಾಡಿದೆ. ಇಲ್ಲಿ ಕೊಡುವಂಥ ಸಲಹೆ ಸೂಚನೆಗಳನ್ನು ಗಂಭೀರವಾಗಿ ಪರಿಗಣಿಸಿಕೊಂಡು ಮುಂದಕ್ಕೂ ಕೂಡ ಈ ಕೆಲಸ ಕಾರ್ಯಗಳನ್ನು ಹೆಚ್ಚು ಹೆಚ್ಚು ವೇಗವಾಗಿ ಮಾಡುತ್ತೇವೆ. ವಿಶೇಷವಾಗಿ ಕುಡಿಯುವ ನೀರು ಮತ್ತು ಫಾಡರ್, ಪರಿಹಾರ ಕೊಡುವಂಥ ಕೆಲಸ ಕಾರ್ಯಗಳ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸುತ್ತದೆಂದು ಹೇಳುತ್ತಾ ಈ ಸದನದಲ್ಲಿ ಮಾನ್ಯ ಸದಸ್ಯರುಗಳು ಕೊಡುವಂಥ ಎಲ್ಲ ಸಲಹೆ ಸೂಚನೆಗಳು ಸಕಾರಾತ್ಮಕವಾಗಿದ್ದಾಗ ಅದನ್ನು ಪರಿಶೀಲನೆ ಮಾಡಿ ವಿರೋಧಪಕ್ಷದ ನಾಯಕರಿಂದ ಹಿಡಿದು ಇವತ್ತಿನ ದಿವಸ ಚರ್ಚೆಯಲ್ಲಿ ಭಾಗವಹಿಸಿದಂಥವರೆಲ್ಲರೂ ಕೊಟ್ಟಂತ ಸಲಹೆ ಸೂಚನೆಗಳನ್ನು ಸ್ವೀಕಾರ ಮಾಡಿ ಬರಪರಿಹಾರ ಕಾಮಗಾರಿಗಳನ್ನು ಇನ್ನಷ್ಟು ಹೆಚ್ಚು ಯಶಸ್ವಿಯಾಗಿ ನಡೆಸಲಾಗುವುದು. ಆದರೆ, ತಾವು ಹೇಳಿದ ರೀತಿಯಲ್ಲಿ ಯಾವುದೇ ಬರಪರಿಹಾರ ಕಾಮಗಾರಿಗಳಲ್ಲಿ ತೊಂದರೆಗಳು ಇಲ್ಲಿಯ ತನಕ ಆಗಿಲ್ಲ. ಹಾಗೆಯೇ ಹಣಕ್ಕೂ ಸಹ ತೊಂದರೆಯಾಗಿಲ್ಲ. ಕುಡಿಯುವ ನೀರಿನ ತೊಂದರೆಗಳನ್ನು ನಿಭಾಯಿಸುವಂಥ ಕೆಲಸಕಾರ್ಯಗಳನ್ನು ಅತ್ಯಂತ ಯಶಸ್ವಿಯಾಗಿ ಮಾಡಿದ್ದೇವೆ. ಇದನ್ನು ಸಮರ್ಪಕವಾಗಿ ನಿರ್ವಹಿಸುವಂಥ ಕೆಲಸ ಕಾರ್ಯಗಳನ್ನು ಸರ್ಕಾರ ಪ್ರಾಮಾಣಿಕವಾಗಿ ಮಾಡಿದೆ. ಮತ್ತೆ ಈ ದೃಷ್ಟಿಯಲ್ಲಿ ತಮ್ಮೆಲ್ಲರ ಸಲಹೆಗಳನ್ನು ಕೂಡ ಅತ್ಯಂತ ವಿಶ್ವಾಸದಿಂದ ಸ್ವೀಕಾರ ಮಾಡಲಾಗುತ್ತದೆಂಬ ಮಾತನ್ನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಬರ ಇವತ್ತು ರಾಜ್ಯದಲ್ಲೇನು ಬಹಳ ಭೀಕರವಾಗಿದೆ, ಸರ್ಕಾರ

ಒಪ್ಪಿಕೊಂಡಿರುವ ರೀತಿಯಲ್ಲಿ ಕಳೆದ 1971 ರಿಂದ ಇಲ್ಲಿಯವರೆಗೆ 40 ವರ್ಷಗಳಲ್ಲಿ, ಕರ್ನಾಟಕದ ದಕ್ಷಿಣ ಒಳ ನಾಡಿನಲ್ಲೂ ಮತ್ತು ಉತ್ತರ ಕರ್ನಾಟಕದ ಒಳನಾಡಿನಲ್ಲಿ ಇಂಥ ಭೀಕರ ಬರಗಾಲ ಬಂದಿಲ್ಲವೆಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಈ ಸಾರಿ ರಾಜ್ಯದ ಜನರಿಗೆ ಅದು ಇನ್ನೂ ಏತಕ್ಕೆ ಬಹಳ ಗಂಭೀರ ಬರವೆಂದರೆ, ಈ ಸಾರಿ ಉತ್ತರ ಕನ್ನಡ ಜಿಲ್ಲೆ ದಕ್ಷಿಣ ಕನ್ನಡ ಜಿಲ್ಲೆ, ಧಾರವಾಡ, ಹಾವೇರಿ, ಶಿವಮೊಗ್ಗ ಈ ಭಾಗಗಳಲ್ಲಿ ಪ್ರವಾಹವೂ ಬಂತು. ಪ್ರವಾಹ ಬಂದು ಸುಮಾರು 13,000 ಹೆಕ್ಟೇರ್ ಪ್ರದೇಶದಲ್ಲಿ ಮುಳುಗಡೆಯಾಗಿ ಬೆಳೆ ನಾಶವಾಗಿದೆ, 112 ಜನರು ಸತ್ತರು, 19 ಜಾನುವಾರುಗಳು ಸತ್ತವು, ಮನೆಗಳೆಲ್ಲಾ ನಷ್ಟವಾದವು ಎಂದು ನಾನು ಹೇಳಿದ್ದೇನೆ, ಪುನಃ ಪ್ರಸ್ತಾಪಿಸುವುದಿಲ್ಲ. ಎರಡನೆಯದಾಗಿ, ಮುಂಗಾರನ್ನು ನಾವೇನು ನಿರೀಕ್ಷೆ ಮಾಡಿದ್ದೆವೊ, ಅದು ಇವತ್ತು ಸುಮಾರು 20,000 ಹೆಕ್ಟೇರ್‌ನಲ್ಲಿ 50% ಗಿಂತ ಹೆಚ್ಚು ಬೆಳೆ ನಷ್ಟವಾಗಿದೆ. ಬಿತ್ತನೆ ಯಾದದ್ದು 69 ಲಕ್ಷ ಹೆಕ್ಟೇರ್, ಅದರಲ್ಲಿ 6 ಲಕ್ಷ ಹೆಕ್ಟೇರ್ ಬಿತ್ತನೆಯೇ ಆಗಲಿಲ್ಲ, 22 ಲಕ್ಷ ಹೆಕ್ಟೇರ್‌ನಲ್ಲಿ, ಮಳೆ ಇಲ್ಲದೆ ಬೆಳೆ ನಷ್ಟವಾಗಿದೆ, ಸುಮಾರು 20 ಲಕ್ಷ ಹೆಕ್ಟೇರ್‌ನಲ್ಲಿ 50% ಹೆಚ್ಚು ಮಳೆ ನಷ್ಟವಾಯಿತು. Agriculture Department ನವರು CRF norms ಪ್ರಕಾರ 202 ಕೋಟಿ ರೂಪಾಯಿ ಗಳನ್ನು ನಷ್ಟವಾಗಿರುವ ಬೆಳೆ ಪರಿಹಾರ ಕೊಡಬೇಕೆಂದು ಕೇಳಿದ್ದಾರೆ. ಈ ಬಗ್ಗೆ ಏನು ಮಾಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಏನೂ ಹೇಳಲಿಲ್ಲ. ಮತ್ತು ರೈತರು ಆತ್ಮಹತ್ಯೆ ಮಾಡಿಕೊಂಡಿರುವುದನ್ನು ನಾನು ಬರೀ ತೆಹಲ್ಕಾ ಪೇಪರ್ ರೆಫರ್ ಮಾಡಿ ಅಷ್ಟೇ ಹೇಳಲಿಲ್ಲ. ಇವತ್ತು ರಾಜ್ಯ ಮಟ್ಟದಲ್ಲಿ State Crime Records Bureau ಎಂಬುದಿದೆ, ರಾಷ್ಟ್ರಮಟ್ಟದಲ್ಲಿ National Records Crime Bureau ಎಂದು ಇದೆ. ಈ ಎರಡೂ ವರದಿಗಳ ಪ್ರಕಾರ more than 6000 farmers ಸತ್ತಿದ್ದಾರೆ. ಅದಕ್ಕೆ ಇವರು (ಮುಖ್ಯಮಂತ್ರಿಗಳು) ವಿವರಿಸುವಾಗ ನಾನು ಹೇಳಿದೆ, Assistant Commissioner ಯಾವ ರೈತರಿಗೆ ಪರಿಹಾರ ಕೊಡುವುದಕ್ಕೆ ಆತ್ಮಹತ್ಯೆ ಮಾಡಿಕೊಂಡರೆಂದು ತೀರ್ಮಾನ ಮಾಡುತ್ತಾರೆಂದರೆ, ಒಂದು ಆ ರೈತನ ಹೆಸರಿನಲ್ಲಿ ಜಮೀನು ಇರಬೇಕು, ಎರಡನೆಯದು, either society or commercial bank ನಲ್ಲಿ ಸಾಲ ತೆಗೆದುಕೊಂಡಿರಬೇಕು, ಮೂರನೆಯದು, ಆ ಸಾಲದಿಂದ ಸತ್ತಿರಬೇಕು. ಈ ಮೂರು conditions fulfil ಮಾಡಿದವರಿಗೆ ಮಾತ್ರ ಪರಿಹಾರ ಕೊಡುತ್ತಾರೆ,

ಇನ್ನುಳಿದವರಿಗೆ ಪರಿಹಾರವಿಲ್ಲ, ನಮ್ಮ ಸರ್ಕಾರದ ಅಂಕಿಅಂಶಗಳ ಪ್ರಕಾರ ಇಷ್ಟು ಜನ ಸತ್ತಿದ್ದಾರೆ ಎಂದು ಉತ್ತರ ಕೊಡುತ್ತಾರಲ್ಲ, ಅದರಲ್ಲಿ ಖಾಸಗಿ ಸಾಲ ತೆಗೆದುಕೊಂಡವರು ಸೇರಿಲ್ಲ, ಅಪ್ಪ, ಮಗ ಸಾಲ ತೆಗೆದುಕೊಂಡು ತೀರಿಸಲಾಗದ ಆತ್ಮಹತ್ಯೆ ಮಾಡಿಕೊಂಡಿರುವುದು ಸೇರಿಲ್ಲ, ಹೆಂಡತಿ ಆತ್ಮಹತ್ಯೆ ಮಾಡಿಕೊಂಡಿರುವುದು ಸೇರಿಲ್ಲ, ಬೇರೆ ಕಡೆ ಸಾಲ ತೆಗೆದುಕೊಂಡಿರುವವರೂ ಸೇರಿಲ್ಲ, ಆ ಜನರೆಲ್ಲಾ ಇದರಲ್ಲಿ ಸೇರಿಲ್ಲ, ಆ Crime Records Bureau ದಲ್ಲಿ ಇದನ್ನೆಲ್ಲಾ ಹೇಳಿದ್ದಾರೆಂದು ನಾನು ಹೇಳಿದ್ದೇನೆ. ನಾನು ಅದರ ಮೇಲೆ depend ಆಗಿ ಕರಾರುವಕ್ಕಾಗಿದೆ ಎಂದು ವಾದ ಮಾಡುವುದಕ್ಕೆ ಹೋಗಿಲ್ಲ. But, it is a fact. ಇದು State Crime Records Bureau ರವರು ಹೇಳಿರುವ ಅಂಕಿ ಅಂಶಗಳು. Nobody can deny it. ಅವರೂ ಕೂಡ ಡಿಸ್‌ಪ್ಯೂಟ್ ಮಾಡುವುದಕ್ಕೆ, ಡಿನೈ ಮಾಡುವುದಕ್ಕೆ ಹೋಗುವುದಿಲ್ಲ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳಿಂದ ನಾನು ಉತ್ತರವನ್ನು ಬಹಳ ನಿರೀಕ್ಷೆ ಮಾಡಿದ್ದೆ, ಆದರೆ ಬಹಳ ನೀರಸವಾದ ಉತ್ತರವನ್ನು ನೀಡಿದ್ದಾರೆ. ಅವರ ಉತ್ತರದಿಂದ ಬರದಿಂದ ಸಂಕಷ್ಟಕ್ಕೆ ಒಳಗಾಗಿರುವ ಯಾರಿಗೂ ತೃಪ್ತಿ ತರತಕ್ಕಂಥದ್ದಲ್ಲ. ನಮ್ಮ ಆರೋಪವೇನೆಂದರೆ, ಬರಪರಿಹಾರ ಕೆಲಸಗಳು ನಡೆದಿಲ್ಲವೆನ್ನುವುದು. ಅವರ ಉತ್ತರದಿಂದಲೇ, it is quite clear, ಬರಪರಿಹಾರ ಕೆಲಸ ನಡೆದಿಲ್ಲ. ಅವರು ಏನು ಹೇಳಿದ್ದಾರೆಂದರೆ, ಎಲ್ಲವನ್ನೂ ಇದಕ್ಕೆ ಈ ರೀತಿ ಮಾಡಿ ಎಂದು ಹೇಳಿದ್ದೇವೆ, ಹೀಗೆ ಮಾಡಿ ಎಂದು ಹೇಳಿದ್ದೇವೆ, ಹಾಗೆ ಮಾಡಿ ಎಂದು ಹೇಳಿದ್ದೇವೆ, ಮೀಟಿಂಗ್ ಮಾಡಿದ್ದೇವೆ ಎಂದು ಅಷ್ಟು ಹೇಳಿದ್ದಾರೆಯೇ ಹೊರತು, ಅವರ ಉತ್ತರದಲ್ಲಿ ಯಾರು ಏನು ಮಾಡಿದ್ದಾರೆನ್ನುವುದಿಲ್ಲ, ಎಲ್ಲೂ ಹೇಳಿಲ್ಲ. ಬೆಳೆ ಪರಿಹಾರಕ್ಕೆ ಇಷ್ಟು ಹಣ ಕೊಟ್ಟಿದ್ದೇವೆ, ಇಷ್ಟು ಬೋರ್‌ವೆಲ್‌ಗಳನ್ನು ತೋಡಿಸಿದ್ದೇವೆ, ಇಷ್ಟು ಜಾನುವಾರುಗಳಿಗೆ ರಕ್ಷಣೆ ಮಾಡಿದ್ದೇವೆ ಎನ್ನುವುದನ್ನೂ ಹೇಳಿಲ್ಲ. ಚಿತ್ರದುರ್ಗದಲ್ಲಿ 15 ಗೋ-ಶಾಲೆಗಳನ್ನು ತೆಗೆದಿದ್ದೇವೆನ್ನುವುದು ಅದು ಹಳೆಯ ಕಥೆ. ಅದಾದ ಮೇಲೆ ಮೂರುಕಡೆ ಬಿಜಾಪುರದಲ್ಲಿ ಖಾಸಗಿಯವರು ತೆಗೆದಿರುವುದು, ಗೋ-ಶಾಲೆಗಳನ್ನು ಈ ಸರ್ಕಾರದಿಂದ ತೆಗೆದಿರುವುದಲ್ಲ. ಇವರು (ಮುಖ್ಯ ಮಂತ್ರಿಗಳು) ಸಾವಯವ ಕೃಷಿ ರೈತನ ಮನೆಯಲ್ಲಿ ಮಲಗುವುದಕ್ಕೆ ಹೋಗಿ, ಇವರು ಸಭೆ ಮಾಡಲೆಂದು ಅಲ್ಲಿಗೆ ಹೋದರೆಂದು ಹೇಳಿ ಇದ್ದ ಗೋ-ಶಾಲೆಯನ್ನು ಮುಚ್ಚಿದರು, ಅದೊಂದು scandal ಅಂತೆ. ನೀವೇ ನೋಡಿ,

ರೂ.89 ಕೋಟಿ ಬಿಡುಗಡೆ ಮಾಡಿದ್ದೇವೆ, ಅದು ಡಿ.ಸಿ.ಗಳ ಹತ್ತಿರವಿದೆ ಎಂದು ಹೇಳಿದರು, ಅದೇನು ಉಪ್ಪಿನಕಾಯಿ ಹಾಕಿಕೊಂಡು ನೆಕ್ಕುವುದಕ್ಕೋ? ರೈತರಿಗೆ ಕುಡಿಯುವ ನೀರಿಗೆ ಬಂತೊ, ಕೆಲಸಕ್ಕೆ ಬಂತೊ, ಮೇವಿಗೆ ಬಂತೊ, ಏತಕ್ಕೆ ಬಂತು? ಅವರಿಗೆ 89 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ ಅಷ್ಟೆ, ನೋಡಿ, ಸರ್ಕಾರ ಹಣ ಬಿಡುಗಡೆ ಮಾಡಿದ್ದೇವೆ, no problem for the money. ಖರ್ಚು ಮಾಡದಿದ್ದರೆ, 89 ಕೋಟಿ ರೂಪಾಯಿ ಅಲ್ಲೇ ಇರುತ್ತದೆ. ಹಾಗಾದರೆ ಬೆಳೆ ನಷ್ಟವಾಗಿರುವ 202 ಕೋಟಿಗಳನ್ನು ರೈತರಿಗೆ ಏತಕ್ಕೆ ಕೊಟ್ಟಿಲ್ಲ? If you have money, why you have not paid the compensation to the farmers who lost the crops even according to the guidelines of CRF? That is No.1 ಒಂದು ರೂಪಾಯಿ ಹಣ ಕೊಟ್ಟಿಲ್ಲ, ಇಡೀ 23 ಜಿಲ್ಲೆಗಳಲ್ಲಿ, 100 ಬರಗಾಲ ಬಂದಿರುವ ತಾಲ್ಲೂಕುಗಳಲ್ಲಿ ಒಂದು ಬೋರ್‌ವೆಲ್ ತೋಡಿಲ್ಲ. ಈಗ ಮೇವಿಗೆ ತೊಂದರೆ ಇಲ್ಲವೆಂದು ಹೇಳುತ್ತಾರೆ, ಇಲ್ಲೇ ಮಾನ್ಯ ಸದಸ್ಯರಾದ ಸುಭಾಷ್ ಗುತ್ತೇದಾರ್ ಇದ್ದಾರೆ, ತೊಗರಿ ಬೆಳೆದಿದ್ದಾರೆ. That is the main crop of Gulbarga people. ತೊಗರಿಯನ್ನು ದನಗಳಿಗೆ ಮೇವೆಂದು ಹಾಕಲು ಬರುತ್ತದೆಯೇ? ಇಷ್ಟು ಎತ್ತರಕ್ಕೆ ಬೆಳೆಯುತ್ತದೆ, ಅದನ್ನು ಯಾವ ದನ ತಿನ್ನುತ್ತದಪ್ಪ? ಅವನ್ನು ನಮ್ಮ ಕಡೆಯ ದನಗಳು ತಿನ್ನುವುದಿಲ್ಲ.

ಶ್ರೀ ವಿ. ಉಮೇಶ್ ಕತ್ತಿ (ಕೃಷಿ ಸಚಿವರು) : ನಿಮ್ಮ ಕುರಿಗಳು ತಿನ್ನುತ್ತವೆಯೋ ಏನೋ ಗೊತ್ತಿಲ್ಲ ನಮ್ಮ ಕುರಿಗಳು ತಿನ್ನುತ್ತವೆ, ಉತ್ತರ ಕರ್ನಾಟಕದ ಕುರಿಗಳು ತಿನ್ನುತ್ತವೆ.

ಶ್ರೀ ಸಿದ್ದರಾಮಯ್ಯ : ಸುಮ್ಮನೆ ಹೇಳಬೇಡಿ, ಏನು ಗುಲ್ಬರ್ಗಾದಲ್ಲಿ ತೊಗರಿ ಗಿಡಗಳನ್ನು ದನಗಳು ತಿನ್ನುತ್ತವೆಯೇ? ಅಧ್ಯಕ್ಷರೆ, ಹೋಗಿ ನೋಡಿಕೊಂಡು ಬನ್ನಿ, ಇಷ್ಟು ಉದ್ದ ಬೆಳೆದಿರುತ್ತದೆ, ಕೊಯ್ಯುವಷ್ಟರಲ್ಲಿ ಎಲೆಗಳೆಲ್ಲ ಉದುರಿ ಹೋಗಿ ಕಡ್ಡಿ ಇರುತ್ತದೆ, ನಮ್ಮ ಕಡೆ ತೊಗರಿ ಗಿಡ ಬಳಸುವುದು ಏತಕ್ಕೆ ಎಂದರೆ, ಕಸ ಗುಡಿಸುವುದಕ್ಕೆ ತೊಗರಿ ಬರಲು ಎಂದು ಮಾಡಿಕೊಳ್ಳುತ್ತೇವೆ. ರೇವಣ್ಣನವರೆ, ನಿಮ್ಮ ಕಡೆಯೂ ಅದಕ್ಕೆ ಬಳಸುತ್ತೀ ರಲ್ಲವೇ? ಕೊಟ್ಟಿಗೆ ಕಸ ಗುಡಿಸುವುದಕ್ಕೆ ಬರುತ್ತದೆ, ಮೇವಿಗೆಂಧು ಬಳಸುವುದಿಲ್ಲ. ಏನಾಗಿದೆ ಎಂದರೆ, ಉಮೇಶ್ ಕತ್ತಿಯವರ ಕೈಯಲ್ಲಿ ಷುಗರ್ ಕಾರ್ಖಾನೆಗಳೆಲ್ಲಾ ಬರುತ್ತವೆ, ನಿಮ್ಮ ಕಡೆ ಕಬ್ಬು ಬೆಳೆಯುತ್ತಾರೆಂದು ಎಲ್ಲಾ

ಕಡೆ ಕಬ್ಬನ್ನೇ ಬೆಳೆಯುತ್ತಾರೆಂದು ತಿಳಿದುಕೊಂಡಿದ್ದೀರಾ? ಏಕೆಂದರೆ, ಉಮೇಶ್ ಕತ್ತಿಯವರು ಯಾವ ತಾಲ್ಲೂಕಿಗೂ ಹೋಗಿಲ್ಲ.

ಶ್ರೀ ವಿ.ಉಮೇಶ್ ಕತ್ತಿ : ಮಾನ್ಯ ಅಧ್ಯಕ್ಷರೆ, ತೊಗರಿ ಬೆಳೆಯನ್ನು ಬೆಳೆಯುವ ಜಿಲ್ಲೆಗಳು ಗುಲ್ಬರ್ಗಾ, ಬೀದರ್ ಇತ್ಯಾದಿ, ದನಗಳು ತೊಗರಿ ಗಿಡವನ್ನು ತಿನ್ನುವುದಿಲ್ಲವೆಂದರೆ ಹೇಗೆ ನಮ್ಮಲ್ಲಿ ತಿನ್ನುತ್ತವೆ.?

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ತೊಗರಿ ಗಿಡ ಮೇವಿಗೆ ಬರುತ್ತದೆಯೇ? ನಾನು ಹೇಳುತ್ತೇನೆ, ತೊಗರಿ ಸೊಪ್ಪನ್ನು ಯಾವ ದನಕರುಗಳನ್ನೂ ಕೂಡಾ ತಿನ್ನುವುದಿಲ್ಲ, ಅದು ಹಸಿರಾಗಿರುವಾಗ ಮೇಕೆಗಳು ತಿನ್ನುತ್ತವೆ. ಕುರಿಗಳು ತಿನ್ನುತ್ತವೆ. ಆದರೆ ದನಕರುಗಗಳು, ಎತ್ತುಗಳು ಇದ್ಯಾವುದನ್ನೂ ತಿನ್ನುವುದಿಲ್ಲ. 'ಆಡು ಮುಟ್ಟದ ಸೊಪ್ಪಿಲ್ಲ' ಎಂದು ಹೇಳುತ್ತಾರೆ. ಆಡು ಏನಾದರೂ ತಿನ್ನಬಹುದು ಅಷ್ಟೆ. ನಾವೆಲ್ಲ ಹಳ್ಳಿಯವರು, ಸ್ವತಃ ವ್ಯವಸಾಯ ಮಾಡಿಕೊಂಡು ಬಂದಿರುವವರು, ಇವರು ನೀರಾವರಿ ಪ್ರದೇಶದಿಂದ ಬಂದಿರುವವರು, ಇಲ್ಲಿ rain-fed area ಇರುವುದು 76% of the total sowing area. ಅಲ್ಲಿ ಬರ ಬಂದಿದೆ. ಮಾನ್ಯ ಉಮೇಶ್ ಕತ್ತಿಯವರೆ, ತಾವು ಅಲ್ಲಿ ಹೋಗಿಲ್ಲ. ಇವರು ಯಾವುದಕ್ಕೂ ಹೋಗದೇ ಇಲ್ಲಿ ಕುಳಿತುಕೊಂಡು ಕಬ್ಬು ಬೆಳೆದು, ತೊಗರಿ ಬೆಳೆದರೆ ಮೇವು ಸಿಗುತ್ತದೆ ಎಂದು ಹೇಳಿದರೆ ಹೇಗೆ? What I am telling is, ಗುಲ್ಬರ್ಗಾದಲ್ಲಿ ತೊಗರಿ ಬೆಳೆಯುತ್ತಾರೆ, ಎಲ್ಲಾ ಒಣಗಿ ಹೋಗಿದೆ, ಅಲ್ಲಿ ಮೇವು ಹೇಗೆ ಸಿಗುತ್ತದೆ? ಸಜ್ಜೆ ಒಣಗಿ ಹೋಯಿತು, ಉದ್ದು ಒಣಗಿ ಹೋಯಿತು, ಹೆಸರುಕಾಳು ಒಣಗಿ ಹೋಯಿತು, ಹಾಗಾದರೆ ಮೇವು ಎಲ್ಲಿಂದ ಬರುತ್ತದೆ? ಜೋಳ ಈಗ ಹಾಕಿದ್ದಾರೆ. ಜೋಳ ಕಟಾವು ಆಗಬೇಕಾದರೆ ಇನ್ನು ಈ ತಿಂಗಳ ಕೊನೆಯಲ್ಲಿ ಅಥವಾ ಜನವರಿಯಲ್ಲಿ ಆಗುತ್ತದೆ. ಆಗ ಒಂದಿಷ್ಟು ಜೋಳದ ಕಡ್ಡಿ ಮೇವು ಬರುತ್ತದೆ. ಸಜ್ಜೆ ಬಂದಿದ್ದರೆ, ಮೆಕ್ಕೆಜೋಳ ಬಂದಿದ್ದರೆ, ಮುಸುಕಿನ ಜೋಳ ಬಂದಿದ್ದರೆ ಆಗುತ್ತಿತ್ತು.

ಶ್ರೀ ರೇವೂ ನಾಯಕ್ ಬೆಳಮಗಿ (ಪಶುಸಂಗೋಪನಾ ಸಚಿವರು) : ಮಾನ್ಯ ಅಧ್ಯಕ್ಷರೆ......

ಶ್ರೀ ಸಿದ್ದರಾಮಯ್ಯ : ಮಾನ್ಯ ಸಚಿವರೆ, ತಾವು ಕುಳಿತುಕೊಳ್ಳಿ, ಆನಂತರ ಹೇಳುವಿರಂತೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅವರಿಗೇನೂ ಗೊತ್ತಿಲ್ಲ. Blue tongue ರೋಗಕ್ಕೆ ಅವರ ಹತ್ತಿರ ಔಷಧಿಯೇ ಇಲ್ಲ.

ಶ್ರೀ ರೇವೂ ನಾಯಕ್ ಬೆಳಮಗಿ : ಸರ್, ತೊಗರಿ ಬೆಳೆಸುವವರು ನಾವು.. .

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅದು ಬೇಡ Blue tongue ಎಂದರೆ ಏನು ಎನ್ನುವುದನ್ನು ಹೇಳಿ. ಯಾವಾಗ ಬರುತ್ತದೆ ಎನ್ನುವುದನ್ನು ಹೇಳಿ. ತಾವು Animal Husbandry Minister ಆಗಿ Blue tongue ರೋಗ ಕುರಿಗಳಿಗೆ ಎಂತಹ ಸಂದರ್ಭದಲ್ಲಿ ಬರುತ್ತದೆ ಎನ್ನುವುದನ್ನು ಹೇಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ತಾವು ಸುಮ್ಮನೆ ಕುಳಿತುಕೊಳ್ಳಿ. ನಾನೂ Animal Husbandry Minister ಆಗಿ ಮೂರು ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. Blue tongue ರೋಗ ಯಾವುದಕ್ಕೆ ಬರುತ್ತದೆ ಎನ್ನುವುದು ನಿಮಗೆ ಗೊತ್ತಿದೆಯೇ? ಯಾವಾಗ ಬರುತ್ತದೆ ಎನ್ನುವುದನ್ನು ಹೇಳಿ ನೋಡೋಣ.

ಶ್ರೀ ರೇವೂ ನಾಯಕ್ ಬೆಳಮಗಿ : ಕುರಿಗಳಿಗೆ ನೀಲಿ ನಾಲಿಗೆ ರೋಗ ಬರಲಿ ಅಥವಾ ಯಾವುದೇ ರೋಗ ಬರಲಿ, ಇಡೀ ರಾಜ್ಯದಲ್ಲಿ ಔಷಧಿಗೆ ಕೊರತೆ ಇಲ್ಲ.

ಶ್ರೀ ಸಿದ್ದರಾಮಯ್ಯ : ಇದನ್ನು ನಂಬಿದರೆ ಅಷ್ಟೆ. ರೇವೂ ನಾಯಕರೆ, ತಾವು ಪಾಪ ಒಳ್ಳೆಯವರೆಂದು ನಾನು ನಿಮಗೆ ಏನೂ ಮಾತನಾಡಲು ಹೋಗುವುದಿಲ್ಲ. ನಾವು ಬಹಳ innocent ಇದ್ದೀರಿ, ಮುಗ್ಧರಿದ್ದೀರಿ, ಪೈಲ್ವಾನ್ ಆಗಿದ್ದೀರಿ ಎಂದು ನಾನು ಏನೂ ಮಾತನಾಡಲು ಹೋಗುವುದಿಲ್ಲ.

ಶ್ರೀ ಉಮೇಶ್ ವಿ.ಕತ್ತಿ : ಅವರು ಪೈಲ್ವಾನ್ ಆಗಿದ್ದಾರೆಂದು ತಾವು ಏನೂ ಮಾತನಾಡುವುದಕ್ಕೆ ಹೋಗುವುದಿಲ್ಲ ಅನಿಸುತ್ತದೆ.

ಶ್ರೀ ಸಿದ್ದರಾಮಯ್ಯ : of course ಅವರು ನನಗಿಂತ physically strong ಆಗಿದ್ದಾರೆ. ಆದರೆ ನಿಮ್ಮಂಥವರಾಗಿದ್ದರೆ ಮಾತನಾಡುತ್ತಿದ್ದೆ. ಪಾಪ, ಅವರು ಪೈಲ್ವಾನರು, ಕುಸ್ತಿಯೆಲ್ಲಾ ಮಾಡಿಕೊಂಡು ಚೆನ್ನಾಗಿರಲಿ. ಆದರೆ Blue tongue ಅಂದರೆ ಅವರಿಗೆ ಗೊತ್ತಿಲ್ಲ. ಈಗಲೂ ಕುಸ್ತಿಯೆಲ್ಲ

ಮಾಡುತ್ತಾರೆ, dance ಮಾಡುತ್ತಾರೆ, ಅವೆಲ್ಲಾ ಚೆನ್ನಾಗಿ ಮಾಡುತ್ತಾರೆ. Blue tongue ಎನ್ನುವುದು ಒಂದು ಕಾಯಿಲೆ. ಅದು ಕುರಿಗಳಿಗೆ ಬರುತ್ತದೆ. ನಾನು ಏಕೆ ಕೇಳಿದೆನೆಂದರೆ, ನಾನು ಬಿಜಾಪುರ, ಬಾಗಲಕೋಟೆಗೆ ಹೋಗಿದ್ದಾಗ ಕುರಿಗಾರರು ಬಂದು ನನ್ನನ್ನು ಭೇಟಿ ಮಾಡಿದರು. ಕುರಿಗಾರರು ಏನು ಹೇಳಿದರೆಂದರೆ, ಕುರಿಗಳಿಗೆ Blue tongue ಕಾಯಿಲೆ ಬಂದಿದೆ, medicine ಇಲ್ಲ, ಸ್ವಲ್ಪ ಹೇಳಿ ಸಾರ್ ಎಂದು ಹೇಳಿದರು. ನಾನು ಕೂಡಲೇ ನಿಮ್ಮ Joint Director ಗೆ ಹೇಳಿದೆ. ಹೇಳಿದೆನೋ ಇಲ್ಲವೋ ಎನ್ನುವುದನ್ನು ನಿಮ್ಮ Joint Director ಗೆ Phone ಮಾಡಿ ಕೇಳಿ. You please talk to Bijapur or Bagalkot Joint Director, Deputy Director of Animal Husbandry Department.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ನನ್ನಲ್ಲಿರುವ ಮಾಹಿತಿಯನ್ನು ನೋಡಿ. ಶಿರಾದಲ್ಲಿ ಕುರಿಗಳಿಗೆ ಕಾಯಿಲೆ ಬಂದು ಸತ್ತು ಹೋಗಿರುವುದರಿಂದ ವಿಷ ತೆಗೆದುಕೊಂಡಿದ್ದಾರೆ.

ಶ್ರೀ ಸಿದ್ದರಾಮಯ್ಯ : ಅದನ್ನು ನಾನು ನೋಡಿಯೇ ಹೇಳುತ್ತಿದ್ದೇನೆ. I had been to 16 Districts. ನಾನು ನವೆಂಬರ್ ತಿಂಗಳಿನಲ್ಲಿ 16 ಜಿಲ್ಲೆಗಳಿಗೆ ಹೋಗಿ ಅಧಿಕಾರಿಗಳ ಜೊತೆ ಚರ್ಚೆ ಮಾಡಿ ಅವರಿಂದ first-hand information ತೆಗೆದುಕೊಂಡು ಹೇಳುತ್ತಿರುವುದು. ಮಾನ್ಯ ಅಧ್ಯಕ್ಷರೆ, ದಿನಾಂಕ: 5.12.2011 ಕ್ಕೆ ಒಂದು ರೂಪಾಯಿಯೂ ಖರ್ಚಾಗಿಲ್ಲ. 89 ಕೋಟಿ ರೂಪಾಯಿ ಬಿಡುಗಡೆ ಮಾಡಿದಂತಹ ಹಣ ಅಲ್ಲಿಯೇ ಇದೆ. 153 ಕೋಟಿ PD account ನಲ್ಲಿದೆ. Committed Expenditure ನಲ್ಲಿ ಕೊಟ್ಟರೆ, ಅದರಲ್ಲೂ ಕೂಡ ಬರ ಪರಿಹಾರಕ್ಕೆ ಒಂದು ರೂಪಾಯಿಯನ್ನೂ ಖರ್ಚು ಮಾಡಿಲ್ಲ. ಆಗಿದ್ದರೆ, ಚಾಮರಾಜನಗರ ಜಿಲ್ಲೆಯಲ್ಲಿ ಬರಪರಿಹಾರಕ್ಕಾಗಿ ಇಷ್ಟು ಹಣ ಖರ್ಚು ಮಾಡಿದ್ದೇವೆ, ಇಂತಿಷ್ಟು ಬೋರ್‌ವೆಲ್ ತೆಗೆಸಿದ್ದೇವೆ, ಮೇವಿಗೋಸ್ಕರ ಇಷ್ಟು ಖರ್ಚು ಮಾಡಿದ್ದೇವೆ, ಗೋಶಾಲೆಗೋಸ್ಕರ ಇಷ್ಟು ಖರ್ಚು ಮಾಡಿದ್ದೇವೆಂದು ಅವರು ಹೇಳಲಿ, ಆ ರೀತಿ ಇಲ್ಲ. ಆಮೇಲೆ ಬೆಳೆ ಹಾನಿಗೋಸ್ಕರ ಇಂತಿಷ್ಟು ಹಣ ಕೊಟ್ಟಿದ್ದೇವೆ, ಕುಡಿಯುವ ನೀರಿಗೋಸ್ಕರ ಇಷ್ಟು ತೊಟ್ಟಿಗಳನ್ನು ಕಟ್ಟಿಸಿದ್ದೇವೆ, ಇಷ್ಟು ಕ್ಯಾಂಪ್‌ಗಳಿಗೆ ಇಂತಿಷ್ಟು ಹಣ ಖರ್ಚಾಗಿದೆ ಎಂದು ಮಾನ್ಯ ಮುಖ್ಯಮಂತ್ರಿಗಳು ಎಲ್ಲಿ ಹೇಳಿದರು? ಆದೇಶ ಕೊಟ್ಟಿದ್ದೇವೆ, ಮೀಟಿಂಗ್ ಮಾಡಿದ್ದೇವೆ, ನಾನು 20 ಜಿಲ್ಲೆಗಳಿಗೆ ಹೋಗಿ

ಬಂದಿದ್ದೇನೆ ಎಂದು ಸುಮ್ಮನೆ ಹೇಳುತ್ತಾರೆ. ನನ್ನ ಪ್ರಕಾರ ಮಾನ್ಯ ಅಧ್ಯಕ್ಷರೆ, ಒಂದು ರೂಪಾಯಿಯನ್ನೂ ಖರ್ಚು ಮಾಡಿಲ್ಲವೆಂದು ಮಾನ್ಯ ಮುಖ್ಯಮಂತ್ರಿಗಳು admit ಮಾಡಿಕೊಳ್ಳಬೇಕು. ಮಾನ್ಯ ಮುಖ್ಯಮಂತ್ರಿಗಳೆ, please, ನೀವು ಆ ರೀತಿ admit ಮಾಡಿಕೊಳ್ಳಿ ಅದು ನಿಮ್ಮ ದೊಡ್ಡ ಗುಣ. ನಿಮ್ಮ ಅಧಿಕಾರಿಗಳು ಒಪ್ಪಿಕೊಳ್ಳುತ್ತಾರೆ. ಬೇಕಾದರೆ ಹಿಂದೆ ಕೇಳಿ ನೋಡಿ. ಈಗ ನಾವು, ನೀವು ಹಾಗೂ ನಿಮ್ಮ ಅಧಿಕಾರಿಗಳು ಹೋಗಿ ಮೀಟಿಂಗ್ ಮಾಡೋಣ ಬನ್ನಿ. ಅವರು ಒಪ್ಪಿಕೊಳ್ಳದಿದ್ದರೆ ನಾನು ಇಲ್ಲೇ ರಾಜೀನಾಮೆ ಕೊಡುತ್ತೇನೆ. ಒಂದು ಕಡೆ ಬರಗಾಲ ಅಲ್ಲ, ಎಲ್ಲಾ ಕಡೆ ಇದೆ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಅರವಿಂದ ಲಿಂಬಾವಳಿ : ತಾವು ರಾಜೀನಾಮೆ ಕೊಡುವಿರೇ?

ಶ್ರೀ ಸಿದ್ದರಾಮಯ್ಯ : ಕುಳಿತುಕೊಳ್ಳಿ, ನಾನು ರಾಜೀನಾಮೆ ಕೊಟ್ಟರೆ ನಿಮಗೇನೂ ಲಾಭವಾಗುವುದಿಲ್ಲ. ನಿಮಗೇನು ಸಿಗುತ್ತದೆ?

ಶ್ರೀ ಕೆ.ಜಿ.ಕುಮಾರಸ್ವಾಮಿ : ತಾವು by-election ಗೆ ನಿಲ್ಲುವುದಿಲ್ಲವೇ?

ಶ್ರೀ ಸಿದ್ದರಾಮಯ್ಯ : ಒಂದು ವೇಳೆ ರಾಜೀನಾಮೆ ಕೊಡುವ ಪರಿಸ್ಥಿತಿ ಬಂದರೆ ನಾನು ಮತ್ತೆ ನಿಲ್ಲುವುದಿಲ್ಲ. ನೀವು ಏನಾದರೂ ಮಾಡಿಕೊಳ್ಳಿ. ನೀವು ಬಂದು ನಿಂತುಕೊಳ್ಳುವುದಾದರೆ ಬಂದು ನಿಂತುಕೊಳ್ಳಿ. ಒಂದು ಬಾರಿ by-election ಗೆ ನಿಂತುಬಿಟ್ಟು, ಇಡೀ ನನ್ನ ಜೀವನದಲ್ಲಿ ಇನ್ನು ಮುಂದೆ ಯಾವುದೇ by-election ಗೆ ನಿಂತುಕೊಳ್ಳುವುದಿಲ್ಲವೆಂದು ವಿಧಾನಸಭೆಯಲ್ಲಿಯೇ ಹೇಳಿದ್ದೇನೆ. ನಾನು ಆ ಪಾಪದ ಕೆಲಸ ಇನ್ನು ಮಾಡುವುದಕ್ಕೆ ಹೋಗುವುದಿಲ್ಲ. ಮತ್ತೆ ನಿಲ್ಲುವುದಿಲ್ಲ. ಅದರ ಅವಶ್ಯಕತೆ ಇಲ್ಲ. ಬಲಿ ಹಾಕಿಬಿಡುತ್ತದೆ. ಮಾನ್ಯ ಸೋಮಣ್ಣನವರೆ ತಮಗೆ ಗೊತ್ತಿರಬೇಕಲ್ಲವೇ?

ಶ್ರೀ ವಿ. ಸೋಮಣ್ಣ : ಸ್ವಾಮಿ, ಒಂದೇ ಒಂದು clarification.

ಅಧ್ಯಕ್ಷರು : ಮಾನ್ಯ ಸೋಮಣ್ಣನವರೆ, ವಿಷಯಾಂತರ ಬೇಡ.

ಶ್ರೀ ವಿ.ಸೋಮಣ್ಣ : ಯಾರು ಮಾಡಿದರೋ ನೋಡಿ, ದೇವರ ವಿಧಿ ನಿಯಮ ಎಷ್ಟು ಚೆನ್ನಾಗಿದೆ ಎಂದರೆ, ನಾನು ಅವರ by-election ಗೆ ಹೋಗಿ ಏನೆಲ್ಲಾ ಕಷ್ಟಪಟ್ಟೆ.

ಶ್ರೀ ಸಿದ್ದರಾಮಯ್ಯ : ಪಾಪ, ನಮ್ಮ ಕ್ಷೇತ್ರದಲ್ಲಿ ನನ್ನ by-election ನಲ್ಲಿ ಬಂದು ಇವರನ್ನು ಒಂದು ಮನೆಯಲ್ಲಿ ಕೂಡಿ ಹಾಕಿದ್ದರು. ಕಷ್ಟ ಯಾವ ರೀತಿ ಇದೆ, ಏನು ಎಂದು ಅದಕ್ಕೇ ಹೇಳಿದೆ.

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೆ, ನಾನು ಅಷ್ಟೆಲ್ಲಾ ಮಾಡಿದೆ. ನನ್ನ by-election ನಲ್ಲಿ ನಾನೇನು ಇವರಿಗೆ ಮಾಡಿದೆನೋ, ಅದಕ್ಕೆ ವಿರುದ್ಧವಾಗಿ ಅವರು ಮಾಡಿದರು.

ಶ್ರೀ ಸಿದ್ದರಾಮಯ್ಯ : ಅದೇ ನಿಜ. ಅದೊಂದು ಸತ್ಯ ಹೇಳುತ್ತಿದ್ದಾರೆ. ನಾನೂ ಒಪ್ಪಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೆ, ನಾನು ಏಕೆ ಹೇಳುತ್ತಿದ್ದೇನೆಂದರೆ, ನಾನು ಸತ್ಯ ಹೇಳುತ್ತಿದ್ದೇನೆ, ನನ್ನ ಪ್ರಕಾರ ಬಹಳ ಗಂಭೀರವಾಗಿ ಎಲ್ಲೂ ಒಂದು ರೂಪಾಯಿಯನ್ನೂ ಖರ್ಚು ಮಾಡಿಲ್ಲ. 89 ಕೋಟಿ ರೂಪಾಯಿಯಲ್ಲಿ ಒಂದು ರೂಪಾಯಿಯೂ ಖರ್ಚಾಗಿಲ್ಲ. PD account ನಲ್ಲಿ D.C ಯವರ ಹತ್ತಿರ ಯಾವಾಗಲೂ ಹಣ ಇರುತ್ತದೆ. ಇಲ್ಲವೆಂದು ಹೇಳುತ್ತಿಲ್ಲ. ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟಂತೆ, ಬಾಬ್ತುಗಳಿಗೆ ಸಂಬಂಧ ಪಟ್ಟಂತೆ ಹಣ ಕೂಡ PD accountನಲ್ಲಿ ಇರುತ್ತದೆ. ಹಣ ಖರ್ಚಾಗಿರುವುದೂ, ಅವರು ಕೊಡಬೇಕಾಗಿರುವುದು ಕೂಡ ಇರುತ್ತದೆ. Committed Expenditure ಕೂಡ ಇರುತ್ತದೆ. ನಾನು ಹೇಳುವುದೇನೆಂದರೆ, ಇವರು ಒಂದೂ ಕಡೆಯೂ ಕುಡಿಯುವ ನೀರಿಗಾಗಿ ಬೋರ್‌ವೆಲ್ ತೋಡಿಸಿಲ್ಲ. ನಮ್ಮ constituency ಗೆ ಕುಡಿಯುವ ನೀರಿಗೆ ಇಷ್ಟು ಹಣ ಬೇಕು, ಮೇವಿಗೆ ಇಂತಿಷ್ಟು ಬೇಕು, ಇಂತಿಷ್ಟು ಕಾಮಗಾರಿಗಳು ಜನರಿಗೆ ಕೆಲಸ ಕೊಡುವುದಕ್ಕಾಗಿ ಬೇಕು ಎನ್ನುವುದನ್ನು ಮತ್ತೆ ಯಾರು ಹೇಳುವುದು ಸ್ವಾಮಿ? ನಾವು ಹೇಳಬೇಕಲ್ಲಾ, Mr.Mahadevappa is the Chairman of the Drought Monitoring Committee in T.Narasipur. ಅವರು ಹೇಳಬೇಕು. Mr.Srinivas Prasad is the Chairman. ಏಕೆಂದರೆ ನನಗೆ ಎಲ್ಲೂ ಬರುವುದಿಲ್ಲ, ಎಲ್ಲೋ ಒಂದೊಂದು ಹೋಬಳಿ ಬರುತ್ತವೆ. ಮುದ್ದೇಬಿಹಾಳ್ ನೀವು ಅದರಲ್ಲಿ ಬರುತ್ತೀರಿ, ನೀವೇ ಅಧ್ಯಕ್ಷರು. ಮಾನ್ಯ ಶ್ರೀನಿವಾಸ್ ಪ್ರಸಾದ್ ರವರೆ, ಒಂದಾದರೂ ಮೀಟಿಂಗ್ ಮಾಡಿದ್ದಾರೆಯೇ?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ : ಮೀಟಿಂಗ್ ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ : ಮಾಡಿಲ್ಲ ನೋಡಿ. ಇಂತಹ Senior Minister, Senior Member ಹೇಳುತ್ತಿದ್ದಾರೆಂದರೆ, how can the D.C get the first-hand information from the Taluk? There is no feed back to the D.Cs. No Tahsildar has conducted the meeting

under the Chairmanship of the MLA. ಮೀಟಿಂಗ್ ಮಾಡಿಲ್ಲ. ಇನ್ನು ವರದಿ ಎಲ್ಲಿದೆ? ಕುಡಿಯುವ ನೀರಿಗೆ ಎಷ್ಟು ಹಣ ಬೇಕಾಗುತ್ತದೆ, ಮೇವಿಗೆ ಎಷ್ಟು ಹಣ ಬೇಕಾಗುತ್ತದೆ ಎಂದು ನಿಮಗೆ ಹೇಗೆ ಗೊತ್ತಾಗುತ್ತದೆ? ಪಾವಗಡಕ್ಕೆ ಹೋಗೋಣ, ಮಧುಗಿರಿಗೆ ಹೋಗೋಣ, ಶಿರಾಗೆ ಹೋಗೋಣ. ಅಲ್ಲಿ ಬೆಳೆಯುವುದು ಒಂದೇ ಒಂದು ಬೆಳೆ ಶೇಂಗಾ. ಅದು ಒಣಗಿ ಹೋದ ಮೇಲೆ ಅವರಿಗೆ ಮೇವು ಎಲ್ಲಿಂದ ಬರುತ್ತದೆ ಹೇಳಿ? Where do they get fodder? ಕೆಲವು ತಾಲ್ಲೂಕುಗಳಲ್ಲಿ ಮೇವು ಇರಬಹುದು. ಎಲ್ಲಾ 100 ತಾಲ್ಲೂಕುಗಳಲ್ಲಿಯೂ ಮೇವು ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. But there are taluks where fodder ದು ಬಹಳ scarcity ಇದೆ. ಆ ತಾಲ್ಲೂಕುಗಳಲ್ಲಿ ಮೇವಿಗೆ ಏನು ಮಾಡಿದ್ದೀರಿ ಎಂದರೆ, ಇಲ್ಲ, ಮೇವಿಗೆ ತೊಂದರೆ ಇಲ್ಲ, ಇನ್ನು 6–7 ವಾರದವರೆಗೂ ಇದೆ. 17 ವಾರದವರೆಗೂ ಮೇವಿದೆ ಎಂದು ಹೇಳುತ್ತಾರೆ. ಎಲ್ಲಿದೆ ಮೇವು? ಹಾಗಾದರೆ ಶಿರಾ ತಾಲ್ಲೂಕಿನಲ್ಲಿ ಎಷ್ಟು ಟನ್ ಮೇವಿದೆ, ಪಾವಗಡದಲ್ಲಿ ಎಷ್ಟು ಟನ್ ಮೇವಿದೆ? ಹೊಳಲ್ಕೆರೆಯಲ್ಲಿ ಎಷ್ಟು ಟನ್ ಮೇವಿದೆ? ಮೊಳಕಾಲ್ಮೂರಿನಲ್ಲಿ ಎಷ್ಟು ಟನ್ ಮೇವಿದೆ? ಚಳ್ಳಕೆರೆಯಲ್ಲಿ ಎಷ್ಟು ಟನ್ ಮೇವಿದೆ ಎಂದು ಹೇಳಲಿ. ಮೇವು ಇರುವುದಕ್ಕೆ ಸಾಧ್ಯವಿಲ್ಲ ಮಾನ್ಯ ಮುಖ್ಯಮಂತ್ರಿಗಳೆ. ನಾನು ಒಬ್ಬ ರೈತನ ಮಗನಾಗಿ. . .

ಶ್ರೀ ಡಿ.ವಿ.ಸದಾನಂದಗೌಡ : ಒಂದು ನಿಮಿಷ ಮಾನ್ಯ ಅಧ್ಯಕ್ಷರೆ. . .

ಶ್ರೀ ಸಿದ್ದರಾಮಯ್ಯ : ದಯವಿಟ್ಟು ತಾವು ಸ್ವಲ್ಪ ಕುಳಿತುಕೊಳ್ಳಿ. ಜನರಿಗೆ wrong message ಹೋಗಬಾರದು. ಇಲ್ಲಿ Assembly ನಡೆಯುತ್ತಿದೆ ಸದಾನಂದಗೌಡರು ನಮಗೆ ಏನೋ ಕೊಡುತ್ತಾರೆ ಎಂದು ಪಾಪ ಅಲ್ಲಿ ರೈತರು ಕಾಯುತ್ತಾ ಕುಳಿತಿದ್ದಾರೆ. ನೀವು ಏನಾದರೂ ಹೇಳಿ. ಯಾರೋ ಅಧಿಕಾರಿಗಳು ಏನೋ ಮಾಹಿತಿಯನ್ನು ಕೊಟ್ಟಿದ್ದಾರೆ. ಇಲ್ಲಿ ಹಿಂದೆ ಇದ್ದಂತಹ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಸದನದಲ್ಲಿ ಘೋಷಣೆಯನ್ನು ಮಾಡಿದ್ದಾರೆ. ಕೃಷಿಮಂತ್ರಿಗಳಾದ ಶ್ರೀ ಎಸ್.ಎ. ರವೀಂದ್ರನಾಥ್‌ರವರೆ, ತಾವೇ ಇಲ್ಲಿ ಇದ್ದವರು. ನೀವು ಪ್ರತಿ ಪಂಚಾಯಿತಿಗೊಂದು Telemetric Rain Gauge ಇಡುತ್ತೇನೆಂದು ಹೇಳಿಲ್ಲವೇ? ತಾವು ಹೇಳಬೇಕು ಸ್ವಾಮಿ.

ಶ್ರೀ ಎಸ್. ಎ.ರವೀಂದ್ರನಾಥ್ : ಹೇಳಿದ್ದೆವು.

ಶ್ರೀ ಸಿದ್ದರಾಮಯ್ಯ : ಮತ್ತೆ ಇನ್ನೊಂದು ಸರಿ ಹೇಳಬೇಕೆ? 5600 ಗ್ರಾಮಪಂಚಾಯಿತಿಗಳಲ್ಲಿ ಇಷ್ಟು ಹೊತ್ತಿಗೆ ಆಗಲೇ ಇದನ್ನು ಮಾಡ ಬೇಕಾಗಿತ್ತು. 770 ಅಂದರೆ 5600ಕ್ಕೆ 770 ಎಷ್ಟನೇ ಒಂದು ಭಾಗ ಆಗುತ್ತದೆ. One and a half percent ಇದು ಸಾಕೇ? A promise is made by your predecessor, Hon'ble Chief Minister Sri. B.S.Yeddyurappa that in every Grama Panchayath center we are going to keep one Telemetric Rain Gauge. ಅದರಿಂದ ಏನಾಗುತ್ತದೆ ಎಂದು ನಿಮಗೆ ಹೇಳುತ್ತೇನೆ. ಇದರಿಂದ ಒಂದು ಬೆಳೆ ವಿಮೆಯನ್ನು ಕೊಡುವುದಕ್ಕೆ ಅನುಕೂ ಲವಾಗುತ್ತದೆ. No.1 ಪ್ರತಿ ಗ್ರಾಮಪಂಚಾಯಿತಿಯಲ್ಲಿ ಮಳೆ ಎಷ್ಟು ಬಿತ್ತೆಂದು ಸರಿಯಾಗಿ ಗೇಜ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಏನು ಸ್ವಾಮಿ, ಮಾನ್ಯ ರವೀಂದ್ರನಾಥ್‌ರವರೆ. ಈಗ ಸರಿಯಾಗಿ ಬೆಳೆ ವಿಮೆಯನ್ನು ನಿಗದಿ ಮಾಡುವುದಕ್ಕಾಗುತ್ತಿಲ್ಲ. ಮಳೆ ಎಷ್ಟು ಬಿತ್ತೆಂದು ಗೊತ್ತಾಗುವುದಿಲ್ಲ. ಹಾಗಾಗಿ ಹೋಬಳಿ ಮಟ್ಟದಲ್ಲಿ ಇದು ಇದ್ದರೆ ಒಂದು ಹೋಬಳಿಯಲ್ಲಿ 50 ಹಳ್ಳಿಗಳು ಇರುತ್ತವೆ. 10 ರಿಂದ 12 ಪಂಚಾಯಿತಿಗಳು ಇರುತ್ತದೆ, ವಿಧಾನ ಸೌಧದಲ್ಲಿ ಮಳೆ ಬಿದ್ದರೆ ನಮ್ಮ ಮನೆ ಗಾಂಧಿ ಭವನದ ಹತ್ತಿರ ಮಳೆ ಬಿದ್ದಿರುವುದಿಲ್ಲ. How can that Telemetric Rain Guage in Hobli level do? ಅದರಿಂದ ನಾನು ಏನು ಹೇಳುತ್ತಿದ್ದೇನೆಂದರೆ, I demand the Government, please ಪ್ರತಿ ಪಂಚಾಯಿತಿಗೆ ಒಂದು ಮಾಡಿದರೆ ಅನುಕೂಲ ವಾಗುತ್ತದೆ. ಇದರಿಂದ ಸಾವಿರಾರು ಕೋಟಿ ರೂಪಾಯಿಗಳು ಖರ್ಚಾಗು ವುದಿಲ್ಲ ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಒಂದು functioning Telemetric Rain Guage ಅನ್ನು ದಯಮಾಡಿ ಈಗಲಾದರೂ ಇಡಿ. ಇಷ್ಟೊಂದು ಭೀಕರವಾದಂತಹ ಬರಗಾಲವು ಬಂದಿದೆ, ದಯಮಾಡಿ ಇಡಬೇಕು. ಎರಡನೆಯದಾಗಿ, ಬೆಳೆ ವಿಮೆ ಅದನ್ನು scientific ಆಗಿ ಮಾಡುವುದನ್ನು ಸಹ ಬದಲಾವಣೆ ಮಾಡಬೇಕು. ಏಕೆಂದರೆ, ಯಾರು insurance ಮಾಡಿಸಿ ದ್ದಾರೆ ಅವರಿಗೆ ಮಾತ್ರ ಕೊಡುತ್ತೇವೆ. Insurance ಮಾಡಿಸಿಲ್ಲದವರಿಗೆ ಸಿಗುವು ದಿಲ್ಲ. ಯಾರು ಅಲ್ಲಿ premium ಕಟ್ಟಿರುತ್ತಾರೋ ಅವರಿಗೆ ಕೊಡುತ್ತೇವೆ. So many people premium ಕಟ್ಟಿರುವುದಿಲ್ಲ. ಅವರೆಲ್ಲರಿಗೂ ಬೆಳೆ ವಿಮೆ ಸಿಗುವುದಿಲ್ಲ. ಅದಕ್ಕೆ ನಾನು ಹೇಳಿದ್ದು Co-operative Minister, ಮಾನ್ಯ

ಮುಖ್ಯಮಂತ್ರಿಗಳೆ, ಸಣ್ಣ ರೈತರು ಮತ್ತು ಅತಿಸಣ್ಣ ರೈತರಿಗೆ Scheduled Caste & Scheduled Tribes ಇವರಿಗೆ ನಾವೇ premium ಕಟ್ಟುವ ಹಾಗೆ ದಯಮಾಡಿ ಮಾಡಿ ಅದೇನು ಭಾರಿ ಹಣವಾಗುವುದಿಲ್ಲ. Premium ಹಣವನ್ನು ನೀವೇ ಕಟ್ಟಿ, Scheduled caste people, they are after all 13%. ಇಡೀ ರಾಜ್ಯದಲ್ಲಿ about 12-13% holdings ಇರುವಂತಹ scheduled Caste & Scheduled Tribes ಜನರು ಇದ್ದಾರೆ. ಈ ಬಗ್ಗೆ ನಾನು ಓದಿಕೊಂಡು ಹೇಳುತ್ತಿದ್ದೇನೆ. ನಾನು Agricultute Holdings ಇದೆ ಎಂದು ಹೇಳುತ್ತಿದ್ದೇನೆ. Population ಅಲ್ಲ, agriculture holdings, ಜಮೀನು ಇರುವವರು 12 to 13% ಇದ್ದಾರೆ. Small and marginal farmes ಒಂದು ಹೆಕ್ಟೇರಿಗಿಂತ ಕಡಿಮೆ ಇರುವಂತಹ marginal farmers 48% ಇದ್ದಾರೆ. 1 to 2 hectares ಇರುವಂತಹ small farmers 26% ಇದ್ದಾರೆ. Both of them put together it comes to about 75%. ಅವರಿಗೆ premium ಕೊಡಿ ಆಗ ಅವರು ಉದ್ಧಾರವಾಗುತ್ತಾರೆ. ಆ ಜನರು ಆತ್ಮಹತ್ಯೆಯನ್ನು ಮಾಡಿಕೊಳ್ಳುವವರು, 1 ರಿಂದ 2 ಹೆಕ್ಟೇರ್ ಇರುವವ ರಾಗಿದ್ದಾರೆ. Please give them. ಅವರಿಗೆ premium ಕಟ್ಟಿ. ಅವರಿಗೆ ಸಿಗಲಿ, ಅವರಿಗೆ scientific ಆಗಿ insurance ಮಾಡಿಸಿ. ಅವರ ಪರವಾಗಿ ನೀವೇ Premium ಕಟ್ಟಿಬಿಡಿ ಇದನ್ನು ತಾವು ಮಾಡಿ ಇದಕ್ಕೆ ನಾವು ಒಪ್ಪಿಗೆಯನ್ನು ಕೊಡುತ್ತೇವೆ. Please ಇದನ್ನು ಮಾಡಿ, ಇದರಿಂದ ರೈತರಿಗೆ ಅನುಕೂಲ ವಾಗುತ್ತದೆ. ಮೂರನೆಯದಾಗಿ, CRF Norms ನ್ನು ಕೇಂದ್ರ ಸರ್ಕಾರದವರು ಮಾಡಿದ್ದಾರೆ, ಈ ಬಗ್ಗೆ ನಾವೇನೂ ಮಾಡುವುದಕ್ಕಾಗುವುದಿಲ್ಲ. ಅದನ್ನು ಯಾವುದೋ ಕಾಲದಲ್ಲಿ ಮಾಡಿದ್ದಾರೆ. Rain-fed area ದಲ್ಲಿದ್ದ ಒಂದು ಹೆಕ್ಟೇರ್‌ಗೆ ಎರಡು ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದರು. ಈ ಬಗ್ಗೆ ನಾನು ಆಗಲೇ ಹೇಳಿದ್ದೇನೆ. ಶೇಂಗಾವನ್ನು ಬೆಳೆಯುವುದಕ್ಕೆ ಒಂದು ಹೆಕ್ಟೇರ್‌ನಲ್ಲಿ ಎರಡು ಸಾವಿರ ರೂಪಾಯಿಗಳು ಖರ್ಚಾಗುತ್ತದೆ. ಒಂದು ಹೆಕ್ಟೇರ್‌ಗೆ ಇಪ್ಪತ್ತು ಸಾವಿರ ರೂಪಾಯಿಗಳು ಖರ್ಚಾಗುತ್ತದೆ. Small and marginal Farmers ಗೆ ಕನಿಷ್ಟ ಪಕ್ಷ ಒಂದು ಹೆಕ್ಟೇರ್ ನೀವು ಇಪ್ಪತ್ತು ಸಾವಿರ ರೂಪಾಯಿಗಳನ್ನಾದರೂ ಕೊಡಬೇಕು. Please do it. ಇದನ್ನು

ತಾವು change ಮಾಡಿ. ನೀವು ರಾಜ್ಯ ಸರ್ಕಾರ ದಿಂದ ಕೊಡಿ. Why do you depend upon the Government of India? Government of India ಒಂದು National Disaster Relief fund ಎಂದು ಮಾಡುತ್ತಾರೆ. ಆ ಬಗ್ಗೆ ಪ್ರತಿ ವರ್ಷವು Finance Commission ಗಳು recommend ಮಾಡುತ್ತವೆ. ಈಗ 13th Finance Commission ಎಷ್ಟು ಇರಬೇಕೆಂದು recommend ಮಾಡಿರುತ್ತಾರೆ. ಅದನ್ನು ಎಲ್ಲಾ ರಾಜ್ಯಗಳಿಗೂ ಹಂಚುತ್ತಾರೆ depending upon the seriousness of the drought or the flood. Please don't go by the norms or the guidelines. ಒಂದು ವೇಳೆ ನಾವು ಖರ್ಚು ಮಾಡಿದ್ದೇವೆಂದು ಇಟ್ಟುಕೊಳ್ಳೋಣ. ನಾನು Former Finance Minister ಆಗಿ ಹೇಳುತ್ತಿದ್ದೇನೆ ಅಥವಾ ನೀವು Chief Minister ಇರುತ್ತೀರಿ, 4000 ಕೋಟಿ ರೂಪಾಯಿಗಳನ್ನು ಕೊಟ್ಟುಬಿಟ್ಟರೆ ನಮಗೆ fund ಅಥವಾ grants ಕೊಡುವುದನ್ನು ನಿಲ್ಲಿಸುತ್ತಾರೆಯೇ? ನಮ್ಮ ಹತ್ತಿರ ದುಡ್ಡು ಇದೆ ನಾವು ಕೊಡುತ್ತೇವೆಂದು ಹೇಳುತ್ತೇವೆ. Who are they to ask us? ಅವರು norms ಪ್ರಕಾರ ಏನು ಕೊಡಬೇಕೋ ಅದನ್ನು ಕೊಡುತ್ತಾರೆ. ನಾವು ಇನ್ನು ಜಾಸ್ತಿ ಮಾಡಿ ಎಂದು ಬೇಕಾದರೆ ಕೇಳಬಹುದು. But as far as Karnataka Government is concerned, to protect the interest of our farmers, to protect the poor people, marginal and small farmers, let us enhance the compensation, let us give it from our Treasury. Which law comes in the way? I want to know. There is no Law. There is no legal impediment. ಆದ್ದರಿಂದ ನಾವು ರೈತರನ್ನು protect ಮಾಡಬೇಕು. ಈ ಬಗ್ಗೆ ನಾವೇನೂ ಹೇಳಿರಲಿಲ್ಲ ಅಥವಾ ನೀವೇ ಹೇಳಿದ್ದೀರಿ. ನಮಗೆ ಬಹಳ ಸಂತೋಷ. O.K. ನಾವು ಈ ಬಗ್ಗೆ welcome ಮಾಡಿದ್ದೇವೆ. ತಾವು ರೈತರ ಹೆಸರಿನ ಮೇಲೆ ಪ್ರಮಾಣ ವಚನ ತೆಗೆದು ಕೊಂಡಿದ್ದೀರಿ, ರೈತರ ಪರವಾಗಿ Separate Budget ಮಂಡಿಸಿದ್ದೀರಿ, Alright, ಇದನ್ನು ಮಾಡಿ. ಬರೀ ಬಜೆಟ್ ಮಂಡಿಸಿದ್ದೇವೆ, 61,000 ಕೋಟಿ ರೂಪಾಯಿಗಳು ಕರ್ನಾಟಕಕ್ಕೆ ಹರಿದು ಬರುತ್ತದೆ, Global Investors Meet ಮಾಡಿದ್ದೇವೆ, ಇದರಿಂದಾಗಿ ರೈತರಿಗೆ ಉಪಯೋಗವಾ ಗುವುದಿಲ್ಲ. ನಿಜವಾಗಿಯೂ ರೈತರು ಕಷ್ಟದಲ್ಲಿರುವಾಗ ಅದಕ್ಕೆ ಸರ್ಕಾರದವರು positive

ಆಗಿ ಸ್ಪಂದಿಸಿದಾಗ ಆಗ ರೈತರು farmers are going to be benefited, agriculture Labours are going to be benefited. ಅವರ ದನಕರುಗಳನ್ನು ನೀವು ರಕ್ಷಣೆ ಮಾಡಿದಾಗ ಆಗುತ್ತದೆ. ಅವರಿಗೆ ಕೆಲಸ ಸಿಕ್ಕಿದಾಗ, ಅವರು ಗುಳೆ ಹೋಗುವುದನ್ನು ತಪ್ಪಿಸಿದಾಗ, ಅವರಿಗೆ ಕುಡಿಯು ವುದಕ್ಕೆ ನೀರನ್ನು ಕೊಟ್ಟಾಗ, ಅವರಿಗೆ ಅನ್ನವನ್ನು ಕೊಟ್ಟಾಗ ಅನುಕೂಲವಾ ಗುತ್ತದೆ. ಈಗ NREGS ಕೆಲಸ ಮಾಡುತ್ತಿದೆ ಎಂದು ಹೇಳುತ್ತೀರಿ, I am asking the Government, NREGS ನಲ್ಲಿ Job Card ಇಲ್ಲದವರಿಗೆ ಕೆಲಸವನ್ನು ಕೊಡುವುದಕ್ಕೆ ಬರುತ್ತದೆಯೇ? ಇವರಿಗೆ ನೀವು ಹೇಗೆ ಕೆಲಸವನ್ನು ಕೊಡುತ್ತೀರಿ? ಬರ ಬರುವುದಕ್ಕಿಂತ ಮುಂಚಿತವಾಗಿ ಒಂದು ವರ್ಷದ ಹಿಂದೆಯೇ action plan ಆಗಿದೆ. ನನ್ನ ಸಲಹೆಗಳನ್ನು ಅನುಭವದಿಂದ ಹೇಳುತ್ತಿದ್ದೇನೆ. ತಾವು ದಯಮಾಡಿ ಕೇಳಿ. ಇದರಿಂದ ಸರ್ಕಾರಕ್ಕೆ ಭಾರಿ ಭಾರ ಏನೂ ಆಗುವುದಿಲ್ಲ. It is not going to be a very big burden ಅಥವಾ unbearable burden ಏನೂ Government ಗೆ ಆಗುವುದಿಲ್ಲ. ಒಂದು ಲಕ್ಷ ಕೋಟಿ ರೂಪಾಯಿಗಳ ಬಜೆಟ್ ಅನ್ನು ಮಂಡಿಸಬೇಕೆಂದು ಇದ್ದೇವೆ ಎಂದು ಒಂದು ಕಡೆಯಲ್ಲಿ ಹೇಳುತ್ತಾರೆ. ನಿಮಗೆ ಆಸೆ ಇದೆ, ತಾವು ಮಂಡಿಸಿ, ನಮಗೆ ಸಂತೋಷ. ಮತ್ತೆ ಇಲ್ಲಿ ಅದನ್ನು ಕೊಡಬೇಕಲ್ಲಾ? ತಾವು ಜನರಿಗೆ ದುಡ್ಡನ್ನು ಕೊಡಬೇಕಲ್ಲ? ನೀವು ಬಡವರಿಗೆ ಹಣವನ್ನು ಕೊಡಬೇಕಲ್ಲ? ಇವತ್ತು ಕೆಲವು changes ಮಾಡೋಣ, 2009ರ September, October ನಲ್ಲಿ floods ಆಯಿತು, ಇವತ್ತಿನವರೆಗೂ ಎಲ್ಲರಿಗೂ ಮನೆಯನ್ನು ಕಟ್ಟಿಸಿಕೊಡುವುದಕ್ಕಾಗಲಿಲ್ಲ. ಆ ರೀತಿಯಾಗಿ ನಾವು ಹೇಳಿದರೆ ಯಾರೂ ಕಟ್ಟಿಸಿಲ್ಲ, ನಾವು 58000 ಮನೆಗಳನ್ನು ಕಟ್ಟಿಸಿಲ್ಲವೇ ಎಂದು ಹೇಳುತ್ತಾರೆ. ಅದರಲ್ಲಿ ದಾನಿಗಳು 25,000 ಮನೆಗಳನ್ನು ಕಟ್ಟಿಸಿದ್ದಾರೆ. ಆ ವರ್ಷ ಕೇಂದ್ರ ಸರ್ಕಾರದಿಂದ 1500 ಚಿಲ್ಲರೆ ಕೋಟಿ ರೂಪಾಯಿಗಳು ಬಂದಿದೆ. ಆವತ್ತಿನ ದಿವಸ ಭಾರತದ ಪ್ರಧಾನ ಮಂತ್ರಿಗಳಾದ ಮನಮೋಹನ್ ಸಿಂಗ್ ರವರು ಇಲ್ಲಿಗೆ ಬಂದು ನೋಡಿಕೊಂಡು ಹೋಗಿ ಪ್ರವಾಹಕ್ಕೋಸ್ಕರ National Calamity Contingency Fund ನಿಂದ Special Grants ಅನ್ನು ಕೊಟ್ಟರು. ಮನೆ ಕಟ್ಟುವುದಕ್ಕೆ ಒಟ್ಟು ಖರ್ಚಾಗಿರುವುದು ಎಷ್ಟೆಂದರೆ ಸುಮಾರು ರೂ.600 ಕೋಟಿ. ಕರ್ನಾಟಕ ಸರ್ಕಾರದಿಂದ 30,000 ಮನೆಗಳನ್ನು

ಕಟ್ಟಿಸಿಕೊಟ್ಟಿದ್ದಾರೆ. 30,000 X 1,25,000 ಎಂದರೆ ಎಷ್ಟು ಆಯಿತು ಸ್ವಾಮಿ? ಸುಮಾರು 400 ಕೋಟಿ ರೂ. ಆಗಿರಬಹುದು. ನೀವು ಕರ್ನಾಟಕದ ಖಜಾನೆಯಿಂದ ಏನು ಖರ್ಚು ಮಾಡಿದ್ದೀರಿ? ಅದಕ್ಕೆ ಉತ್ತರ ಹೇಳುವುದಿಲ್ಲ. ಯಾರೂ ಮಾಡಿರಲಿಲ್ಲ, ನಾನು ಮಾಡಿದೆ ಎಂದು ಯಡಿಯೂರಪ್ಪನವರು ಹೇಳುತ್ತಾರೆ, ಪಾಪ, ನೀವೇನೂ ಇನ್ನೂ ಹಾಗೆ ಹೇಳಿಲ್ಲವೆಂದು ಇಟ್ಟು ಕೊಳ್ಳೋಣ. ಆಮೇಲೆ 439 ಕೋಟಿ ದಾನಿಗಳಿಂದ ದುಡ್ಡು ಬಂದಿದೆ. ಆಮೇಲೆ ಈ Flood ನಲ್ಲಿ ಕೆರೆ ಒಡೆದು ಹೋಗಿ ಇವತ್ತಿನವರೆಗೆ ಸರಿಹೋಗಿಲ್ಲ. ನೋಡಿ, ನಮ್ಮ ಎಂ.ಎಲ್.ಎ. ಹೇಳುತ್ತಿದ್ದಾರೆ. ಆದ್ದರಿಂದ ನಾವು let us not be Hypocrites. ರೈತರಿಗೆ ಏನು ಮಾಡಲಿಕ್ಕಾಗುತ್ತದೆ ಅದನ್ನು ಪ್ರಾಮಾಣಿಕವಾಗಿ ಮಾಡೋಣ. ಮಾಡಲಿಕ್ಕಾಗುವುದಿಲ್ಲವೆಂದರೆ ಅದನ್ನು ಮಾಡಲಿಕ್ಕಾಗುವುದಿಲ್ಲ. ನಮ್ಮಲ್ಲಿರುವ ಹಣದಲ್ಲಿ ಇಷ್ಟಾಗುತ್ತದೆ ಎಂದು ಹೇಳಬೇಕು. ಬರ ಬಂದಾಗ ಏನು ಮಾಡುತ್ತಾರೆಂದರೆ ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ನಿಲ್ಲಿಸಿ ಬರಪರಿಹಾರ ಕೆಲಸ ಮಾಡಿ ಎಂದು ನಾವು ಹೇಳುವುದು. You stop all other developmental activities. Go ahead with the drought relief Works. That should be the motto of the Government; that should be the attitude of the Government. War-footing ಎಂದರೇನು ಅರ್ಥ? Suspend all other developmental activities. Give relief to affected people. ಇದು ನಮಗೆ seriousness ಇರುವಂಥದ್ದು. ನಾವು ರೈತರಿಗಾಗಿ ರೈತರ ಬಗ್ಗೆ ಕಾಳಜಿ ಇರಬೇಕು, ಬೇರೆ ಸರ್ಕಾರಗಳಿಗೆ ನಿಮ್ಮಷ್ಟು ಪ್ರಾಮಾಣಿಕತೆ, ಕಾಳಜಿ ಇರಲಿಲ್ಲವೆಂಬುದನ್ನು ಒಪ್ಪಿಕೊಳ್ಳೋಣ. But ಇಲ್ಲಿ ಕೆಲಸದಲ್ಲಿ ಪ್ರಾಮಾಣಿಕತೆ, ಕಾಳಜಿ ತರಿಸಬೇಕಲ್ಲವೇ? ಬಾಯಿ ಮಾತಿನಲ್ಲಿ ಬಂದರೆ ಮೂಗಿಗೆ ತುಪ್ಪ ಹಚ್ಚಿಬಿಟ್ಟರೆ, ತುಪ್ಪದ ರುಚಿ ಗೊತ್ತಾಗಬೇಕಲ್ಲವೇ? ಮೂಗಿಗೆ ತುಪ್ಪ ಹಚ್ಚಿಬಿಟ್ಟು ವಾಸನೆ ಕುಡಿಯಿರಿ ಅಂದರೆ ಹೇಗೆ? So, that is my point. ಆದ್ದರಿಂದ ನಾವು ನಿಮ್ಮಿಂದ ಏನೋ ನಿರೀಕ್ಷೆ ಮಾಡಿದ್ದೆವು. ಇವತ್ತು ನನ್ನ ಪ್ರಕಾರ I once again accuse this Government. ಬರ ಪರಿಹಾರ ಕೆಲಸ ಈ ಸರ್ಕಾರದಿಂದ ಇನ್ನೂ ಪ್ರಾರಂಭವಾಗಿಲ್ಲ. ಒಂದು ರೂಪಾಯಿ ಖರ್ಚಾಗಿಲ್ಲ. ಎಲ್ಲೂ ಮೇವು ಬ್ಯಾಂಕುಗಳು ಆಗಿಲ್ಲ. ಚಿತ್ರದುರ್ಗದಲ್ಲಿ ಐದಾರು ಕಡೆ ಬಿಟ್ಟರೆ ಎಲ್ಲಿಯೂ ಗೋಶಾಲೆಗಳು ನಡೆಯುತ್ತಿಲ್ಲ. ಕುಡಿಯುವ ನೀರಿಗೆ ಒಂದು

ಬೋರ್‌ವೆಲ್ ಎಲ್ಲಿಯೂ ಕೊರೆದಿಲ್ಲ. ರೈತರು ಗುಳೆ ಹೋಗುತ್ತಿದ್ದಾರೆ. ದನಕರುಗಳು ಕಸಾಯಿಖಾನೆಗೆ ಹೋಗುತ್ತಿವೆ. Throw-away price ಗೆ ಮಾರಾಟ ಮಾಡುತ್ತಿದ್ದಾರೆ. All these things are true and this is the actual situation in rural area. ಹಾಗಾಗಿ I am very very unhappy with your reply, Hon'ble Chief Minister. I am really very unhappy. ಬಹುಶಃ ನಾವೆಷ್ಟು ಜನ ಈ ಚರ್ಚೆಯಲ್ಲಿ ಭಾಗವಹಿಸಿದ್ದೆವೋ all are unhappy with the reply of the Hon'ble Chief Minister. Am I correct? It looks like that. ನೀವು ಕೂಡ ಹಾಗೆ ಆಡಳಿತ ಪಕ್ಷದಲ್ಲಿದ್ದರೂ ನೀವ್ಯಾರೂ ಆತ್ಮವಂಚನೆ ಮಾಡಿಕೊಳ್ಳಬೇಡಿ. ಆತ್ಮಸಾಕ್ಷಿಯಾಗಿ ಹೇಳಿ, ನಿಮ್ಮ ಕ್ಷೇತ್ರದಲ್ಲಿಯೂ ದೇವರಾಣೆ ಯಾವುದೇ ಕೆಲಸ ಆಗಿಲ್ಲ, ನಾನು ಹೇಳಿಬಿಡುತ್ತೇನೆ. ಜೆ.ಡಿ.(ಎಸ್)ನವರದು ಆಗಿದೆಯೇ? ಇಲ್ಲ. ನೋಡಿ, ನಾವೆಲ್ಲರೂ ಸುಳ್ಳು ಹೇಳುತ್ತೇವೆಯೇ? ದಯವಿಟ್ಟು ಕೇಳಿ, ಎಲ್ಲರೂ clarification ಕೇಳಿದ ಮೇಲೆ ಒಟ್ಟಿಗೆ ಉತ್ತರ ಹೇಳಿಬಿಡಿ. ಆದ್ದರಿಂದ ಮಾನ್ಯ ಅಧ್ಯಕ್ಷರೆ, I am very very unhappy. ನಾನು ಸದಾನಂದಗೌಡರಿಂದ ಸದಾ ನಗುತ್ತಿದ್ದ ಗೌಡರು ನಿನ್ನೆ ಹಾಗೂ ಇವತ್ತೇಕೋ ಸ್ವಲ್ಪ ಸಪ್ಪಗೆ ಆಗಿ ಬಿಟ್ಟರು. ಅಲ್ಲಿದೆ ಇವತ್ತಿನ ಅವರ ಉತ್ತರ ನಮ್ಮ ನಿರೀಕ್ಷಿತ ರೀತಿಯಲ್ಲಿರಲಿಲ್ಲ. ನನಗೆ ಇರಲಿ, ಜನರಿಗೆ ಅನುಕೂಲವಾಗುವಂಥ ರೀತಿಯಲ್ಲಿಲ್ಲ. ಬರ ಪರಿಹಾರ ಮಾಡುವಂಥ ಆ seriousness ಹೇಳತಕ್ಕಂಥ ರೀತಿಯಲ್ಲಿರಲಿಲ್ಲ. ಆದ್ದರಿಂದ ನನಗೆ ಬಹಳ ಅಸಂತೋಷವಾಗಿದೆ, ನಿರಾಸೆಯಾಗಿದೆ, ದುಃಖವಾಗುತ್ತಿದೆ. ಹಿಂದೆ ಏನಾಯಿತು ಎಂಬುದನ್ನು ಬಿಟ್ಟುಬಿಡೋಣ. ಈಗಲಾದರೂ ಕೂಡ ದಯಮಾಡಿ, ಇವತ್ತಿನಿಂದಲಾದರೂ Please start relief works on War-footing ಎಂದು ಹೇಳಿ ನಮ್ಮ ಹಳ್ಳಿಗಾಡಿನಲ್ಲಿರತಕ್ಕಂಥ ರೈತರ ಪರವಾಗಿ ನಾನು ಈ ಮನವಿಯನ್ನು ತಮ್ಮಲ್ಲಿ ಮಾಡುತ್ತೇನೆ.

ಶ್ರೀ ಡಿ.ವಿ.ಸದಾನಂದಗೌಡ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಿದ್ದರಾಮಯ್ಯನವರು ಒಂದು task-force ಸಮಿತಿಯವರು ಇನ್ನೂ ಕೂಡ ಯಾವುದೇ ಕ್ಷೇತ್ರ, ಜಿಲ್ಲೆಗಳಲ್ಲಿ ಮೀಟಿಂಗ್ ಮಾಡಲಿಲ್ಲವೆಂದು ಬಹಳ ಪ್ರಮುಖವಾಗಿ ಪ್ರಶ್ನಿಸಿದ್ದಾರೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿಯೂ ಬರ ಬಂದಿದೆ. ಎಲ್ಲಾ ಕ್ಷೇತ್ರಗಳಲ್ಲಿಯೂ, ಇಲ್ಲಿ ಕುಳಿತವರೆಲ್ಲರ ಬಗ್ಗೆ ಹೇಳುವುದು. ನನ್ನ ಕ್ಷೇತ್ರದಲ್ಲಿ ಹಾಗೂ

ಒಬ್ಬ ಶಾಸಕರ ಕ್ಷೇತ್ರದಲ್ಲಿ ಬರ ಬಂದಿದೆ. ಆ ಕ್ಷೇತ್ರದ ಶಾಸಕ ಆ by-task-force ಸಮಿತಿ ಅಧ್ಯಕ್ಷ. ಅಲ್ಲಿ ಮೀಟಿಂಗ್ ಕರೆಯಲಿಕ್ಕೆ ಯಾರು initiation ತೆಗೆದುಕೊಳ್ಳಬೇಕು? ಅಲ್ಲಿ ಮೀಟಿಂಗ್ ಕರೆಯುವಂಥದ್ದು ಅಲ್ಲಿನ ಜನಪ್ರತಿನಿಧಿಯ ಜವಾಬ್ದಾರಿ. ನನ್ನ ಕ್ಷೇತ್ರದಲ್ಲಿ ಬರ ಬಂದಿದೆ, ನಾನು task-force ಸಮಿತಿ ಅಧ್ಯಕ್ಷ. ಆದ ಕಾರಣ ನಾನು ಮೀಟಿಂಗ್ ಕರೆದು ನನ್ನ ಜನರಿಗೆ ಸರಿಮಾಡಬೇಕು ಎಂಬುದನ್ನು ಬಿಟ್ಟು ಬೇರೆ ಎಲ್ಲಿಯೂ ಮಾಡಲಿಲ್ಲ. ಸರ್ಕಾರ task-force committee meeting ಕರೆಯಲಿಲ್ಲ ಎಂದು ಕೇಳುವುದರ ಔಚಿತ್ಯವೇನು ಎಂಬುದನ್ನು ನಾನು ಪ್ರಶ್ನೆ ಮಾಡುತ್ತಿದ್ದೇನೆ. ನಾನು ಎಲ್ಲಾ ಶಾಸಕರಲ್ಲಿ ವಿನಂತಿಸುತ್ತೇನೆ. ತಕ್ಷಣ ನೀವು ನಿಮ್ಮ task-force committee meeting ಕರೆಯಿರಿ. ನಿಮ್ಮಲ್ಲಿ ಎಷ್ಟು ಹಣ ಖರ್ಚಾಗಿದೆ ಎಂಬುದನ್ನು ನೀವು ನೋಡಿ. ಹಣ ಖರ್ಚಾಗಿಲ್ಲವೆಂದರೆ ಅದನ್ನು ಸರ್ಕಾರದ ಗಮನಕ್ಕೆ ತನ್ನಿ. ಆ ಹಣವನ್ನು ಖರ್ಚು ಮಾಡಿಸುವಂಥದ್ದಕ್ಕೆ ಸರ್ಕಾರ ಬದ್ಧವಾಗಿದೆ, ಆ ಕೆಲಸವನ್ನು ಮಾಡುತ್ತೇವೆ. ಈಗಾಗಲೇ ಯಾವ್ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಹಣ ಇದೆ ಎಂಬ ವಿವರ ನನ್ನನ್ನು ಕೇಳಿದರು. ಸಿದ್ಧರಾಮಯ್ಯನವರೇ ಅದನ್ನು ಹೇಳುತ್ತೇನೆ.

ಶ್ರೀ ಸಿದ್ಧರಾಮಯ್ಯ : ಅದು ಗೊತ್ತು. 89 ಕೋಟಿ ರೂಪಾಯಿಗಳಿವೆ ಎಂಬುದು ಗೊತ್ತು. ಎಲ್ಲಾ ಜಿಲ್ಲೆಗಳಿಗೂ ಸ್ವಲ್ಪ ಸ್ವಲ್ಪ ಹಂಚುತ್ತಾರೆ.

ಶ್ರೀ ಡಿ.ವಿ.ಸದಾನಂದಗೌಡ : 154 ಕೋಟಿ ರೂಪಾಯಿಗಳಿವೆ.

ಶ್ರೀ ಸಿದ್ಧರಾಮಯ್ಯ : ಅದು P.D.Account ನಲ್ಲಿರುವುದು.

ಶ್ರೀ ಡಿ.ವಿ.ಸದಾನಂದಗೌಡ : 154 ಕೋಟಿ ರೂಪಾಯಿಗಳಿವೆ. ಈ task-force ಸಮಿತಿ ಅಧ್ಯಕ್ಷರು ಮೀಟಿಂಗ್ ಕರೆದು ಹಣವನ್ನು ಖರ್ಚು ಮಾಡಬೇಕೆಂದು ಹೇಳುವ ಜವಾಬ್ದಾರಿ ಇಲ್ಲದಿದ್ದರೆ ನಾನು ಅದಕ್ಕೆ ಏನು ಮಾಡಲಿ? ಅದರ ಬಗ್ಗೆ ವಾರಕ್ಕೊಮ್ಮೆ ರಾಜ್ಯದಲ್ಲಿ ಮಾನಿಟರ್ ಮಾಡು ತ್ತಿದ್ದೇನೆ. ಜಿಲ್ಲೆಗಳಿಗೆ ಹೋಗಿ ಅಲ್ಲಿ ಕೆಲಸ ಕಾರ್ಯಗಳನ್ನು ಮಾಡುವಂತಹ ಮಾನಿಟರ್ ಮಾಡಿದ್ದೇವೆ. ನಾನು ಎಲ್ಲಾ ಜಿಲ್ಲೆಗಳ ಬಗ್ಗೆ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಕೆಲವೇ ಕೆಲವು ಜಿಲ್ಲೆಗಳ ಬಗ್ಗೆ ಹೇಳುತ್ತೇನೆ. ಬೆಳಗಾಂನಲ್ಲಿ 16.00 ಕೋಟಿ ರೂಪಾಯಿಗಳು, ಬಳ್ಳಾರಿಯಲ್ಲಿ 6.25 ಕೋಟಿ ರೂಪಾಯಿ ಗಳು, ಬಿಜಾಪುರದಲ್ಲಿ 5.45 ಕೋಟಿ ರೂಪಾಯಿಗಳು, ಚಿತ್ರದುರ್ಗದಲ್ಲಿ 5.11 ಕೋಟಿ ರೂಪಾಯಿಗಳು, ಹಾವೇರಿಯಲ್ಲಿ 6.95 ಕೋಟಿ ರೂಪಾಯಿಗಳು,

ಕೊಪ್ಪಳದಲ್ಲಿ 6.65 ಕೋಟಿ ರೂಪಾಯಿಗಳು, ಮಡಿಕೇರಿಯಲ್ಲಿ 5.10 ಕೋಟಿ ರೂಪಾಯಿಗಳು, ರಾಯಚೂರಿನಲ್ಲಿ 11.80 ಕೋಟಿ ರೂಪಾಯಿಗಳು ಇವೆ. ಈ ರೀತಿ ಪ್ರತಿ ಜಿಲ್ಲೆಯಲ್ಲಿಯೂ ಕೂಡ ಇವತ್ತು ಪಿ.ಡಿ.ಅಕೌಂಟ್‌ನಲ್ಲಿ ಹಣವಿದೆ. ನಾನು task-force ಸಮಿತಿಯ ಎಲ್ಲಾ ನಮ್ಮ ಅಧ್ಯಕ್ಷರಿಗೆ ಸೂಚನೆಗಳನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ : ಯಾವ್ಯಾವ ಜಿಲ್ಲೆಗಳಲ್ಲಿ ಎಷ್ಟು ಹಣ ಇದೆ, ಎಷ್ಟು ಖರ್ಚಾಗಿದೆ? ಯಾವ ಅಕೌಂಟ್, ಎಷ್ಟು ಖರ್ಚಾಗಿದೆ? ಈ ಬಗ್ಗೆ ಮಾಹಿತಿ ಕಳುಹಿಸಿ ಕೊಡಿ.

ಶ್ರೀ ಡಿ.ವಿ. ಸದಾನಂದಗೌಡ : ಅದರ ಬಗ್ಗೆ ಮಾಹಿತಿಯನ್ನು ಕಳುಹಿಸಿ ಕೊಡುತ್ತೇನೆ. ಎರಡನೆಯದಾಗಿ, ತಾವು ಹಣವನ್ನು ಖರ್ಚು ಮಾಡಿಲ್ಲವೆಂದು ಹೇಳುವಂಥದ್ದು. ಈಗಾಗಲೇ ಸುಮಾರು 15.00 ಚಿಲ್ಲರೆ ಕೋಟಿ ರೂಪಾಯಿ ಗಳಷ್ಟು ಖರ್ಚಾಗಿದೆ. Detail report ನಿಮಗೆ ಕಳುಹಿಸಿ ಕೊಡುತ್ತೇನೆ. ಅದರಲ್ಲೇನೂ ಮುಚ್ಚುಮರೆ ಇಲ್ಲ. ನಾನು particulars ತೆಗೆದುಕೊಂಡು ಕಳುಹಿಸಿಕೊಡುತ್ತೇನೆ. ಏಕೆಂದರೆ CRF guidelines ನಲ್ಲಿ ಹೊಸ ಬೋರ್‌ವೆಲ್‌ಗಳನ್ನು ಕೊರೆಯುವಂತಿಲ್ಲ.

ಶ್ರೀ ಸಿದ್ದರಾಮಯ್ಯ : ಅದಕ್ಕೇನು ಕೇಸ್ ಹಾಕುತ್ತಾರೆಯೇ? ಹೇಳಿ ನೋಡೋಣ. ಕೇಂದ್ರ ಸರ್ಕಾರದವರು ಇದಕ್ಕೆ fund ಎಷ್ಟು ಕೊಡುತ್ತಾರೆ ಹೇಳಿ ಬೋರ್‌ವೆಲ್ ಕೊರೆಸಿದರೆ Fund ಕೊಡುವುದನ್ನು ನಿಲ್ಲಿಸಿದರೆ ನಾನು ನೀವು ಹೇಳಿದಂತೆ ಕೇಳುತ್ತೇನೆ.

ಶ್ರೀ ಡಿ.ವಿ. ಸದಾನಂದಗೌಡ : ಹೊಸ ಬೋರ್‌ವೆಲ್‌ಗಳನ್ನು ಕೊರೆಯಲಿಕ್ಕೆ CRF guidelines ನಲ್ಲಿ ನಮಗೆ ಅವಕಾಶವಿಲ್ಲ. ಆದರೆ ನಮ್ಮ ಸರ್ಕಾರ ಅದರ ಬಗ್ಗೆ ಆಲೋಚನೆ ಮಾಡಿಲ್ಲ. ಬೋರ್‌ವೆಲ್ ಕೊರೆಯಲಿಕ್ಕೆ ವಿಶೇಷವಾದಂಥ ಅನುದಾನವನ್ನು ನಾವು ಕೊಡಲಿಕ್ಕೆ ತಯಾರಿದ್ದೇವೆಂದು ನಾವು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಹೇಳಿದ್ದೇವೆ. ಬೇರೆ ಬೇರೆ ಕಡೆಗಳಲ್ಲಿ ಬೋರ್‌ವೆಲ್‌ಗಳನ್ನು ಕೊರೆಯಲಿಕ್ಕೆ ಪ್ರಾರಂಭ ಮಾಡಿದ್ದಾರೆ. ಮೂವತ್ತಾರು ಕೋಟಿ ರೂಪಾಯಿಗಳನ್ನು ಅದಕ್ಕಾಗಿ ಪ್ರತ್ಯೇಕವಾಗಿ ಬಿಡುಗಡೆ ಮಾಡಲಿಕ್ಕೆ ನಾವು ತಯಾರಿದ್ದೇವೆ. 52 ಕೋಟಿ ರೂಪಾಯಿಗಳಲ್ಲಿ RDPR ಗೆ ಹೊಸ ಬೋರ್‌ವೆಲ್‌ಗಳನ್ನು ಕೊರೆಯಲಿಕ್ಕಾಗಿ ಹಣ ಕಳುಹಿಸುವುದಕ್ಕೆ ನಮಗೆ ಯಾವುದೇ ತೊಂದರೆಗಳಿಲ್ಲ. ಇನ್ನೊಂದು ಬಹಳ ಪ್ರಮುಖವಾದ

ಪ್ರಶ್ನೆಯನ್ನು ಕೇಳಿದರು. ಮೂರನೆಯದಾಗಿ, ಬಹಳ: ಪ್ರಮುಖವಾದ ಪ್ರಶ್ನೆ ಕೇಳಿದರು. ಗುಲಬರ್ಗಾದಲ್ಲಿ fodder ಎಷ್ಟು ಇದೆ ಎಂದು ಕೇಳಿದರು. ಗುಲಬರ್ಗಾದಲ್ಲಿರುವ ಜಾನುವಾರುಗಳ ಸಂಖ್ಯೆ ನಮ್ಮಲ್ಲಿರುವ ಅಂಕಿ ಅಂಶಗಳ ಪ್ರಕಾರ 6,06,694. 3,73,320–00 ಟನ್ ಅಲ್ಲಿ ಮೇವು ಮುಂದಿನ 16 ವಾರಗಳಿಗೆ ಸಾಕಾಗುವಷ್ಟು ಮೇವು ಗುಲಬರ್ಗಾದಲ್ಲಿದೆ. ಇದರ ಬಗ್ಗೆ ತಾವು Clarification ಕೇಳಿದ್ದರಿಂದ ಹೇಳುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ಓಕೆ. ಒಂದು ಸದನ ಸಮಿತಿಯನ್ನು ಮಾಡೋಣ. ಹೋಗಿ ನೋಡಿಕೊಂಡು ಬರೋಣ.

ಶ್ರೀ ಡಿ.ವಿ.ಸದಾನಂದಗೌಡ (ಮುಖ್ಯಮಂತ್ರಿಗಳು) : ಸದನ ಸಮಿತಿ ಮಾಡುವುದು ಬೇಡ. ಅಲ್ಲಿನ task-force ಸಮಿತಿಯವರು verification ಮಾಡಿ ಕಳುಹಿಸಿ ಕೊಡಲಿ, ಅಷ್ಟು ಪ್ರಮಾಣದಲ್ಲಿ ಇಲ್ಲವೆಂದು ಹೇಳಿದರೆ ಅದನ್ನು ನಾನು ಸವಾಲಾಗಿ ಸ್ವೀಕಾರ ಮಾಡುತ್ತೇನೆ. ಅದನ್ನು ನಾನು ಮಾಡುತ್ತೇನೆ. ಇನ್ನೊಂದು ಎಷ್ಟು ಖರ್ಚಾಗಿದೆ ಎಂದು ಕೇಳಿದ್ದೀರಿ. ಸರ್ಕಾರದ ಕೆಲಸ ಕಾರ್ಯಗಳ ಬಗ್ಗೆ ನಾನು ಇಲ್ಲಿ ಹೇಳಬೇಕೆ ಬೇಡವೆ ಎಂಬುದು ಗೊತ್ತಿಲ್ಲ. ಕೆಲಸ ಕಾರ್ಯಗಳಾದ ಮೇಲೆ ಬಿಲ್ ಕೊಟ್ಟು ದುಡ್ಡನ್ನು ತೆಗೆದುಕೊಳ್ಳುವ ಪ್ರಯತ್ನ ಮಾಡುವಂಥದ್ದು. ಆದಕಾರಣ, ಇವತ್ತೇ ಎಷ್ಟು ಖರ್ಚಾಗಿದೆ ಎಂದರೆ ನಮ್ಮ ಪಿ.ಡಿ.ಅಕೌಂಟ್‌ನಲ್ಲಿ ಬೇಕಾದಷ್ಟು ದುಡ್ಡಿದೆ. ಬರ ಪರಿಹಾರ ಕಾಮಗಾರಿಗಳಿಗೆ ಎಷ್ಟು ಬೇಕಾದರೂ ಖರ್ಚು ಮಾಡಿ ಎಂದು ಕೊಟ್ಟ ಮೇಲೆ ಅಲ್ಲಿರುವಂಥ task-force ಸಮಿತಿ ಅಧ್ಯಕ್ಷರು, ಉಳಿದವರೆಲ್ಲರೂ ಕುಳಿತುಕೊಂಡು ಸಭೆ ಮಾಡಿ ಆ ಹಣವನ್ನು ಖರ್ಚು ಮಾಡಿ ಆಮೇಲೆ ಬಿಲ್ ಕಳುಹಿಸಿದರೆ ಹಣ ಕೊಡಲಿಕ್ಕೆ ಸರ್ಕಾರ ತಯಾರಿದೆ. ಇವತ್ತು ಕೂಡ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

(ಗೊಂದಲ)

(ಈ ಹಂತದಲ್ಲಿ ವಿರೋಧ ಪಕ್ಷದ ಹಲವು ಮಾನ್ಯ ಸದಸ್ಯರು ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು)

ಅಧ್ಯಕ್ಷರು : ಪ್ಲೀಸ್, ಕುಳಿತುಕೊಳ್ಳಿ. ಪ್ಲೀಸ್.

ಶ್ರೀ ಸಿದ್ದರಾಮಯ್ಯ : ತಹಶೀಲ್ದಾರ್‌ಗಳಿಗೆ ಹಣ ಬಿಡುಗಡೆ ಮಾಡಿಲ್ಲ. ನೀವು ಹಣ ಬಿಡುಗಡೆ ಮಾಡಿದ ಮೇಲೆ ತಹಶೀಲ್ದಾರರು ಎಂ.ಎಲ್.ಎ.

ಗಳನ್ನು ಭೇಟಿ ಮಾಡಿ ನಮಗೆ ಇಷ್ಟು ದುಡ್ಡು ಕೊಟ್ಟಿದ್ದಾರೆ, ನಾವು ಇದನ್ನು ಪಿ.ಡಿ.ಅಕೌಂಟ್‌ಗೆ ಹಾಕಿದ್ದೇವೆ ಎಂಬ ಮಾಹಿತಿ ಕೊಡಬೇಕು. ಆ ರೀತಿ ಆಗಿಲ್ಲ.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ (ಮುಖ್ಯಮಂತ್ರಿಗಳು) : ನಿಮ್ಮ ಆಪಾದನೆ ಏನು? ಸರ್ಕಾರ, ತಹಶೀಲ್ದಾರರು, DC. . .

(ಗೊಂದಲ)

SRI SIDDARAMAIAH : It is the duty of the Deputy Commissioner……

(ಗೊಂದಲ)

ಅಧ್ಯಕ್ಷರು : ದುಡ್ಡು ಬಿಡುಗಡೆ ಮಾಡಲು ನೀವು ದಿನಾಂಕವನ್ನಾದರೂ ಕೊಡಬೇಕಲ್ಲ?

ಶ್ರೀ ಬಂಡೆಪ್ಪ ಖಾಶೆಂಪೂರ್ : ನಾವು ಪ್ರಸ್ತಾವನೆ ಸಲ್ಲಿಸಿ, ಜಿಲ್ಲಾಧಿಕಾರಿಗಳ ಬಳಿ ಮಾತನಾಡಿದ್ದೇವೆ. ಇವತ್ತಿನವರೆಗೂ ಬೋರ್‌ವೆಲ್ ಕೊರೆಸುವುದಕ್ಕೆ ತಯಾರಿಲ್ಲ.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ : ಸನ್ಮಾನ್ಯ ಅಧ್ಯಕ್ಷರೆ, ನಾನು ನಿಮ್ಮಲ್ಲಿ ಕೇಳುವುದಿಷ್ಟೆ, ಅಧಿಕಾರಿಗಳು ಸರಿಯಿಲ್ಲ, ತಹಶೀಲ್ದಾರರು ಸರಿಯಿಲ್ಲ, ಜಿಲ್ಲಾಧಿಕಾರಿಗಳು ಸರಿಯಿಲ್ಲ ಹಾಗೂ ಕೆಲಸ ಮಾಡುತ್ತಿಲ್ಲವೆಂದು ಹೇಳುತ್ತಿದ್ದಾರಲ್ಲ. ಆದರೆ ಅಲ್ಲಿರುವಂಥ ಶಾಸಕರಿಗೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡು ಕೆಲಸ ಮಾಡಿಸಬೇಕಲ್ಲವೇ?

(ಗೊಂದಲ)

ಅಧ್ಯಕ್ಷರು : ಇದು ಸರಿಯಿಲ್ಲ, Please, ದಯವಿಟ್ಟು ಕುಳಿತುಕೊಳ್ಳಿ. ಉತ್ತರ ಹೇಳುವುದಕ್ಕೆ ನೀವು ಅವಕಾಶ ಕೊಡದಿದ್ದರೆ ಹೇಗೆ? ನಿಮಗೆ ಉತ್ತರ ಬೇಡವೇ?

ಶ್ರೀ ಡಿ.ವಿ.ಸದಾನಂದಗೌಡ : ಉತ್ತರ ಹೇಳುವುದು ಸಾಕಾದರೆ ನಾನು ನಿಲ್ಲಿಸುತ್ತೇನೆ. ಸನ್ಮಾನ್ಯ ಸಭಾಧ್ಯಕ್ಷರೆ, ಪ್ರಮುಖವಾಗಿ Telemetric Rain Gauge ಅನ್ನು ಎಲ್ಲಾ ಕಡೆಗೂ ಅಳವಡಿಸಬೇಕೆಂದು ಹೇಳಿದ್ದಾರೆ. ಪ್ರಾಯಶಃ ಈ ಹಿಂದಿನವರು ಭರವಸೆ ಕೊಟ್ಟಿದ್ದರು, ಆಗಿಲ್ಲ ಎಂದು ಹೇಳಿದ್ದಾರೆ. ನಾವು

ಹಂತ ಹಂತವಾಗಿ ಕೈಗೆತ್ತಿಕೊಂಡು ಪ್ರತಿ ಪಂಚಾಯಿತಿಗಳಲ್ಲಿ Telemetric Rain Gauge ಅನ್ನು ಅಳವಡಿಸುವ ಪ್ರಯತ್ನಗಳನ್ನು ಮಾಡುತ್ತೇವೆ. ಮತ್ತೊಂದು ವಿಚಾರವೆಂದರೆ SC/ST ಗಳಿಗೆ ಮತ್ತು ಸಣ್ಣ ಹಿಡುವಳಿದಾರರಿಗೆ ಇನ್ಸೂರೆನ್ಸ್ ಸಿಗುವುದಿಲ್ಲ, ಕೊಡುವುದಿಲ್ಲ, ಮಾಡಿಕೊಡುವುದಕ್ಕೆ ಆಗುವುದಿಲ್ಲ ವೆಂದು ಹೇಳಿದ್ದಾರೆ. ಆದರೆ, norms ಪ್ರಕಾರ ಇನ್ಸೂರೆನ್ಸ್ ಮಾಡುವುದಕ್ಕೆ ಆಗುತ್ತಿಲ್ಲ. ನಾವು ಈಗಾಗಲೇ ಸುವರ್ಣ ಭೂಮಿ ಯೋಜನೆಯಲ್ಲಿ ಎಸ್.ಸಿ./ಎಸ್.ಟಿ. ಗಳಿಗೆ ಮತ್ತು ಸಣ್ಣ ಹಿಡುವಳಿದಾರರಿಗೆ ರೂ.5,000+00 ಹಣವನ್ನು ಎರಡು ಕಂತುಗಳಲ್ಲಿ ಬಿಡುಗಡೆ ಮಾಡುವಂಥ ಕೆಲಸವನ್ನು ಈಗಾಗಲೇ ಮಾಡಿದ್ದೇವೆ. ಸರ್ಕಾರ ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿದೆ. ಇದನ್ನು ತಾವು ಅರ್ಥ ಮಾಡಿಕೊಳ್ಳಬೇಕಲ್ಲವೇ? ಮತ್ತೆ Global Investors Meet ಬಗ್ಗೆ ಹೇಳುತ್ತಾ ಇದರಿಂದ ಯಾರಿಗೂ ಉಪಯೋಗವಿಲ್ಲವೆಂದು ಹೇಳಿದ್ದಾರೆ. ಯಾರು cold storage ಮಾಡಿ food process ಗಳನ್ನೆಲ್ಲಾ ನಿರ್ವಹಿಸಿ, ಧಾರಣೆ ಹೆಚ್ಚು ಮಾಡಬೇಕೆನ್ನುವಂಥ ಕಲ್ಪನೆ ಬೇಕು. ರೈತರಿಗೆ ಏನು ಕೊಡಬೇಕು, ಏನು ಮಾಡಬೇಕು ಎನ್ನುವಂಥ ಒಂದು long range vision ಬೇಕಲ್ಲವೇ ನಿಮಗೆ? ಮತ್ತೆ ಪ್ರಮುಖವಾಗಿ to set right the records ಬಗ್ಗೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಕೇವಲ ರೂ. 50.00 ಕೋಟಿ, ರೂ.60.00 ಕೋಟಿಗಳನ್ನು ಖರ್ಚು ಮಾಡಿ, ಒಂದಷ್ಟು ಮನೆಗಳನ್ನು ಮಾತ್ರ ಕಟ್ಟಿದ್ದಾರೆ ಎನ್ನುವಂಥ ಮಾತನ್ನು ಹೇಳಿದ್ದಾರೆ. 45,807 ಮನೆಗಳಿಗೆ ರಾಜ್ಯ ಸರ್ಕಾರ ರೂ.723.64 ಕೋಟಿಗಳನ್ನು ಈಗಾಗಲೇ ವಿನಿಯೋಗ ಮಾಡಿದೆ. ಬಾಕಿಯಿದ್ದ Land acquisition ಕಾರ್ಯ ಎಲ್ಲವೂ ಮುಗಿದಿದೆ. ಕೇಂದ್ರ ಸರ್ಕಾರ ಬಾಕಿ ಕೊಡಬೇಕಾಗಿದ್ದ compensation ನ್ನು ನೀಡಿದೆ. ಕೇವಲ ರೂ.66.00 ಕೋಟಿ ಮಾತ್ರ ಖರ್ಚು ಮಾಡಿದ್ದಾರೆ ಎಂದು ಹೇಳುವುದು ಸರಿಯಲ್ಲ. ರೂ.723.64 ಕೋಟಿಗಳನ್ನು 45,807 ಮನೆಗಳಿಗೆ ಈಗಾಗಲೇ ನಮ್ಮ ಸರ್ಕಾರ ಖರ್ಚು ಮಾಡಿದೆ. ಒಟ್ಟಾರೆ ಇವತ್ತಿನವರೆಗೆ ನಾವು ಬರಪರಿಹಾರ ಕಾಮಗಾರಿಗಳಲ್ಲಿ ಯಾವುದೇ ನಿರ್ಲಕ್ಷ್ಯ ಮಾಡದೆ, ಅಲ್ಲಿರುವ ರೈತರ ಹಿತಾಸಕ್ತಿಗಳನ್ನು ಕಾಪಾಡುವ ರೀತಿಯಲ್ಲಿ ಎಲ್ಲಾ ಕೆಲಸ ಕಾರ್ಯಗಳನ್ನು ಮಾಡಿದ್ದೇವೆ. ಟಾಸ್ಕ್‌ಫೋರ್ಸ್ ಅಧ್ಯಕ್ಷರುಗಳಲ್ಲಿ ಮತ್ತೆ ಮತ್ತೆ ನಾನು ವಿನಂತಿಮಾಡಿಕೊಳ್ಳುವುದೇನೆಂದರೆ, ಈ ಬಗ್ಗೆ ಕೂಡಲೇ ತಮ್ಮ

ಕ್ಷೇತ್ರಗಳಿಗೆ ತಾವು ಭೇಟಿ ನೀಡಿ ಅಲ್ಲಿ ಯಾವ ಕೆಲಸವಾಗಬೇಕು ಎಂದು ತಿಳಿಸುವ ಕೆಲಸಕಾರ್ಯವನ್ನು ಮಾಡಬೇಕು.

ಶ್ರೀ ಸಿದ್ದರಾಮಯ್ಯ : ಸನ್ಮಾನ್ಯ ಸಭಾಧ್ಯಕ್ಷರೆ, ಅಧಿಕಾರಿಗಳಿಗೆ ದುಡ್ಡನ್ನೇ ಕೊಟ್ಟಿಲ್ಲ. ತಹಶೀಲ್ದಾರ್, ಜಿಲ್ಲಾಧಿಕಾರಿಗಳಿಗೆ ದುಡ್ಡು ಕೊಡಬೇಕು. ಆಮೇಲೆ ತಹಶೀಲ್ದಾರರು ಆಯಾ ಕ್ಷೇತ್ರದ ಶಾಸಕರುಗಳಿಗೆ ತಿಳಿಸಿ ಸಭೆ ಕರೆಸುತ್ತಾರೆ ಇಲ್ಲವೇ ಶಾಸಕರೇ ಸಭೆಯನ್ನು ಕರೆಸುತ್ತಾರೆ. ಇವರು ದುಡ್ಡನ್ನೇ ಕೊಟ್ಟಿಲ್ಲ. ಇದು ಇರುವಂಥ Problem.

ಶ್ರೀ ಎಂ.ಬಿ.ಪಾಟೀಲ : ಮಾನ್ಯ ಅಧ್ಯಕ್ಷರೆ, ನಾವು ದಿ:30.11.2011 ರಂದು ಬಿಜಾಪುರ ಜಿಲ್ಲೆಯ 6 ಮತ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ. ಆದರೆ ದುಡ್ಡು ಕೊಟ್ಟಿಲ್ಲ. ಮಾನ್ಯ ಮುಖ್ಯ ಮಂತ್ರಿಗಳಿಗೂ ಬರ ಪರಿಹಾರ ಕಾಮಗಾರಿಯಲ್ಲಿ ರಸ್ತೆ ಕಾಮಗಾರಿಯನ್ನು ತೆಗೆದುಕೊಳ್ಳುವುದಕ್ಕೆ ಕೇಳಿದ್ದೇವೆ ಅದಕ್ಕೂ ಕೂಡಾ ಕೊಟ್ಟಿಲ್ಲ. ಕನಿಷ್ಠ ಪಕ್ಷ ಒಂದೊಂದು ಮತ ಕ್ಷೇತ್ರಕ್ಕೆ ರೂ. ಒಂದು ಕೋಟಿಗಳನ್ನಾದರೂ ನೀಡಿದರೆ ಬರಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಬಹುದು. ಮತ್ತೊಂದು ಪ್ರಸ್ತಾವನೆ, ಕುಡಿಯುವ ನೀರು, ಇವತ್ತು ಬಿಜಾಪುರದ 6 ಮತ ಕ್ಷೇತ್ರದಲ್ಲೂ ಕೊಟ್ಟಿಲ್ಲ. ನಾವು ಪ್ರಸ್ತಾವನೆಯನ್ನು ಸಲ್ಲಿಸಿದ್ದೇವೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) : ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಬರಗಾಲ ಘೋಷಣೆ ಮಾಡಿ 2 ರಿಂದ 3 ತಿಂಗಳುಗಳಾಯಿತು. ಏಕೆಂದರೆ, ಬರಗಾಲ ಘೋಷಣೆ ಮಾಡಿದ ಮೇಲೆ, ಈಗ ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು ಹಾಗೂ ಎಲ್ಲಾ ಶಾಸಕರು ಹೇಳಿದರು, ಇವತ್ತು ಒಂದೇ ಒಂದು ಬೋರ್‌ವೆಲ್ ಕೊರೆಯುವುದಕ್ಕೆ ಅನುಮತಿ ಕೊಟ್ಟಿಲ್ಲ. ಅನುಮತಿ ಕೊಟ್ಟಿದ್ದರೆ ಅವರು ಏನು ಹೇಳುತ್ತಾರೋ ಅದಕ್ಕೆ ನಾನು ತಲೆಬಾಗುತ್ತೇನೆ. ಜಿಲ್ಲಾಧಿಕಾರಿಗಳಿಗೆ ಒಂದು ಬೋರ್‌ವೆಲ್ ಕೊರೆಸುವುದಕ್ಕೂ ಆಗುವುದಿಲ್ಲ. ಜಿಲ್ಲಾಧಿಕಾರಿಗಳಿಗೆ ಬರಗಾಲದ ಬಗ್ಗೆ ಚಿಂತೆ ಇಲ್ಲ, ಜಿಲ್ಲಾಧಿಕಾರಿಗಳ ಚಿಂತೆ ಏನೆಂದರೆ ವಿರೋಧ ಪಕ್ಷದ ಎಷ್ಟೆಷ್ಟು ಸದಸ್ಯರಿದ್ದಾರೆ ಅವರ ಆಸ್ತಿ ಎಷ್ಟಿದೆ? ಅದರ ಬಗ್ಗೆ ತನಿಖೆ ಮಾಡುವುದಕ್ಕೆ ನಿಂತಿದ್ದಾರೆಯೇ ಹೊರತು ಬರಗಾಲದ ಬಗ್ಗೆ ಯೋಚನೆಯೇ ಇಲ್ಲ. ಅವರಿಗೆ ಬರ ಬಂದರೆ ಏನು? ಯಾರು ಏನಾದರೆ ಏನು? ಯಾರು ವಿರೋಧ ಪಕ್ಷದ, ಈ ಸರ್ಕಾರದ ವಿರುದ್ಧ ಯಾರಾದರೂ ಮಾತನಾಡಿದರೆ ಅವರ ಆಸ್ತಿ ಎಲ್ಲಿದೆ? ಅವರ ಮನೆ ಹೊಲಗಳೆಷ್ಟಿವೆ, ದನಕರುಗಳೆಷ್ಟಿವೆ,

ಎನ್ನುವುದನ್ನು ತನಿಖೆ ಮಾಡುತ್ತಿದ್ದಾರೆಯೇ ಹೊರತು ಬರಗಾಲದ ಬಗ್ಗೆ ಚಿಂತನೆ ಮಾಡುತ್ತಿಲ್ಲ. ಬೇಕಾದರೆ ಮುಖ್ಯಮಂತ್ರಿಗಳು ಗಮನಹರಿಸಲಿ. ಇವತ್ತು ಉದಾಹರಣೆಗೆ ಕುಡಿಯುವ ನೀರು, ಮತ್ತೆ ಕೂಲಿಕಾರ್ಮಿಕರುಗಳಿಗಿರ ಬಹುದು, ದನಕರುಗಳಿಗಿರಬಹುದು, ಎಲ್ಲೆಲ್ಲಿ ಎಷ್ಟೆಷ್ಟು ಖರ್ಚು ಮಾಡಿದ್ದಾರೆ ಎನ್ನುವ ಅಂಕಿ ಅಂಶಗಳನ್ನು ಕೊಡಿ ಎಂದು ಕೇಳಿದೆ. ಮತ್ತೆ ಕೆಲವು ಕಡೆ ಶುಂಠಿ ಬೆಳೆ ಬೆಳೆದು, ಇವತ್ತು ರೂ.1200/- ಇದ್ದದ್ದು ರೂ.300/- ಆಗಿದೆ. ವಿಷ ಕುಡಿಯುವ ಪರಿಸ್ಥಿತಿಯಿದೆ. ನಿನ್ನೆ ನಾನು ಸನ್ಮಾನ್ಯ ಮುಖ್ಯಮಂತ್ರಿಗಳ ವರಲ್ಲಿ ಕೇಳಿದೆ, ಒಂದು ಸಾರಿ ಸಾಲ ಮನ್ನಾ ಮಾಡಿ, ದೊಡ್ಡ ಹಿಡುವಳಿ ದಾರರದ್ದು ಬೇಡ, ಸಣ್ಣ ಹಿಡುವಳಿದಾರರದ್ದಾದರೂ ಸಾಲ ಮನ್ನಾ ಮಾಡಿ, ಬಡ್ಡಿಯಾದರೂ ಮನ್ನಾ ಮಾಡಿ. ಇದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ಚಕಾರವನ್ನು ಎತ್ತಿಲ್ಲ. ಏಕೆಂದರೆ, ಇವತ್ತು ನಾಮಕಾವಸ್ಥೆಗೆ ಅಧಿಕಾರಿಗಳು ಬರೆದು ಕೊಡುತ್ತಾರೆ, ಅದನ್ನೇ ಮುಖ್ಯಮಂತ್ರಿಗಳು ಹೇಳುವುದು ಬೇಡ. ದಯಮಾಡಿ ಯಾವ ಜಿಲ್ಲೆಯಲ್ಲಿ ಬರಗಾಲ ಕಾಮಗಾರಿ ಇವತ್ತಿನವರೆಗೂ ಕೆಲಸ ತೆಗೆದುಕೊಂಡಿದ್ದಾರೆ ಎಂದು ಹೇಳಲಿ. ಸಭೆ ಕರೆದಿಲ್ಲ ಎನ್ನುತ್ತಿದ್ದಾರೆ. ನಾನು ಸಹ ಅಧ್ಯಕ್ಷನಾಗಿದ್ದೇನೆ. ನನ್ನ ಕ್ಷೇತ್ರದಲ್ಲಿ ಸಭೆ ಕರೆಯುವುದಕ್ಕೆ ಜಿಲ್ಲಾ ಉಸ್ತುವಾರಿ ಸಚಿವರು ಇದ್ದರು, ಅವರನ್ನು ಕೇಳಿ, ಹಿಂಸೆ ಮಾಡಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸಭೆ ಮಾಡಿಸಿದ್ದೇನೆ. ಇವತ್ತಿನವರೆಗೆ ಒಂದು ಬರಗಾಲ ಕಾಮಗಾರಿ ತೆಗೆದುಕೊಂಡಿದ್ದರೆ ನೀವು ಹೇಳುವುದಕ್ಕೆ ನಾನು ಬಾಗುತ್ತೇನೆ. ಅವರನ್ನು ಕೇಳಿದರೆ RDPR ನಿಂದ ಬೋರ್‌ವೆಲ್ ಕೊರೆಸುತ್ತಾರೆಂದು, ಜಿಲ್ಲಾಧಿಕಾರಿಗಳಿಗೆ ಬೋರ್‌ವೆಲ್ ಕೊರೆಸಬೇಡಿ ಎಂದು ಸರ್ಕಾರ ನಿರ್ದೇಶನ ನೀಡಿದೆ ಎಂದು ಹೇಳುತ್ತಾರೆ. ಇಲ್ಲವೆಂದು ಹೇಳಿಸಿ, ಜಿಲ್ಲಾಧಿಕಾರಿಗಳಿಗೆ ಇವತ್ತು ಬೋರ್‌ವೆಲ್ ಕೊರೆಸು ವುದಕ್ಕೆ ಅವಕಾಶವಿಲ್ಲ. RDPR ನಿಂದ Separate ಆಗಿ ಬೋರ್‌ವೆಲ್ ಕೊರೆಸುತ್ತಾರೆ ಎನ್ನುತ್ತಾರೆ. ನಮ್ಮ ಡಾಕ್ಟರ್ ಬಗಲಿಯವರು ಹೇಳಿದರು ನಮ್ಮಲ್ಲಿ 25 ಬೋರ್‌ವೆಲ್‌ಗಳನ್ನೇ ಕೊರೆಸಿದ್ದಾರೆಂದು, ಬಹುಶಃ ಅವರು ಮತ್ತೆ ಪಕ್ಷಾಂತರ ಮಾಡುತ್ತಾರೆಂದು ಹೇಳಿ ಅವರಿಗೆ ಬೋರ್‌ವೆಲ್ ಕೊರೆಸಿರ ಬಹುದು. ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯ ನವರು ಬೋರ್‌ವೆಲ್ ಕೊರೆದಿದ್ದಾರೆಂದು ಹೇಳಿದರೆ ಅವರು ಹೇಳಿದ್ದಕ್ಕೆ ನಾನು ತಲೆ ಬಾಗುತ್ತೇನೆ. ಇದರ ಜೊತೆಗೆ ಇನ್ನೊಂದು ಮನವಿಯನ್ನು ಸನ್ಮಾನ್ಯ

ಮುಖ್ಯಮಂತ್ರಿಗಳಲ್ಲಿ ಮಾಡಿಕೊಳ್ಳುವುದೇನೆಂದರೆ, ಕೇವಲ ರಾಜ್ಯ ಸರ್ಕಾರವನ್ನು ಮಾತ್ರ ದೂರುವುದಕ್ಕೆ ನಾನು ತಯಾರಿಲ್ಲ. ಒಂದು ನಿರ್ಣಯ ಆಗಬೇಕು. ಇವತ್ತು ರಾಜ್ಯದಲ್ಲಿ ಬರಗಾಲದಿಂದ ಎಷ್ಟು ಬೆಳೆ ನಷ್ಟವಾಗಿದೆಯೆಂದರೆ ರೂ.4500.00 ಕೋಟಿ ಎಂದು ಮಾಹಿತಿ ಇದೆ. ಕೇಂದ್ರ ಸರ್ಕಾರಕ್ಕೆ ಎಲ್ಲಾ ಸೇರಿ ಮನವಿ ಮಾಡಲು ಒಂದು ಸರ್ವ ನಿಯೋಗ ಕಳುಹಿಸಿ. ರಾಜ್ಯದಲ್ಲಿ ಬರಗಾಲದಿಂದ ಜನ ತತ್ತರಿಸಿದ್ದಾರೆ. ನಿಮ್ಮ ನೇತೃತ್ವದಲ್ಲಿ ವಿರೋಧ ಪಕ್ಷದ ನಾಯಕರು ಇದ್ದಾರೆ, ಅವರೂ ಒತ್ತಾಯ ಮಾಡಲಿ, ಕೇಂದ್ರ್ರದಲ್ಲಿ ಯು.ಪಿ.ಎ. ಸಕಾರ ಇದೆ. ನಾನು ರಾಜ್ಯ ಸರ್ಕಾರವನ್ನಷ್ಟೇ ಬೈಯುವುದಿಲ್ಲ. ದಯವಿಟ್ಟು ಜಯಚಂದ್ರರವರ ಕ್ಷೇತ್ರದಲ್ಲಿ, ನಮ್ಮ ಡಾಕ್ಟರ್‌ರು ಔಷಧಿ ಇದೆ ಎಂದು ಹೇಳಿದರು. ಇವತ್ತು ಕುರಿ ಕಾಯುವವನು ಅವುಗಳಿಗೆ ಔಷಧಿ ಕೊಡುವುದಕ್ಕೆ ಆಗದೇ ವಿಷ ತೆಗೆದುಕೊಂಡು ಸತ್ತು ಹೋಗಿದ್ದಾನೆ. ಶಿರಾದಲ್ಲಿ 8 ಜನ ಸತ್ತಿದ್ದಾರೆ. ಇದರ ಬಗ್ಗೆ ಏನಾದರೂ ಚಿಂತನೆ ಇದೆಯೇ? ಔಷಧ ಸಾಕಷ್ಟು ಇದೆ ಎಂದು ನಮ್ಮ ಪಶುಸಂಗೋಪನಾ ಮಂತ್ರಿಗಳು ಹೇಳಿದರು. ಔಷಧ ಕೊಡಲಾಗದೆ, ಸಾಲ ಮಾಡಿ ಕುರಿ ಸಾಕಣೆ ಮಾಡಿ ವಿಷ ತೆಗೆದುಕೊಂಡಿದ್ದಾರೆ ಎಂದು ಹೇಳುತ್ತೇನೆ. ದಯ ಮಾಡಿ ಇವತ್ತು ಬರಗಾಲದ ಬಗ್ಗೆ ಒಂದು ನಿರ್ಣಯ ಮಾಡಿ, ಕೇವಲ ಬೋರ್‌ವೆಲ್ ಕೊರೆಸುವುದು ಮಾತ್ರವಲ್ಲ, ಕೇಂದ್ರ ಸರ್ಕಾರಕ್ಕೆ ಬರಗಾಲದಿಂದ ಎಷ್ಟು ನಷ್ಟವಾಗಿದೆ ಎಂದು ಮನವರಿಕೆ ಮಾಡಲು ನಿಯೋಗ ಮಾಡಿ ಸರ್ವಾನುಮತದಿಂದ ಒಂದು ನಿರ್ಣಯ ಮಾಡಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳೇ ಸಾಲ ಮನ್ನಾ ಮಾಡಿ, ಎಂದು ಕೇಳಿ. ಅಥವಾ ಬಡ್ಡಿ ಮನ್ನಾ ಮಾಡಿ ಈ ಬಗ್ಗೆ ನಿರ್ಣಯ ಮಾಡಿ ಎಂದು ಹೇಳಿದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಒಂದು ಚಕಾರ ಎತ್ತಿಲ್ಲ. ದಯಮಾಡಿ ಈ ಪ್ರಶ್ನೆಗೆ ಸ್ಪಷ್ಟ ಉತ್ತರ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ (ಚಿಕ್ಕೋಡಿ) : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಈ ಕಡೆ ಸ್ವಲ್ಪ ಗಮನ ಕೊಡಬೇಕು, ನಮ್ಮ ಉಡಾಣ, ಚಿಕ್ಕೋಡಿ ತಾಲ್ಲೂಕಿನ ಟಾಸ್ಕ್‌ಫೋರ್ಸ್ ಕಮಿಟಿಯಲ್ಲಿ ಇಬ್ಬರು-ಮೂರು ಜನ ಶಾಸಕರಿದ್ದೇವೆ. ಆದ್ದರಿಂದ ಟಾಸ್ಕ್‌ಫೋರ್ಸ್ ಕಮಿಟಿಯನ್ನು ಕ್ಷೇತ್ರವಾರು ಮಾಡಬೇಕು. ಈ ಬಗ್ಗೆ ಸಾಕಷ್ಟು ಬಾರಿ ಸದನದಲ್ಲಿ ವಿನಂತಿ ಮಾಡಿಕೊಂಡಿದ್ದೇನೆ. ದಯವಿಟ್ಟು ಟಾಸ್ಕ್‌ಫೋರ್ಸ್ ಕಮಿಟಿಯನ್ನು ಕ್ಷೇತ್ರವಾರು

ಮಾಡಿದರೆ ಶಾಸಕರಿಗೆ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಈಶ್ವರ ಖಂಡ್ರೆ (ಭಾಲ್ಕಿ) : ಮಾನ್ಯ ಅಧ್ಯಕ್ಷರೆ, ಸೆಪ್ಟೆಂಬರ್‌ನಲ್ಲಿ ಬರೀ 73 ಸೆಂ.ಮೀ. ಮಳೆಯಾಗಿದೆ. ಅಕ್ಟೋಬರ್‌ನಲ್ಲಿ 38 ಸೆಂ.ಮೀ. ಮಳೆಯಾಗಿದೆ. ನವೆಂಬರ್‌ನಲ್ಲಿ ಮಳೆಯೇ ಆಗಿಲ್ಲ. ಹಾಗಾಗಿ. . . .

ಅಧ್ಯಕ್ಷರು : ಇದು Clarification ಆಗುವುದಿಲ್ಲ.

ಶ್ರೀ ಈಶ್ವರ ಖಂಡ್ರೆ : ನಮ್ಮಲ್ಲಿ ತೊಗರಿ ಬೆಳೆಯನ್ನು ಸುಮಾರು 20 ಸಾವಿರ ಹೆಕ್ಟೇರ್‌ನಲ್ಲಿ ಬೆಳೆಯುತ್ತಾರೆ. ತೊಗರಿ ಬೆಳೆ ಸಂಪೂರ್ಣ ನಷ್ಟವಾಗಿದೆ, ಜೋಳ ನಷ್ಟವಾಗಿದೆ, ಕಡಲೆ ನಷ್ಟವಾಗಿದೆ. ಸರ್ಕಾರ ಈಗ ನಾವು ಕೇಳುವುದಕ್ಕಿಂತ ಮುಂಚಿತವಾಗಿ ನೀರಿನ ಸಮಸ್ಯೆ ಹೇಳುತ್ತಿದೆ.

ಅಧ್ಯಕ್ಷರು : ಇದು Clarification ಅಲ್ಲ. Clarification ಕೇಳಿ ಎಂದರೆ ನೀವು, ಅದಕ್ಕೆ ಅವಕಾಶ ಕೊಡುವುದಿಲ್ಲ.

ಶ್ರೀ ಈಶ್ವರ ಖಂಡ್ರೆ : ಮಾನ್ಯ ಮುಖ್ಯಮಂತ್ರಿಗಳು ನಮ್ಮ ಕ್ಷೇತ್ರಕ್ಕೆ ಬಂದಾಗ ಪ್ರಗತಿ ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದಾರೆ. ನನ್ನ ವಿನಂತಿ ಏನೆಂದರೆ, ಭಾಲ್ಕಿ ತಾಲ್ಲೂಕನ್ನು ಬರ ಪ್ರದೇಶವೆಂದು ಘೋಷಣೆ ಮಾಡಿ, ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳಬೇಕು. ಅದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು Clarification ಕೊಡಬೇಕು ಎಂದು ಮನವಿ ಮಾಡುತ್ತೇನೆ.

(ಗೊಂದಲ)

ಶ್ರೀ ಶಿವರಾಜ ತಂಗಡಗಿ (ಕನಕಗಿರಿ) : ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ಜಿಲ್ಲಾ ಮಂತ್ರಿಗಳಿದ್ದಾರೆ. ಜಿಲ್ಲಾ ಮಂತ್ರಿಗಳು ಎಲ್ಲಾ ಹೊತ್ತಿನಲ್ಲಿ KDP ಮೀಟಿಂಗ್‌ನಲ್ಲಿ ಅಧಿಕಾರಿಗಳಿಗೆ ಪೂರ್ಣ ಪ್ರಮಾಣದಲ್ಲಿ ಹೇಳಿದ್ದಾರೆ. ಅಧಿಕಾರಿಗಳಿಗೆ ಹೇಳಿದರೂ ಇವತ್ತಿನವರೆಗೂ ನಮ್ಮ ಜಿಲ್ಲೆಯಲ್ಲಿ ಮೇವನ್ನು ಕಲೆಕ್ಟ್ ಮಾಡುವುದನ್ನು ಮಾಡಿಲ್ಲ. ಅದರ ಜೊತೆಗೆ ನನ್ನ ಕ್ಷೇತ್ರವಾದ ಕನಕಗಿರಿಯಲ್ಲಿಯೇ Start ಮಾಡುತ್ತೇವೆ ಎಂದು ಹೇಳಿದರೂ ಇವತ್ತಿನ ವರೆಗೂ ಆಗುತ್ತಿಲ್ಲ. ಏಕೆಂದರೆ, ಇವತ್ತು ಭತ್ತದ ರಾಶಿ ಮುಗಿದರೂ . .. .

ಅಧ್ಯಕ್ಷರು : ಹೇಳಿದ್ದನ್ನೇ ಮತ್ತೆ ಹೇಳುತ್ತೀರಿ.

ಶ್ರೀ ಶಿವರಾಜ ತಂಗಡಗಿ : ನಮ್ಮಲ್ಲಿ ಮೇವು Collection ಆಗಿಲ್ಲ. ಅದಕ್ಕೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ನಮ್ಮ ಜಿಲ್ಲಾ

ಮಂತ್ರಿಗಳಿದ್ದಾರೆ. ಅದಕ್ಕೆ ಹೇಳುತ್ತಿದ್ದೇನೆ. ಇವತ್ತಿನವರೆಗೂ ಆಗಿಲ್ಲ. ಅದಕ್ಕೆ ದಯಮಾಡಿ ಅವರಿಗೆ ಮನವರಿಕೆ ಮಾಡಿ. Immediate ಆಗಿ ಆರ್ಡರ್ ಮಾಡಿಕೊಂಡು Start ಮಾಡುವಂತಹ ಕೆಲಸ ಮಾಡಬೇಕು. ಇಲ್ಲವೆಂದರೆ ಬಹಳ ತೊಂದರೆಯಾಗುತ್ತದೆ.

ಶ್ರೀ ಇ.ತುಕಾರಾಂ (ಸಂಡೂರು) : ಮಾನ್ಯ ಅಧ್ಯಕ್ಷರೆ, ನಮ್ಮ ತಾಲ್ಲೂಕನ್ನು ಕೂಡ ಬರ ಎಂದು declare ಮಾಡಿದ್ದಾರೆ. ಸುಮಾರು 6–7 ತಿಂಗಳುಗಳಾಗಿವೆ. ತಹಶೀಲ್ದಾರ್‌ರವರು ಕೂಡ ಇಲ್ಲ. ಇಂತಹ ಪರಿಸ್ಥಿತಿಯೊಳಗೆ ನಾವು ಹೇಗೆ War-footingನಲ್ಲಿ ಕೆಲಸ ಮಾಡುವುದಕ್ಕೆ ಆಗುತ್ತದೆ? ರಾಜ್ಯದಲ್ಲಿ ಎಲ್ಲೆಲ್ಲಿ ತಹಶೀಲ್ದಾರ್‌ಗಳು ಇಲ್ಲ, ಎಲ್ಲೆಲ್ಲಿ ಬರ ಆಗಿದೆ, ಅಂತಹ ಕಡೆ Immediate ಆಗಿ ಕ್ರಮ ಕೈಗೊಳ್ಳಬೇಕೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಡಾ: ಮಹದೇವಪ್ಪನವರು ಮಾತನಾಡಿ.

ಡಾ: ಹೆಚ್.ಸಿ.ಮಹದೇವಪ್ಪ (ಟಿ.ನರಸೀಪುರ) : ಮಾನ್ಯ ಅಧ್ಯಕ್ಷರೆ, ಈ ಬರಗಾಲ ಎನ್ನುವುದು ಒಂದು ವಿಶೇಷವಾದಂತಹ ಪರಿಸ್ಥಿತಿ. ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಸರ್ಕಾರಗಳು ಇದ್ದಾಗಲೂ ಕೂಡ ಬರಗಾಲದ ಪರಿಸ್ಥಿತಿ ಇದ್ದುದ್ದನ್ನು ನಾವು ನೋಡಿದ್ದೇವೆ. ಅಲ್ಲಿ ಕೆಲಸ ಮಾಡಿದ್ದೇವೆ. ಆದರೆ, ಇವತ್ತು ಬಂದಿರತಕ್ಕಂತಹ ಬರಗಾಲ ಘೋಷಣೆ ಆಗಿ ಸುಮಾರು ಎರಡು ತಿಂಗಳುಗಳು ಆಯಿತು. Cabinet serious ಆಗಿ ಬರಗಾಲದ ಪರಿಸ್ಥಿತಿ ಬಗ್ಗೆ ಚರ್ಚೆ ಮಾಡಿ, ಒಂದು Cabinet Sub-Committee ಯನ್ನು constitute ಮಾಡಿಲ್ಲ. Revenue Minister, Rural Development Minister, Agriculture Minister, Rural Drinking Water Minister ಗಳ ಒಂದು Cabinet Sub-Committee ಮಾಡಿ ಇಡೀ 19 ಜಿಲ್ಲೆಗಳಲ್ಲಿ ಏನು ಬರ ಪರಿಸ್ಥಿತಿ ಉದ್ಭವವಾಗಿದೆ, ಆ ಜಿಲ್ಲೆಗಳಿಗೆ ಪ್ರವಾಸ ಮಾಡಿ, ವಸ್ತು ಸ್ಥಿತಿಯ ಸಂಗ್ರಹವನ್ನು ಮಾಡಿ, ಅದಕ್ಕೆ ಪೂರಕವಾದಂತಹ action plan ಅನ್ನು ತಯಾರು ಮಾಡಿಕೊಂಡು, ಅದಕ್ಕೆ ಬೇಕಾದಂತಹ ಹಣವನ್ನು ಸರ್ಕಾರ ಮಂಜೂರು ಮಾಡಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳ ಉತ್ತರ ನೋಡಿದಾಗ ಇದನ್ನು ಮಾಡಿದಂತೆ ಕಾಣಲಿಲ್ಲ. That means the Government is not serious to tackle the situation in the State, In the process, ಏನಾಗಿದೆ ಎಂದರೆ ಇಲ್ಲಿ ಕೃಷಿ ಚಟುವಟಿಕೆಯ ಮೇಲೆ,

ಉದ್ಯೋಗದ ಮೇಲೆ, ಉತ್ಪಾದನೆಯ ಮೇಲೆ, per-capita income ಮೇಲೆ, GDP contribution ಮೇಲೆ ಮತ್ತು exclusive and inclusive growth ಮೇಲೆ ಗಂಭೀರವಾದಂತಹ ದುಷ್ಪರಿಣಾಮ ಆಗುತ್ತಿದೆ. ಅವರು ಒಂದು Cabinet Sub Committee ಮಾಡಿ ಈ situation ಅನ್ನು serious ಆಗಿ tackle ಮಾಡುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸಚಿವ ಸಂಪುಟದ ಉಪ ಸಮಿತಿಯ ರಚನೆ ಮಾಡಿ ಅದಕ್ಕೆ ಕೆಲಸ ಹಚ್ಚಬೇಕು. ಈ Session ಮುಗಿದ ತಕ್ಷಣವೇ Task-Force ಗಳು ಸಭೆ ಮಾಡಿ ಅವರ action plan ತಯಾರು ಮಾಡಿ ಬೇಕಾದಂತಹ ಹಣಕಾಸಿನ ಮಂಜೂರಾತಿಯನ್ನು ಕೊಡಬೇಕು. ನಮ್ಮ ಕ್ಷೇತ್ರದಲ್ಲಿ ನೀರಾವರಿ ಪ್ರದೇಶವಿದೆ. ಅಲ್ಲಿಯೂ ಕೂಡ ಬರಗಾಲ ಬಂದಿದೆ. ಅಲ್ಲಿ ಬೆಳೆ ಆಗಿಲ್ಲ. ಅವರು ನಾಟಿ ಮಾಡಿ ಹಾಕಿರುವಂತಹದ್ದು ಎಲ್ಲಾ ಹಾಳಾಗಿದೆ. ಅದಕ್ಕೆ ಕಂದಾಯವನ್ನು ಮನ್ನಾ ಮಾಡಬೇಕು. ಸಾಲವನ್ನು ಮನ್ನಾ ಮಾಡಬೇಕು ಎಂದು ಹೇಳಿ ಸರ್ಕಾರವನ್ನು ತಮ್ಮ ಮೂಲಕ ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಬಿ.ಶ್ರೀರಾಮುಲು (ಬಳ್ಳಾರಿ) : ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು, ಬಹಳಷ್ಟು ಮಂದಿ ಸದಸ್ಯರು ಎಲ್ಲರೂ ಸೇರಿ ಈ ಬರ ಪೀಡಿತ ಪ್ರದೇಶಗಳ ಬಗ್ಗೆ ಸಾಕಷ್ಟು ವಿಚಾರಗಳನ್ನು ರಾಜ್ಯ ಸರ್ಕಾರಕ್ಕೆ ಬೆಳಕು ಚೆಲ್ಲುವಂತಹ ಕೆಲಸವನ್ನು ಮಾಡಿದ್ದಾರೆ. ಇದನ್ನು ರಾಜ್ಯದಲ್ಲಿ . . .

ಅಧ್ಯಕ್ಷರು : ತಾವು Clarification ಮಾತ್ರ ಕೇಳಿ. ಚರ್ಚೆ ಮಾಡುವಂತಹದ್ದು ಇಲ್ಲ.

ಶ್ರೀ ಬಿ. ಶ್ರೀರಾಮುಲು : ಇದನ್ನು ರಾಜ್ಯದಲ್ಲಿ 40 ವರ್ಷಗಳಿಂದ ಬರಪೀಡಿತ ಪ್ರದೇಶವೆಂದು ಘೋಷಣೆ ಮಾಡಿದ ನಂತರ ಇವತ್ತಿನ ಪರಿಸ್ಥಿತಿಯಲ್ಲಿ 176 ತಾಲ್ಲೂಕುಗಳಲ್ಲಿ, 99 ತಾಲ್ಲೂಕುಗಳಿಗೆ ಬರಪೀಡಿತ ಪ್ರದೇಶಗಳೆಂದು ಘೋಷಣೆ ಮಾಡಲಾಗಿದೆ. ಅಂದರೆ, 60% ಅನ್ನು ಬರಪೀಡಿತ ಪ್ರದೇಶಗಳೆಂದು ಘೋಷಣೆ ಮಾಡಲಾಗಿದೆ. ಆದರೆ, 99 ತಾಲ್ಲೂಕುಗಳಿಗೇ ನಿಲ್ಲುವುದಿಲ್ಲ. ಇನ್ನೂ ಸಾಕಷ್ಟು ತಾಲ್ಲೂಕುಗಳಿಗೆ ಘೋಷಣೆಯನ್ನು ಮಾಡಬೇಕಾಗಿದೆ. ಏಕೆಂದರೆ, ಒಂದು ಕಡೆ ರೈತರುಗಳಿಗೆ ಈ ರಾಜ್ಯದಲ್ಲಿ ಸುಮಾರಾಗಿ ಮಳೆಯಾಗಬೇಕಾಗಿತ್ತು, 824 ಮಿಲಿ ಮೀಟರ್ ಮಳೆಯಾಗಬೇಕಾಗಿತ್ತು, 790 ಮಿಲಿ ಮೀಟರ್ ಮಳೆಯಾಗಿದೆ. ಏನು ಈ ರಾಜ್ಯದಲ್ಲಿ 75 ಲಕ್ಷ ಹೆಕ್ಟೇರ್ ಪ್ರದೇಶ ಬಿತ್ತನೆಯಾಗಬೇಕಾಗಿತ್ತು, ರಾಜ್ಯದಲ್ಲಿ

69 ಲಕ್ಷ ಹೆಕ್ಟೇರ್ ಪ್ರದೇಶ ಬಿತ್ತನೆಯಾಗಿದೆ. ಬಹಳಷ್ಟು ಎಲ್ಲಾ ಜಾನುವಾರುಗಳಿಗೆ ಇವತ್ತು ಸಾಕಷ್ಟು ಪ್ರಾಣಿಗಳಿಗೆ ಎಲ್ಲಾ ರೀತಿಯಲ್ಲಿ ಕುಡಿಯುವ ನೀರಿಗೆ ತೊಂದರೆಯಾಗುತ್ತಿದೆ. ರೈತರು ಎಲ್ಲರೂ ಕೂಡ ಗುಳೆ ಹೋಗುವಂತಹ ಸಂಭವ ಬಹಳಷ್ಟು ಕಂಡುಬರುತ್ತದೆ. ಬಹಳಷ್ಟು ಮಂದಿ ರೈತರು ಗುಳೆ ಹೋಗುವಂತಹ ಸಂದರ್ಭದಲ್ಲಿ ಸಾಕಷ್ಟು ಎಲ್ಲಿ ಹೋದರೂ ಕೂಡ ಒಂದೊಂದು ಲಾರಿಯಲ್ಲಿ ಇವತ್ತು ಗುಳೆ ಹೋಗುತ್ತಿರುತ್ತಾರೆ. ಸಾಕಷ್ಟು ಮಂದಿ ಅಪಘಾತಕ್ಕೀಡಾದಂತಹ ಒಂದು ಸನ್ನಿವೇಶ ಕೂಡ ಇವತ್ತು ನಾವೆಲ್ಲರೂ ನೋಡುತ್ತಿದ್ದೇವೆ. ಬಹಳಷ್ಟು ಒಂದೊಂದು ಲಾರಿಯಲ್ಲಿ ಗೋವಾ ಇನ್ನಿತರ ಕಡೆಗಳಿಗೆ ಹೋಗುವಂತಹ ಸಂದರ್ಭದಲ್ಲಿ ಸಾಕಷ್ಟು ಮಂದಿ ರೈತರು ಒಂದೊಂದು ಲಾರಿಯಲ್ಲಿ, ಒಂದೊಂದು ಬಸ್‌ನಲ್ಲಿ 20 ಮಂದಿ, 30 ಮಂದಿ ಸಾಯುವಂತಹ ಸನ್ನಿವೇಶಗಳನ್ನು ಇವತ್ತು ನಾವು ನೋಡುತ್ತಿದ್ದೇವೆ. ಅದಕ್ಕೋಸ್ಕರ ಇವತ್ತು ರೈತರಿಗೆ ಒಂದು ಒಪ್ಪತ್ತು ಕೂಡ ಕಷ್ಟವಾಗುತ್ತದೆ. ಅದಕ್ಕೋಸ್ಕರ ಎಲ್ಲಾ ರೀತಿಯಲ್ಲಿ ತಮ್ಮನ್ನು ಕೇಳಿಕೊಳ್ಳುವುದು ಇಷ್ಟೆ. ಉತ್ತರ ಕರ್ನಾಟಕ ಭಾಗದಲ್ಲಿ ಏನು ಇವತ್ತು ಬರಗಾಲದಿಂದ ತುತ್ತಾದಂತಹ ಜನರು ಬೆಂಗಳುರು, ಮಹಾರಾಷ್ಟ್ರಕ್ಕೆ, ಗೋವಾಕ್ಕೆ ಏನು ತೆರಳುತ್ತಿದ್ದಾರೆ, ಇವತ್ತು ನಮ್ಮ ರ ಆಜ್ಯದಲ್ಲಿ ದಿನನಿತ್ಯ ಕೆಲಸ ಮಾಡಿದರೆ 50 ರೂಪಾಯಿಗಳ ಕೂಲಿ ಕೊಡುತ್ತಿದ್ದಾರೆ. ಅದೇ ರೀತಿಯಲ್ಲಿ ಬೇರೆ ರಾಜ್ಯಗಳಿಗೆ ಹೋದರೆ ಇವತ್ತು 300–400 ರೂಪಾಯಿಗಳನ್ನು ದುಡಿಯುತ್ತಿದ್ದಾರೆ. ಆದ್ದರಿಂದ, ಮುಂಬರುವಂತಹ ದಿನಗಳಲ್ಲಿ ಇವತ್ತು ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಏನಿದೆ, ಅದರಲ್ಲಿ ವರ್ಷದ 365 ದಿನಗಳಲ್ಲಿ ಸುಮಾರು 100 ದಿನಗಳನ್ನು ಮಾತ್ರ ಕೆಲಸ ಕೊಡುತ್ತಿದ್ದಾರೆ. 100 ದಿನಗಳ ಕೆಲಸ ಕೊಡುತ್ತಿರುವುದರಿಂದ ಜನರು ಇನ್ನೂ 265 ದಿನಗಳು ಖಾಲಿಯಾಗಿ ಕುಳಿತುಕೊಳ್ಳುತ್ತಿದ್ದಾರೆ.

ಅಧ್ಯಕ್ಷರು : ಇದು Clarification ಆಗುವುದಿಲ್ಲ.

ಶ್ರೀ ಬಿ. ಶ್ರೀರಾಮುಲು : ಅದಕ್ಕೋಸ್ಕರ ನಾನು ಏನು ಹೇಳುತ್ತಿದ್ದೇನೆ ಎಂದರೆ, ಅವರಿಗೆ ಕನಿಷ್ಠ 200 ದಿನಗಳು ಮಾತ್ರ ಕೆಲಸ ಕೊಟ್ಟರೆ ಚೆನ್ನಾಗಿರುತ್ತದೆ. ಏಕೆಂದರೆ, ಇವತ್ತು ರೈತರು ಎಲ್ಲಾ ಬಹಳಷ್ಟು ಸಂಕಷ್ಟದಲ್ಲಿದ್ದಾರೆ. ಅದಕ್ಕೋಸ್ಕರ. . .

ಅಧ್ಯಕ್ಷರು : ಇದು Clarification ಬರುವುದಿಲ್ಲ.

ಶ್ರೀ ಬಿ.ಶ್ರೀರಾಮುಲು : ಅದಕ್ಕೋಸ್ಕರ ಇವತ್ತು ಎಲ್ಲಾ ರೀತಿಯಿಂದ ರಾಜ್ಯದಲ್ಲಿ ಗುಳೆ ಹೋಗುವವರು ಜೊತೆಗೆ ಇವತ್ತು ಮಕ್ಕಳನ್ನು ಕೂಡ ಕರೆದುಕೊಂಡು ಗುಳೆ ಹೋಗುತ್ತಿದ್ದಾರೆ. ಆ ಮಕ್ಕಳಿಗೆ ಶಿಕ್ಷಣಕ್ಕೆ ಕೂಡ ತೊಂದರೆಯಾಗುತ್ತಿದೆ. ಸುಪ್ರೀಂಕೋರ್ಟ್ ಆದೇಶವನ್ನು ಕೊಟ್ಟಿದೆ. 14 ವರ್ಷದ ಒಳಗಡೆ ಇರುವಂತಹ ಬಾಲಕರು ಎಲ್ಲರೂ ಇವತ್ತು ಗುಳೆ ಹೋಗುತ್ತಿದ್ದಾರೆ. ಮಕ್ಕಳಿಗೆ ಇವತ್ತು ಏನು ಶಿಕ್ಷಣ ಕೊಡಬೇಕು ಎಂದು ಸುಪ್ರೀಂಕೋರ್ಟ್ ಕಡ್ಡಾಯವಾಗಿ ಮಾಡಿದೆಯೋ ಅದು ಎಲ್ಲಾ ರೀತಿಯಲ್ಲೂ ಮೂಲಭೂತವಾಗಿ ಅಭಿವೃದ್ಧಿಯಾಗಬೇಕು.

ಅಧ್ಯಕ್ಷರು : ಇದು Clarification ಆಗುವುದಿಲ್ಲ.

ಶ್ರೀ ಬಿ. ಶ್ರೀರಾಮುಲು : ಅದಕ್ಕೋಸ್ಕರ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇವತ್ತು ರಾಜ್ಯ ಸರ್ಕಾರ ನಮಗೆ ಕೊಟ್ಟಿರುವುದು 85 ಕೋಟಿ ರೂಪಾಯಿಗಳು. ರಾಜ್ಯ ಸರ್ಕಾರ ಇವತ್ತು ಎಲ್ಲಾ ಜಿಲ್ಲೆಗಳಿಗೂ ಕೊಟ್ಟಿದೆ.

ಅಧ್ಯಕ್ಷರು : ಇದು Clarification ಗೆ ಬರುವುದಿಲ್ಲ. ನೀವು ಭಾಷಣ ಮಾಡಿದರೆ ಹೇಗೆ?

ಶ್ರೀ ಬಿ. ಶ್ರೀರಾಮುಲು : ಐದೇ ನಿಮಿಷ ಸಾರ್, 85 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ. ಅದರಲ್ಲಿ ಖರ್ಚಾಗಿರುವುದು 52 ಕೋಟಿ ರೂ.ಗಳು ಮಾತ್ರ. ಜಿಲ್ಲಾಧಿಕಾರಿಗಳು ಅದರಲ್ಲಿ ಹಿಡಿದುಕೊಟ್ಟಿದ್ದಾರೆ. ಆದರೆ, ಮಾನ್ಯ ಮುಖ್ಯಮಂತ್ರಿಗಳು, ಎಲ್ಲಾ ಜಿಲ್ಲಾಮಂತ್ರಿಗಳು ಎಲ್ಲರೂ ಸೇರಿ ಯಾವುದಾದರೂ ಉಪ ಚುನಾವಣೆ ಮಾಡಬೇಕು ಎಂದರೆ, ಎಲ್ಲರೂ ಸೇರಿ ಕುಳಿತು ಯಾವ ರೀತಿ ಉಪ ಚುನಾವಣೆ ಮಾಡುತ್ತಾರೋ ಅದೇ ರೀತಿ ಬರಗಾಲಪೀಡಿತ ಪ್ರದೇಶವೆಂದು ಘೋಷಣೆಯಾದಂತಹ ಎಲ್ಲಾ ಜಿಲ್ಲೆಗಳಿಗೆ ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ ಹೋಗಬೇಕು. ಈ ರೂ.85 ಕೋಟಿ ಕೊಟ್ಟಿರುವುದು ಸಾಲುವುದಿಲ್ಲ. ದಯವಿಟ್ಟು ತಾವು ಇನ್ನೂ ರೂ.2,830 ಕೋಟಿ ಬಿಡುಗಡೆ ಮಾಡಬೇಕು. ಇವತ್ತು ಅವರು ಕೇಂದ್ರದ ತಂಡ ಇನ್ನು ಎರಡು-ಮೂರು ದಿನಗಳಲ್ಲಿ ಬರುತ್ತದೆ ಎಂದು ಹೇಳುತ್ತಿದ್ದಾರೆ, ಯಾವತ್ತು ಬರುತ್ತಾರೆ ಎಂಬುದು ಗೊತ್ತಿಲ್ಲ. ರಾಜ್ಯ ಸರ್ಕಾರದ ಹಣವನ್ನು ಬಿಡುಗಡೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ (ಗುಂಡ್ಲುಪೇಟೆ) : ಮಾನ್ಯ ಅಧ್ಯಕ್ಷರೆ, ನಿನ್ನೆ, ಮೊನ್ನೆ ಸತತವಾಗಿ ಬರಗಾಲದ ಪರಿಸ್ಥಿತಿ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿದ ಹಿನ್ನಲೆಯಲ್ಲಿ ನಾವು ಏನು ಕೆಲವು ಪ್ರಸ್ತಾಪಗಳನ್ನು ಮಾಡಿದ್ದೇವೋ ಅದಕ್ಕೆ ಸ್ಪಷ್ಟವಾದ ಉತ್ತರವನ್ನು ನಾವು ಮಾನ್ಯ ಮುಖ್ಯ ಮಂತ್ರಿಗಳಿಂದ ನಿರೀಕ್ಷೆ ಮಾಡಿದ್ದೆವು. ಆದರೆ, ಮುಖ್ಯವಾಗಿ ಈ ಕೊಳವೆ ಬಾವಿಗಳನ್ನು ತೆಗೆಸುವಂತಹ ವಿಚಾರದಲ್ಲಿ ನಿರ್ದಿಷ್ಟವಾದಂತಹ ಒಂದು ಸೂಚನೆ ಜಿಲ್ಲಾಧಿಕಾರಿಗಳಿಗೆ ಕೊಟ್ಟಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಒಂದು Clarification ಅನ್ನು ನಾನು ನಿರೀಕ್ಷೆ ಮಾಡುತ್ತೇನೆ. ಅದೇ ರೀತಿ ಉದ್ಯೋಗ ಒದಗಿಸುವಂತಹ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕೆ ಈಗಿನ ಗೈಡ್‌ಲೈನ್ಸ್‌ನಲ್ಲಿ ಅವಕಾಶವಿಲ್ಲ. NREGS ಕಾರ್ಯಕ್ರಮದಡಿಯಲ್ಲೇ ಮಾಡ ಬೇಕು ಎನ್ನುವುದನ್ನು ಸೂಚಿಸುತ್ತಿದೆ. ಅದನ್ನು ಬರ ಕಾಮಗಾರಿಗಳಿಗೆ ಬಿಡುಗಡೆ ಮಾಡಿರುವಂತಹ ಅನುದಾನದಲ್ಲಿ ಉದ್ಯೋಗ ಸೃಷ್ಟಿ ಮಾಡು ವಂತಹ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕೆ ಅವಕಾಶ ಮಾಡುವಂತಹ ಒಂದು ಮಾರ್ಪಾಡನ್ನು ಮಾಡಬೇಕು. ಮತ್ತೆ ಬೆಳೆ ನಷ್ಟಕ್ಕೆ ರೈತರಿಗೆ ಒಂದು minimum ಪರಿಹಾರ ಕೊಡುವಂತಹ ಘೋಷಣೆಯನ್ನು ಸರ್ಕಾರ ಮಾಡಬೇಕು. ಮತ್ತೆ ಬರಗಾಲಕ್ಕೆ ಘೋಷಣೆ ಆಗಿರುವಂತಹ 100 ತಾಲ್ಲೂಕಿನಲ್ಲಿ ರೈತರಿಗೆ ಮುಂದೆ ಬಿತ್ತನೆ ಮಾಡುವಂತಹ ಸಂದರ್ಭದಲ್ಲಿ, ಅವರಿಗೆ ಬಿತ್ತನೆ ಬೀಜ ಸಂಗ್ರಹ ಮಾಡುವುದಕ್ಕೆ ಈಗ ಬೆಳೆಯೇ ಕೈಗೆ ಬರದೇ ಇರುವುದರಿಂದ ಆಗುತ್ತಿಲ್ಲ. ಅವರಿಗೆ ಶೇಕಡಾ 75 ರಷ್ಟು ರಿಯಾಯಿತಿ ದರದಲ್ಲಿ ಬಿತ್ತನೆ ಬೀಜವನ್ನು ಕೊಡಿಸತಕ್ಕಂತಹ ಒಂದು ವ್ಯವಸ್ಥೆ ಆಗಬೇಕು. ಮತ್ತೆ ಈ ಮೇವು ಸಂಗ್ರಹ ಮಾಡುವುದಕ್ಕೆ fodder sheds ನ್ನು ಕಟ್ಟಲು ಮತ್ತು ಸರ್ಕಾರದ ಫಾರ್ಮ್‌ಗಳಲ್ಲಿ fodder ಬೆಳೆಸುವುದಕ್ಕೆ ಈಗಿನಿಂದಲೇ ಕ್ರಮಗಳನ್ನು ಕೈಗೊಳ್ಳಬೇಕು. ಕೈಗೊಂಡು ಅವರಿಗೆ ಬೇಸಿಗೆ ಕಾಲದಲ್ಲಾದರೂ ಫಾಡರ್ ಸಿಗುವಂತಹ ವ್ಯವಸ್ಥೆ ಮಾಡುವುದಕ್ಕೆ ಒಂದು ಸೂಚನೆ ಹೋಗಬೇಕು. ಈ ಕೆಲವು ವಿಚಾರಗಳನ್ನು ನಾವು ಪ್ರಸ್ತಾಪ ಮಾಡಿದ್ದೆವು. ಮಾನ್ಯ ಮುಖ್ಯಮಂತ್ರಿಗಳು ಸೂಕ್ತ ನಿರ್ದೇಶನ ಕೊಡಬೇಕು. ಇಲ್ಲವೆಂದರೆ ಜಿಲ್ಲಾಧಿಕಾರಿಗಳು ಆ ಗೈಡ್‌ಲೈನ್ಸ್, CRF Norms ಇಟ್ಟುಕೊಂಡು ಹೋದ ವರಿಗೆಲ್ಲಾ ಶಾಸಕರಿಗೆ ನಾವೇನೇ Task-Force ನಲ್ಲಿ ಮೀಟಿಂಗ್ ಮಾಡಿ ಸಲಹೆ ಕೊಟ್ಟರೂ ಆ ಗೈಡ್‌ಲೈನ್ಸ್ ಅನ್ನು ಮುಂದೆ ಇಟ್ಟು ಬಿಟ್ಟು ಕೈ

ಒರೆಸುತ್ತಾ ಕುಳಿತ್ತಿದ್ದಾರೆ. ಅದರಿಂದ ನಮ್ಮ ಜಿಲ್ಲೆಯಲ್ಲಿ ನಾಲ್ಕೂವರೆ ಕೋಟಿ ರೂಪಾಯಿ ಹಣ ಇದ್ದರೂ ಕೂಡ ಒಂದು ರೂಪಾಯಿ ಈ ಗಳಿಗೆವರೆಗೆ ಖರ್ಚಾಗುವುದಕ್ಕೆ ಅವಕಾಶ ಆಗಿಲ್ಲ ಮತ್ತು ಅದನ್ನು ಮಾಡುವಂತಹ ಕಾಳಜಿ ಕೂಡ ನಮ್ಮ ಜಿಲ್ಲಾಧಿಕಾರಿಗಳು ತೋರಿಸುವುದಿಲ್ಲ. ಅದರಿಂದ ನೀವು ನೇರವಾಗಿ ನಿರ್ದೇಶನ ಕೊಟ್ಟರೆ ಮಾತ್ರ ಈ ಕಾಮಗಾರಿಗಳನ್ನು ಕೈಗೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಬಂಡೆಪ್ಪ ಖಾಶೆಂಪೂರ್ : ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಟ್ಟರು. ಆದರೆ ವಿರೋಧ ಪಕ್ಷದವರು ಈ 9 ದಿನದ ಸದನದಲ್ಲಿ, ಈ ಸಲ ಬರೀ 9 ದಿವಸ, ಅದರಲ್ಲಿ ಇವತ್ತಿಗೂ ಹಿಡಿದುಕೊಂಡು 7 ದಿವಸ ಇಂತಹ ಒಂದು ಮಹತ್ವವಾದ ಬರಗಾಲದ ಬಗ್ಗೆ ಬಹಳಷ್ಟು ಬೆಳಕನ್ನು ಚೆಲ್ಲಿದ್ದಾರೆ. At least ಅವರು ಸದನದಲ್ಲಿ ಇರಬಹುದು, ಅಥವಾ ಇಲ್ಲದೆಯೂ ಇರಬಹುದು. ನಮ್ಮ ರಿಪೋರ್ಟ್‌ಗಳನ್ನು ತರಿಸಿಕೊಂಡು ಮತ್ತೆ ಅವರು ಹೇಳಿದ್ದಾರೆ. 23 ಜಿಲ್ಲೆಯಲ್ಲಿ 20 ಜಿಲ್ಲೆಗೆ ಸ್ವತಃ ಅವರೇ ಹೋಗಿ review ಮಾಡಿದ್ದೇವೆಂದು ಹೇಳಿದ್ದಾರೆ. ನಮ್ಮ ಬೀದರ್‌ಗೆ ಬಂದಾಗಲೂ ಸ್ವತಃ ಅವರು ಕಣ್ಣಲ್ಲಿ ನೋಡಿದ್ದಾರೆ. ಯಾವ್ಯಾವ ಅಧಿಕಾರಿಗಳು ಎಷ್ಟೆಷ್ಟು ದುಡ್ಡು ಖರ್ಚು ಮಾಡಿದ್ದಾರೆ ಎಂದು ನೋಡಿದ್ದಾರೆ. ಹಾಗಾಗಿ ಇವತ್ತು ನಾವೆಲ್ಲಾ ಕೊಟ್ಟಂತಹ ಸಲಹೆಗಳು ಏನಾಯಿತು? ಹಿಂದಿನಿಂದ ನಡೆದುಕೊಂಡು ಬಂದಿವೆ. ಸುಮ್ಮನೆ ನಾವು ಕಾಟಾಚಾರಕ್ಕೆ ಪೇಪರ್‌ನಲ್ಲಿ ಬರುತ್ತದೆ ಎಂದು ನಾವು ಮಾತನಾಡಬೇಕು, ಅವರು ಏನೋ ಒಂದು ಹೇಳಬೇಕು ಎಂದು. ಇಂತಹವು ದಯವಿಟ್ಟು ಮುಖ್ಯಮಂತ್ರಿಗಳೇ ನಿಮ್ಮ ಕಾಲದಲ್ಲಿ ಆಗುವುದು ಬೇಡ. ಹಿಂದೆ ಯಾರ್ಯಾರು ಏನೇನು ಮಾಡಿದ್ದಾರೆ ಅದನ್ನು ಅವರು ಅನುಭವಿಸುತ್ತಿದ್ದಾರೆ. ನೀವು ಹೋದಲ್ಲೆಲ್ಲಾ ಒಳ್ಳೆಯ ರೀತಿಯಿಂದ ಇವತ್ತು ರಾಜ್ಯದ ಜನತೆ ಹೊಸ ಮುಖ್ಯಮಂತ್ರಿಗಳು ಏನೋ ಮಾಡಬಹುದು ಎನ್ನುತ್ತಿದ್ದಾರೆ. ನಮ್ಮ ನಮ್ಮ ಶಾಸಕರೆಲ್ಲಾ ಹೇಳುತ್ತಿದ್ದರು. ಹೋಗಿದ್ದೆಲ್ಲಾ ಬರೆದುಕೊಂಡು ಹೋಗುತ್ತಾರೆಂದು ಹೇಳುತ್ತಿದ್ದರು. ಹಾಗಾಗಿ ಇವತ್ತು ಇಂಪಾರ್ಟೆಂಟ್ ಏನು? ಇವತ್ತು ನಾವೆಲ್ಲಾ ಕುಡಿಯುವ ನೀರಿನ ಬಗ್ಗೆಯೇ ಪ್ರಸ್ತಾವನೆ ಮಾಡಿದ್ದೇವೆ. ನೀವು ಹೇಳುತ್ತೀರಿ, ಶಾಸಕರಿಗೆ ಟಾಸ್ಕ್‌ಫೋರ್ಸ್ ಇದೆ. ನಾವು 10 -10 letter DC ಅವರಿಗೆ ಕೊಟ್ಟಿದ್ದೇವೆ. ಬೋರ್‌ವೆಲ್ ತೆಗೆದುಕೊಳ್ಳಿ, ಇಷ್ಟೆಲ್ಲಾ ಕೆಲಸಗಳನ್ನು ತೆಗೆದು

ಕೊಳ್ಳಿ ಎಂದು ಅಧಿಕಾರಿಗಳಿಗೆ ಕೊಟ್ಟಿದ್ದೇವೆ. ಇನ್ನೂ ಇವತ್ತಿನ ವರೆಗೆ ಕೆಲಸ ಚಾಲೂ ಆಗಿಲ್ಲ. ಅದಕ್ಕೆ ತಕ್ಷಣ ಈ ಸದನದ ಮುಖಾಂತರ ಡಿ.ಸಿ.ಗಳಿಗೆ ಹೇಳಿ. ಆ ಸಂಬಂಧಪಟ್ಟ ಶಾಸಕರನ್ನು ಅಭಿಪ್ರಾಯ ತೆಗೆದುಕೊಂಡು ಎರಡು ದಿವಸದಲ್ಲಿ ಎಷ್ಟು ಬೋರ್‌ವೆಲ್ ಇವೆ, ಅಷ್ಟೆಲ್ಲಾ ಬದಲಿ ಸ್ಟಾರ್ಟ್ ಮಾಡಿ ಎಂದು ಹೇಳಿ. ಇವತ್ತು ಪಿ.ಡಿ.ಅಕೌಂಟ್‌ನಲ್ಲಿ ರೂ.154 ಕೋಟಿ ಇದೆ. ಇನ್ನೂ ರೂ.40 ಕೋಟಿ ಹಾಕಿ ರೂ.200 ಕೋಟಿ ಮಾಡಿ 99 ಬರಗಾಲ ಕ್ಷೇತ್ರದಲ್ಲಿ 2–2 ಕೋಟಿ ರೂ.ಗಳನ್ನು immediate ನಾಳೆ ಬೆಳಿಗ್ಗೆ DC ಶಾಸಕರು ಸೇರಿ 8 ದಿವಸದೊಳಗೆ ಖರ್ಚು ಮಾಡಿಕೊಂಡು ವಾಪಸ್ ವಿಧಾನಸೌಧಕ್ಕೆ ಮಾಹಿತಿ ಕೊಡಿ ಎಂದು ಹೇಳಿ. ಆಮೇಲೆ ಕ್ರಾಪ್‌ಲಾಸ್ ಬಗ್ಗೆ ನಾವೆಲ್ಲಾ ಹೇಳಿದೆವು. ಅದು ಸಿಆರ್‌ಎಫ್. ನೀವು ಬಿಟ್ಟು ಬಿಡಿ. ಇವತ್ತು ರೈತರು ಸಂಕಷ್ಟದಲ್ಲಿದ್ದಾರೆ. ಅದೂ ಕ್ರಾಪ್‌ಲಾಸ್ ರೂ.10 ಸಾವಿರ ಮಿನಿಮಮ್ ಎಕರೆಗೆ ಕೊಡಿ. ಸಾಲ ಮನ್ನಾ ಮಾಡಲಿಕ್ಕೆ ಆಗುವುದಿಲ್ಲ ಎಂದರೆ ಇನ್ನೊಂದು ವಿಷಯವನ್ನು ತಾವು ಬೀದರ್‌ನಲ್ಲಿ ಪ್ರಸ್ತಾವನೆ ಮಾಡಿದ್ದೀರಿ. ಈ loan deferment ವಿಚಾರ. ಇವತ್ತು ದೀರ್ಘಾವಧಿ ಸಾಲ ಇರಲಿ, ಕ್ರಾಪ್‌ಲೋನ್ ಇರಲಿ, ಅದಕ್ಕೆ immediate ತಮ್ಮ ಉತ್ತರದಲ್ಲಿ ಹೇಳಬೇಕು. ರಾಜ್ಯಕ್ಕೆ ಒಂದು ಸಂದೇಶ ಇರಲಿ. At least one year loan deferment ಮಾಡುವಂತಹ ಸೂಚನೆ ಕಳಿಸಬೇಕು. ಆಮೇಲೆ Telemetric Rain gauge System ಅನ್ನು ಹಂತ ಹಂತವಾಗಿ ಅಳವಡಿಸಬೇಕು. ಇದಕ್ಕೇನೂ ಹೆಚ್ಚು ಖರ್ಚು ಬರುವುದಿಲ್ಲ ಮಾನ್ಯ ಮುಖ್ಯಮಂತ್ರಿಗಳೇ. 5 ಕೋಟಿ ರೂಪಾಯಿನಲ್ಲಿ ಇಡೀ ರಾಜ್ಯದಲ್ಲಿ ಆಗುತ್ತದೆ. ಅದರಿಂದ ಒಂದು ಸಿಸ್ಟಂನ ಸುಧಾರಣೆ ಆಗುತ್ತದೆ. ಹಿಂದೆ ಯಾರು ಏನು ಮಾಡಿದ್ದರು ಎಂದು ಹೇಳುವುದು ಬೇಡ. ಇವತ್ತು ತಾವು ಮಾತ್ರ ಈ ಒಂದು ಉತ್ತರದಲ್ಲಿ ತಿಳಿಸಬೇಕು. At least ಎರಡೆರಡು ಕೋಟಿ ಒಂದೊಂದು ಕ್ಷೇತ್ರಕ್ಕೆ ಕೊಡಬೇಕು. Already ನೀವು ಹೇಳಿದ್ದೀರಿ. 154 ಕೋಟಿ ರೂಪಾಯಿ ಇವತ್ತು P.D. Account ನಲ್ಲಿದೆ. ಇನ್ನೂ ಒಂದು 50 ಕೋಟಿ ರೂಪಾಯಿ ಹಾಕಿ ರೂ.200 ಕೋಟಿ ನಾಳೆ ಬಿಟ್ಟು ಇನ್ನೆರಡು ದಿನ ಬಿಟ್ಟು ಹೋಗಿ ಎಂದರೂ ನಾವು ಹೋಗುತ್ತೇವೆ. ಏಕೆಂದರೆ ಅದೂ ಇಂಪಾರ್ಟೆಂಟ್ ಇದೆ. ಇವತ್ತು ಗ್ರಾಮೀಣಾಭಿವೃದ್ಧಿ ಸಚಿವರು ಇಲ್ಲೇ ಇದ್ದಾರೆ. ತಾವು ಹೇಳಿ, ಇವತ್ತು ಜಿಲ್ಲಾ ಪಂಚಾಯತ್‌ನಲ್ಲಿ ಒಂದು ಬೋರ್‌ವೆಲ್ ಹಾಕಿಕೊಳ್ಳುವುದಕ್ಕೆ ನಮಗೆ ಪರ್ಮಿಷನ್ ಇದೆಯಾ ಎಂದು ಹೇಳಬೇಕು.

ನಾವು CEO ಅವರನ್ನು ನೋಡಿದ್ದೇವೆ. ಜಿಲ್ಲಾ ಪಂಚಾಯತ್ ಅಧ್ಯಕ್ಷರ ಜೊತೆ ಎಲ್ಲರೂ ಮಾತನಾಡಿದರೆ ಸಾರ್ ನಮ್ಮಲ್ಲಿ ಬಜೆಟ್ ಇಲ್ಲ ಎಂದು ಹೇಳುತ್ತಾರೆ. ಒಂದು ಬೋರ್‌ವೆಲ್ ಹಾಕುವುದಕ್ಕೆ ಬಜೆಟ್ ಇಲ್ಲ. ದಯವಿಟ್ಟು ನಿಮಗೆ ಒಂದು ವಿಚಾರ ಹೇಳುತ್ತೇನೆ. ಇದನ್ನು ನಮ್ಮ ಮನೆಗೆ ಹಾಕಿ ಕೊಡಿ ಎಂದು ಹೇಳುತ್ತಿಲ್ಲ. ಆ ಗ್ರಾಮೀಣ ಭಾಗದಲ್ಲಿ ಇವತ್ತು ರೈತರಿಗೆ ಬಡವರಿಗೆ ಕುಡಿಯುವ ನೀರಿಗೆ ತೊಂದರೆ ಇದೆ. ನಾವು ಏಕೆ ಇಷ್ಟು ರೊಚ್ಚಿಗೆ ಎದ್ದು ಹೇಳುತ್ತಿದ್ದೇವೆಂದರೆ ಕುಡಿಯುವ ನೀರಿಗೆ ರೊಕ್ಕ ಕೊಡಿ ಎಂದರೆ ಕೊಡದಿರುವ ಮೊದಲ ಸರ್ಕಾರವನ್ನು ನಾವು ನೋಡಿರುವುದು. ಕುಡಿಯುವ ನೀರಿಗೆ ಕೊಟ್ಟಿಲ್ಲ ಎಂದರೆ ಈ ತರಹ ಕುಡಿಯುವ ನೀರಿಗೆ ದುಡ್ಡು ಕೊಟ್ಟಿಲ್ಲ ಎಂದರೆ ಯಾವ ರೀತಿ ಬಡ ಜನತೆ ಪರಿಸ್ಥಿತಿ ಫೇಸ್ ಮಾಡಬಹುದು? ದಯವಿಟ್ಟು ನಿಮಗೆ ಹೇಳುತ್ತೇನೆ. Immediate ಒಂದು ಎರಡೆರಡು ಕೋಟಿ ರೂಪಾಯಿ ಇವತ್ತು ಕ್ಷೇತ್ರ ಜನಗಳಿಗೆ ಖರ್ಚು ಮಾಡುವಂತಹ ಒಂದು ಆದೇಶ ಕೊಟ್ಟುಬಿಡಿ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, Task Force Meeting ಏಕೆ ಮಾಡಿಲ್ಲವೆಂದು ಹೇಳಿದರು. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಬಯಸುತ್ತೇನೆ. ನನ್ನ ಕ್ಷೇತ್ರದಲ್ಲಿ Task Force Meeting ಮಾಡಿದ್ದೇನೆ. ನಾನು ಮುಂಚೆಯೇ ಮಾಡಿದೆ. ಬರಗಾಲ ಆಗುತ್ತಿರುವಂತಹ ಸಂದರ್ಭದಲ್ಲಿಯೇ ನಾನು Task Force Meeting ಮಾಡಿದ್ದೇನೆ. ನಾವು ಪಟ್ಟಿ ಮಾಡಿದ್ದೇವೆ. ಆದರೆ Deputy Commissioner ಅವರು ಒಂದು restriction ಹಾಕಿ ಬಿಟ್ಟಿದ್ದಾರೆ. ಬರೀ ನಾವು 15 ಲಕ್ಷ ಕೊಡುತ್ತೇವೆ. ನಮ್ಮ ಬೇಡಿಕೆ Water supply ಗೆ ಇರುವುದು 50 ಲಕ್ಷ. ಆದರೆ ನಮಗೆ restriction ಇರುವುದು 15 ಲಕ್ಷ. ನಾವು Task Force Meeting ಮಾಡಿದರೆ ಯಾವುದು ನಮ್ಮ priority? ಒಂದು ಊರಿಗೆ ಬಿಟ್ಟು ಮತ್ತೊಂದು ಊರಿಗೆ ಕೊಟ್ಟರೆ ಅವರು ಸಿಟ್ಟಾಗುತ್ತಾರೆ. ಅದಕ್ಕೆ ನಮಗೆ ಇನ್ನೂ ತೀರ್ಮಾನ ಮಾಡುವುದಕ್ಕೆ ಆಗಿಲ್ಲ. ಇದೊಂದು. ಎರಡನೆಯದು, employment generation ಗೆ ದುಡ್ಡು ಕೊಟ್ಟಿಲ್ಲ. ಉದ್ಯೋಗ ಖಾತರಿಯಲ್ಲಿ action plan ಆಗಿದೆ. ಎಲ್ಲಾ ಕಡೆ ಕೆಲಸ ಪ್ರಾರಂಭ ಆಗುತ್ತಾ ಇಲ್ಲ. ಅದು ಎಲ್ಲಾ ಊರಿನಲ್ಲೂ action plan ನಲ್ಲಿ ಇಲ್ಲ. ಏಕೆಂದರೆ restriction

ಅಮೌಂಟ್ ಇದೆ. ಅದಕ್ಕೆ employment generation ಗೆ ಒಂದು Constituencyಗೆ at least ಒಂದು ಕೋಟಿ ಮತ್ತು 50 ಲಕ್ಷ ರೂಪಾಯಿ minimum ಕುಡಿಯುವ ನೀರಿಗೆ ಕೊಟ್ಟರೇ ನಮಗೆ ಏನಾದರೂ ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇದು ಬಹಳ ಏನೂ implication ಆಗುವುದಿಲ್ಲ. ನಿಮ್ಮ ಹತ್ತಿರ ರೂ.89 ಕೋಟಿ ಆಗಲೇ ಇದೆ. ಇನ್ನೂ 180 ಕೋಟಿ ರೂಪಾಯಿ ಕೊಟ್ಟರೆ ಸಮಸ್ಯೆಗೆ ತೃಪ್ತಿ ಪಡುವುದು ಆಗುತ್ತದೆ. ಅದನ್ನು ನೀವು ಖಂಡಿತವಾಗಿ ಮಾಡದೇ ಹೋದರೆ ನೀವು ಸುಮ್ಮನೆ ಮಾಡಿ ಎಂದರೆ ಮಾಡುವುದಕ್ಕೆ ಆಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಒಂದು ನಿರ್ಣಯ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಿ.

ಶ್ರೀ ಡಿ.ವಿ.ಸದಾನಂದಗೌಡ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು.........

(ಗೊಂದಲ)

ಶ್ರೀ ರುದ್ರೇಶ್‌ಗೌಡ : ಯಾವ್ಯಾವ ಜಿಲ್ಲೆಗೆ ಎಷ್ಟು ಕೊಟ್ಟಿದ್ದಾರೆಂದು ತಿಳಿಸಲಿ.

ಅಧ್ಯಕ್ಷರು : ನಿಮ್ಮೆಲ್ಲರಿಗೂ ಅವಕಾಶ ಕೊಟ್ಟಿದೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಡಿ.ವಿ. ಸದಾನಂದಗೌಡ : ಖರ್ಚಿನ ಬಗ್ಗೆ ಕೇಳಿದ್ದೀರಿ, ಎಲ್ಲವನ್ನೂ ಕಳಿಸುವುದಕ್ಕೆ ಆಗಲಿಲ್ಲ. ಒಂದು ಜಿಲ್ಲೆಯಿಂದ ತರಿಸಿದ್ದೇನೆ.

(ಗೊಂದಲ)

ಶ್ರೀ ಡಿ.ವಿ. ಸದಾನಂದಗೌಡ : ಬೀದರ್ ಜಿಲ್ಲೆಯ ಮಾಹಿತಿ ತರಿಸಿದ್ದೇನೆ. I will send it. ಎಲ್ಲಾ ಜಿಲ್ಲೆಗಳ ಮಾಹಿತಿ ತರಿಸುತ್ತೇನೆ. ಆದರೆ ಖರ್ಚಾಗಿಲ್ಲ ಎಂದು ಹೇಳುವುದು ಸರಿಯಲ್ಲ.

(ಗೊಂದಲ)

ಅಧ್ಯಕ್ಷರು : ಕುಳಿತುಕೊಳ್ಳಿ.

ಶ್ರೀ ಡಿ.ವಿ.ಸದಾನಂದಗೌಡ : ಬೀದರ್ ಜಿಲ್ಲೆಯಲ್ಲಿ ಈಗಾಗಲೇ 38.25 ಲಕ್ಷ ಖರ್ಚು ಆದ ಮಾಹಿತಿ ಇದೆ. ಬಾಕಿ ಎಲ್ಲಾ ಜಿಲ್ಲೆಯ ಮಾಹಿತಿ ತರಿಸಿ ನಿಮಗೆ ಕೊಡುತ್ತೇನೆ. ಆದಕಾರಣ ಖರ್ಚಾಗಿಲ್ಲ ಎಂದು ಹೇಳುವುದು ಸರಿಯಲ್ಲ. ನಿಮ್ಮ ನಿರೀಕ್ಷಿತ ಮಟ್ಟದಲ್ಲಿ, ಆ ವೇಗದಲ್ಲಿ ಆಗಿಲ್ಲ ಎಂದು

ಏನಾದರೂ ಆಗಿದ್ದರೆ ಅದರ ಬಗ್ಗೆ ನಾನು ಒಪ್ಪಿಕೊಳ್ಳಬಹುದು. ಆದರೆ ಖರ್ಚುಗಳು ಎಲ್ಲಾ ಜಿಲ್ಲೆಯಲ್ಲಿ ಪ್ರಾರಂಭ ಆಗಿದೆ. ಬೀದರ್ ಜಿಲ್ಲೆಯ ಮಾಹಿತಿ ತರಿಸಿದ್ದೇನೆ. ಅದರ ಮಾಹಿತಿ ತಮಗೆ ಕಳುಹಿಸಿ ಕೊಡುತ್ತೇನೆ.

ಶ್ರೀ ಕೆ. ವೆಂಕಟೇಶ್ : ನಮ್ಮ ಮೈಸೂರು ಜಿಲ್ಲೆಯದು ಹೇಳಿ.

ಶ್ರೀ ಡಿ.ವಿ.ಸದಾನಂದ ಗೌಡ : ಒಂದು ನಿಮಿಷ ಕುಳಿತುಕೊಳ್ಳಿ. ಎಲ್ಲಾ ಜಿಲ್ಲೆಯ ಮಾಹಿತಿ ತರಿಸಿಕೊಡುತ್ತೇನೆ. ಸನ್ಮಾನ್ಯ ರೇವಣ್ಣನವರು ಒಂದು ಒಳ್ಳೆಯ ವಿಚಾರವನ್ನು ಪ್ರಸ್ತಾಪ ಮಾಡಿದರು. ಕೇಂದ್ರದ ಬಗ್ಗೆ ನಾವು ಹೋಗಬೇಕು. ನಾವು ಏಕೆ ಇನ್ನೂ ಸುಮ್ಮನೆ ಕುಳಿತಿದ್ದೇವೆ? ಒಂದು ನಿಯೋಗ ಹೋಗಬೇಕು ಎಂದು ಹೇಳಿದರು. ಈಗಾಗಲೇ ಕೇಂದ್ರಕ್ಕೆ ನಾವು ಎಷ್ಟು ಕ್ರಾಪ್‌ಲಾಸ್ ಆಗಿದೆ ಎಂದು ಹೇಳುವಂತಹ ರಿಪೋರ್ಟ್‌ನ್ನು ಕಳುಹಿಸಿ ಕೊಟ್ಟಿದ್ದೇವೆ. ಅದನ್ನು ಪ್ರಸ್ತಾಪ ಮಾಡಿದ್ದೇನೆ. ಖಂಡಿತ ನೀವು ಹೇಳಿದ ಸಲಹೆಯನ್ನು ನಾವು ತೆಗೆದುಕೊಳ್ಳುತ್ತೇವೆ. ಆದಷ್ಟು ಶೀಘ್ರ ಒಂದು ನಿಯೋಗ ಹೋಗುವುದನ್ನು ಮಾಡುತ್ತೇವೆ. ಈಗಾಗಲೇ ಕೇಂದ್ರದ ಟೀಮ್ ಇವತ್ತು ಬಂದಿದೆ. ಇವತ್ತಿನಿಂದ ಒಂದೆರಡು ದಿನಗಳ ಕಾಲ ಬರ ಪೀಡಿತ ಪ್ರದೇಶಗಳಿಗೆಲ್ಲಾ ಹೋಗಿ ಬಿಟ್ಟು ಅವರು ರಿಪೋರ್ಟ್ ಕೊಟ್ಟ ತಕ್ಷಣ ನಿಮ್ಮ ಸಲಹೆಯನ್ನು ಸ್ವೀಕಾರ ಮಾಡಿ ಕೇಂದ್ರಕ್ಕೆ ಡೆಲಿಗೇಷನ್ ಹೋಗುವಂತಹ ಕೆಲಸ ಕಾರ್ಯಗಳನ್ನು ನಾವು ಮಾಡುತ್ತೇವೆ.

ಶ್ರೀ ಹೆಚ್.ಡಿ. ರೇವಣ್ಣ : ಕೆಲವು ಕಡೆ ಕಂಪ್ಲೀಟ್ ಬರಗಾಲ ಇದೆ. ಅದಕ್ಕೆ ತಾವು ಸಾಲ ಮಾನ್ನ ಮಾಡುವ ವಿಚಾರಕ್ಕೂ ಹೋಗಬೇಕು.

ಶ್ರೀ ಡಿ.ವಿ. ಸದಾನಂದ ಗೌಡ : ನೀವು ಹೇಳಿದ ಪ್ರಸ್ತಾಪಗಳನ್ನು ಅಲ್ಲಿ ಮಾಡೋಣ. ಎರಡನೆಯದಾಗಿ, ನಮ್ಮ ಖಂಡ್ರೆಯವರು ಒಂದಿಷ್ಟು ವಿಚಾರ ಹೇಳಿದರು. ನಮ್ಮ ಕೊಪ್ಪಳದ ತಂಗಡಿಗಿಯವರು ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ನಾನು ಭಾಲ್ಕಿ ಕ್ಷೇತ್ರದ ಬಗ್ಗೆ ಮಳೆ ಕೊರತೆ ಮತ್ತು ತೇವಾಂಶದ ವರದಿಯನ್ನು ತರಿಸಿಕೊಳ್ಳುತ್ತೇನೆ. ತರಿಸಿಕೊಂಡು ಅದು guidelines ನ ವ್ಯಾಪ್ತಿಯಲ್ಲಿದ್ದರೆ ಅದನ್ನು ತಕ್ಷಣ ಮಾಡುತ್ತೇನೆ. ನಾನು ವರದಿಗಳನ್ನು ತರಿಸಿಕೊಳ್ಳುತ್ತೇನೆ. Norms ಶೇಕಡಾ 20 ರಷ್ಟು ಕೊರತೆ ಇರಬೇಕು ಮತ್ತು ತೇವಾಂಶದಲ್ಲಿ continue four weeks ಕೊರತೆ ಇರುವುದನ್ನು ನೋಡಿಕೊಂಡು ತರಿಸಿಕೊಂಡು ಮಾತನಾಡಿಕೊಂಡು ಅದನ್ನು ಪರಿಶೀಲನೆ ಮಾಡುವುದನ್ನು ಮಾಡುತ್ತೇನೆ. ಅದು ಒಂದು. ಮಾನ್ಯ

ಮಹದೇವ ಪ್ರಸಾದ್ ಅವರು, ಮಾನ್ಯ ಶ್ರೀರಾಮುಲು ಅವರು ಒಂದಿಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಸಾಕಷ್ಟು ತಾಲ್ಲೂಕುಗಳು ಬರ ಎಂದು ಘೋಷಣೆ ಆಗಬೇಕೆಂದು ಪ್ರಸ್ತಾಪಗಳನ್ನು ಮಾಡಿದ್ದಾರೆ. ಇದರಲ್ಲಿ ಯಾವುದೇ ರೀತಿಯಲ್ಲಿ ಕೂಡ ಹಿಂದೆ ಬೀಳುವಂತಹ ಪ್ರಮೇಯ ಇಲ್ಲ.

ಕಳೆದ ಎರಡು ತಿಂಗಳಲ್ಲಿ ಎಲ್ಲಾ ರೀತಿಯ ಕೆಲಸ ಕಾರ್ಯಗಳನ್ನು ಹೇಗೆ ಮುಂದುವರೆಸಿಕೊಂಡು ಹೋಗಿದ್ದೇವೆಯೋ ಹಾಗೆಯೇ ಹಂತ ಹಂತವಾಗಿ ಇದನ್ನು ಮಾಡಿದ್ದೇವೆ. ಮೊದಲು ಒಂದಷ್ಟು, ಆಮೇಲೆ ಒಂದು ವಾರ ಬಿಟ್ಟು ಇಷ್ಟು ಎಂದು ಮಾಡಿದ್ದೇವೆ. ಎಲ್ಲೆಲ್ಲಿ ಮಳೆ ಕೊರತೆ ಹಾಗೂ ತೇವಾಂಶಗಳು ಇದೆಯೋ ಅಲ್ಲೆಲ್ಲಾ ಮಾಡಿದ್ದೇವೆ. ಮೈಸೂರಿನ ಬಗ್ಗೆ ತಾವು ಕೇಳಿದ್ದೀರಿ. ಮೈಸೂರಿನ ಬಗ್ಗೆ ಹೇಳುವುದಾದರೆ ಈಗಾಗಲೇ 32,50,000 ರೂಪಾಯಿಗಳು ಖರ್ಚಾಗಿದೆ. ಈಗಾಗಲೇ ಮೈಸೂರಿನ ಕೆ.ಆರ್.ನಗರ, ನಂಜನಗೂಡು. ಮಂಡ್ಯ. ಪಿರಿಯಾಪಟ್ಟಣ. ಹುಣಸೂರು, ಹೆಚ್.ಡಿ. ಕೋಟೆಗಳಲ್ಲಿ ಖರ್ಚು ಮಾಡಿದ್ದೇವೆ. ಇದರಲ್ಲಿ ಮೈಸೂರು, ಕೆ.ಆರ್. ನಗರ, ನರಸೀಪುರ, ನಂಜನಗೂಡು, ಪಿರಿಯಾಪಟ್ಟಣ ಇವುಗಳಿಗೆ 50,000 ರೂಪಾಯಿಗಳು ಇಲಾಖಾ ವತಿಯಿಂದ ಬಿಡುಗಡೆ ಮಾಡಲಾಗಿದೆ. ದಾಖಲೆಗಳೊಂದಿಗೆ ಅದರ ಪಟ್ಟಿಯನ್ನು ತಮಗೆ ಕಳುಹಿಸಿಕೊಡುತ್ತೇನೆ.

(ಗೊಂದಲ)

ಶ್ರೀ ಕೆ.ವೆಂಕಟೇಶ್ : 50,000 ರೂಪಾಯಿಗಳು ಕೊಟ್ಟರೆ ಏನೂ ಸಾಲುವುದಿಲ್ಲ.

(ಗೊಂದಲ)

ಶ್ರೀ ಡಿ.ವಿ.ಸದಾನಂದಗೌಡ : ಕೊನೆಯದಾಗಿ ಒಂದು ವಿಚಾರ. NREGA ಯಿಂದ ಎಲ್ಲರಿಗೂ ಕೆಲಸ ಕೊಡುವುದಕ್ಕೆ ಅಗುತ್ತಿಲ್ಲ, Job cards ಇರುವವರಿಗೆ ಮಾತ್ರ ಕೊಡುವುದಕ್ಕೆ ಆಗುತ್ತದೆ, ಈ ರೀತಿ ಒಂದಷ್ಟು ಪ್ರಸ್ತಾಪಗಳು ಬಂದಿವೆ. ಆದರೆ ಗೈಡ್‌ಲೈನ್ಸ್‌ನಲ್ಲಿ 5.2 ರಲ್ಲಿ ಒಂದು ಕಡೆ ಹೇಳುತ್ತಾರೆ. ಬರ ಬಂದಂತಹ ಸಂದರ್ಭಗಳಲ್ಲಿ ಅವರಿಗೆ maximum opportunity ಕೊಡಬೇಕು. 'ಕೂಲಿಗಾಗಿ ಕಾಳು' ಯೋಜನೆಯ ರೀತಿಯಲ್ಲಿ ಖಂಡಿತವಾಗಿ ಇದನ್ನು ಉಪಯೋಗ ಮಾಡಿಕೊಳ್ಳಬಹುದು ಎಂದು ಹೇಳಿದ್ದಾರೆ. ಈ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟು, ಅದನ್ನು ಉಪಯೋಗ ಮಾಡುವಂತಹ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ

ಹೇಳುತ್ತೇನೆ. ಈಗಾಗಲೇ ತಾವು ಪ್ರಸ್ತಾಪ ಮಾಡಿದ ರೀತಿಯಲ್ಲಿ ಬೋರ್‌ವೆಲ್‌ಗಳು ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲೆಲ್ಲಾ ಕೊರೆದಿಲ್ಲ ಎಂದು ಹೇಳುತ್ತಿದ್ದೀರಿ. ತಕ್ಷಣ ಅದಕ್ಕಾಗಿ 36 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇನೆ. ಎಲ್ಲೆಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಮಾತ್ರ ಕೊರೆಯುತ್ತೇವೆ. ಅವಶ್ಯಕತೆ ಹೆಸರಿನಲ್ಲಿ ಎಲ್ಲಾ ಕಡೆ ಬೋರ್‌ವೆಲ್ ತೆಗೆಯುವಂತಹ ಕೆಲಸ ಕಾರ್ಯಗಳು ಆಗಬಾರದು. ಬರ ಪೀಡಿತ ಪ್ರದೇಶದಲ್ಲಿ ಅವಶ್ಯಕತೆ ಇದ್ದಲ್ಲಿ ಮಾನ್ಯ ಜಗದೀಶ್‌ಶೆಟ್ಟರ್‌ರವರ ಆರ್.ಡಿ.ಪಿ.ಆರ್. ಮಂತ್ರಾಲಯದ ಮುಖಾಂತರ 36 ಕೋಟಿ ರೂಪಾಯಿಗಳನ್ನು ವಿಶೇಷವಾಗಿ ಬಿಡುಗಡೆ ಮಾಡುವ ಮೂಲಕ ಬೋರ್‌ವೆಲ್‌ಗಳನ್ನು ತೆಗೆಸುವಂತಹ ಕೆಲಸ ಮಾಡುತ್ತೇವೆ. ಎರಡನೆಯದಾಗಿ, ಸಹಕಾರಿ ಲೋನ್‌ಗಳ ಬಗ್ಗೆ ಪ್ರಸ್ತಾಪ ಮಾಡಿದಿರಿ. ಅಣೆವಾರು ಬಂದ ತಕ್ಷಣ ಅದನ್ನು ರೀಷೆಡ್ಯೂಲ್ ಮಾಡುವುದಕ್ಕೆ ಅಥವಾ ಅದಕ್ಕೆ ಅಗತ್ಯವಾಗಿರುವ ಬೇರೆ ಕೆಲಸಗಳನ್ನು ಮಾಡುವುದಕ್ಕೆ ನಾವು ತಯಾರಿದ್ದೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಬರ ಘೋಷಣೆಯಾಗಿ ಎರಡು ತಿಂಗಳಾಯಿತು. ಮೊದಲನೆಯ ದಾಗಿ, ನಮ್ಮ ಆರೋಪ ಎರಡು ತಿಂಗಳಲ್ಲಿ ಯುದ್ಧದೋಪಾದಿಯಲ್ಲಿ ಏನೂ ಕೆಲಸ ಕಾರ್ಯಗಳು ಆಗಿಲ್ಲ ಎನ್ನುವುದೇ ಆಗಿದೆ. ಎರಡನೆಯದಾಗಿ, ಇವತ್ತಿನವರೆಗೆ ಯಾವುದೇ constituency ಗಳಲ್ಲಿ ಬೋರ್‌ವೆಲ್ ಕೊರೆಸುವು ದಾಗಲಿ, ಮೇವು ಬ್ಯಾಂಕ್ ತೆರೆಯುವುದಾಗಲಿ, ಕುಡಿಯುವ ನೀರು ಒದಗಿಸುವುದಾಗಲಿ ಮಾಡಿಲ್ಲ. ತಾಲ್ಲೂಕು ವೈಸ್ ಬಿಟ್ಟು ಕ್ಷೇತ್ರವಾರು ಎಂ.ಎಲ್.ಎ. ಗಳನ್ನು ಅಧ್ಯಕ್ಷರಾಗಿ change ಮಾಡಿ ಎನ್ನುವುದು ಬಹಳ ದಿನಗಳಿಂದ ಒಂದು ಸಲಹೆ ಇದೆ, ಅದನ್ನು ಮಾಡಬೇಕು. ಮೂರನೆಯದಾಗಿ, ಒಂದು ಕಡೆ ಬರ ಇದೆ. ಇನ್ನೊಂದು ಕಡೆ ಅಷ್ಟಿಷ್ಟು ಬೆಳೆದಿರತಕ್ಕಂಥ ಈರುಳ್ಳಿ ಬೆಲೆ ಬಿದ್ದು ಹೋಗಿದೆ. ಅದಕ್ಕೆ MSP ಘೋಷಣೆ ಮಾಡಿಲ್ಲ, Market intervention ಪ್ರಾರಂಭ ಮಾಡಿಲ್ಲ, ಕಬ್ಬಿನ ಬೆಲೆ ನಿಗದಿ ಮಾಡಿಲ್ಲ, ಕಬ್ಬಿನ ಬೆಳೆಗಾರರ ಬಾಕಿ ಕೊಟ್ಟಿಲ್ಲ, ಅರಿಶಿಣ ಬೆಲೆ ಬಿದ್ದು ಹೋಗಿದೆ, ಅದಕ್ಕೂ ಏನೂ ಮಾಡಿಲ್ಲ. ಭತ್ತದ ಪರ್ಚೇಸಿಂಗ್ ಸೆಂಟರ್ ಮಾಡಿ ಎಂದರೂ ಇವತ್ತಿನವರೆಗೂ ಮಾಡಿಲ್ಲ. ಮಾನ್ಯ ಅಧ್ಯಕ್ಷರೆ, ರೈತರು

ಒಂದು ಕಡೆ ಕಷ್ಟದಲ್ಲಿದ್ದಾರೆ. ಅವರಿಗೆ ಏನೂ ಪರಿಹಾರವಿಲ್ಲ. ಇನ್ನೊಂದು ಕಡೆ ಅವರು ಬೆಳೆದಂಥ ಪದಾರ್ಥಗಳಿಗೆ ಬೆಲೆ ಬಿದ್ದು ಹೋಗಿ ಬಹಳ ತೊಂದರೆಯಾಗಿದೆ. ಈರುಳ್ಳಿ, ಕಬ್ಬು, ಭತ್ತ. ಅರಿಶಿಣ, ದಾಳಿಂಬೆ, ಆಲೂಗಡ್ಡೆ ಈ ಪದಾರ್ಥಗಳ ಬೆಲೆ ಬಿದ್ದು ಹೋಗಿದೆ. ಹೀಗೆ ಎಲ್ಲಾ ಬೆಳೆಗಳ ಬೆಲೆ ಬಿದ್ದು ಹೋಗಿದೆ. ಅದನ್ನು ಕೂಡಲೇ ಬೆಂಬಲ ಬೆಲೆ ಘೋಷಣೆ ಮಾಡಿ ಎಂದರೆ ಇವತ್ತಿನವರೆವಿಗೂ ಮಾಡಿಲ್ಲ. ಜೊತೆಗೆ ಈ ವರ್ಷದ ಬರಗಾಲ ಒಂದು ವಿಶೇಷ ಪ್ರಕರಣವಾಗಿದ್ದು, 40 ವರ್ಷಗಳಲ್ಲೇ ಬಹಳ ಭೀಕರವಾದ ಬರಗಾಲವಾಗಿರುವುದರಿಂದ ಕನಿಷ್ಠ ಪಕ್ಷ ಈ ವರ್ಷದ ಸಾಲವನ್ನಾದರೂ ಮನ್ನಾ ಮಾಡಿ ಎಂದು ನಾನು ಸಲಹೆ ಕೊಟ್ಟಿದ್ದೆ. ನೀವು ಸಲ ಮನ್ನಾ ಮಾಡುವುದಿಲ್ಲ ಎಂದು ಗೊತ್ತಿದೆ. ಅದಕ್ಕೆ ಇವರು ಒಪ್ಪಿಕೊಳ್ಳುವುದಿಲ್ಲ. ಆದ್ದರಿಂದ ಈ ವರ್ಷದ ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡಬೇಕೆಂದು ಕೇಳುತ್ತಿದ್ದೇವೆ. ಮುಂದಿನ ವರ್ಷಕ್ಕೆ ಅದನ್ನು re-phasing ಮಾಡಬೇಕು. ಯಾವುದೇ ಕಾರಣಕ್ಕೂ ಅದನ್ನು ವಸೂಲಿ ಮಾಡುವ ಕೆಲಸ ಮಾಡಬಾರದು. ಮಾನ್ಯ ಮುಖ್ಯಮಂತ್ರಿಗಳು ಮತ್ತು ಸರ್ಕಾರ ಈ ಬರಗಾಲವನ್ನು ಗಂಭೀರವಾಗಿ ಪರಿಗಣಿಸಿಲ್ಲ. ಬಹಳ ಅತೃಪ್ತಿಕರವಾಗಿ ಉತ್ತರ ಕೊಟ್ಟಿದ್ದಾರೆ. ಈ ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿ ಇಲ್ಲ. ಇದು ರೈತರ ವಿರೋಧಿ ಸರ್ಕಾರ, ಬಡವರ ವಿರೋಧಿ ಸರ್ಕಾರ, ಕೂಲಿ ಕಾರ್ಮಿಕರ ವಿರೋಧಿ ಸರ್ಕಾರ. ಇವರು ಬರೀ lip sympathy ಗಾಗಿ ಮಾತ್ರ ಹೇಳುತ್ತಿದ್ದಾರೆಯೇ ಹೊರತು ಬೇರೇನೂ ಇಲ್ಲ. It is anti-poor, anti-farmers' Government. We are not happy with the reply of this Government and Hon'ble Chief Minister, ಆದ್ದರಿಂದ, ನಾವು Protest ಮಾಡುತ್ತೇವೆ. ಈ ಸರ್ಕಾರ ರೈತ ವಿರೋಧಿಯಾಗಿದೆ. ಈ ಸರ್ಕಾರದ ರೈತ ವಿರೋಧಿ ಧೋರಣೆಯನ್ನು ಖಂಡಿಸಿ ನಾವು Walk out ಮಾಡುತ್ತಿದ್ದೇವೆ.

(ಗೊಂದಲ)

(ಈ ಹಂತದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರ ನೇತೃತ್ವದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ, (ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಸಚಿವರು) : ಒಳ್ಳೆಯ ಕೆಲಸ ಮಾಡಿದರೆ ಒಪ್ಪಿಕೊಳ್ಳಬೇಕು. ಅದು ಬಿಟ್ಟು ಸಭಾತ್ಯಾಗ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಸಭಾಧ್ಯಕ್ಷರೆ, ...

ಅಧ್ಯಕ್ಷರು : ನೀವು ಹೋಗುವುದಿಲ್ಲವೇ?

ಶ್ರೀ ಹೆಚ್.ಡಿ. ರೇವಣ್ಣ : ನೀವು ಒಳಗಡೆ ಇರಿ ಎಂದರೆ ಇರುತ್ತೇವೆ. ನೀವು ಹೋಗಿ ಎಂದರೆ ಹೋಗುತ್ತೇವೆ. ನೀವು ಹೇಗೆ ಹೇಳಿದರೆ ಹಾಗೆ ಮಾಡುತ್ತೇವೆ. ಮಾನ್ಯ ಅಧ್ಯಕ್ಷರೆ, Walk out ಮಾಡಿರುವ ದೃಷ್ಟಿಯಿಂದ ಹೇಳುತ್ತಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಬೇಕಾಗುತ್ತದೆ. ಕೆಲವು ಜಿಲ್ಲೆಗಳಲ್ಲಿ ರೈತರು ಬಹಳ ಸಂಕಷ್ಟದಲ್ಲಿದ್ದಾರೆ. ಇವತ್ತು ನಾನು ಮೊದಲೇ ಹೇಳಿದೆ. ಒಂದು ಸಾರಿ ಸಾಲ ಮನ್ನಾ ಮಾಡುವುದಾದರೆ ಮಾಡಿ. ಇಲ್ಲ ಅಂದರೆ ಕೇಂದ್ರ ಸರ್ಕಾರಕ್ಕೆ ಈ ರಾಜ್ಯದಲ್ಲಿ ಇಂತಹ ಕಡೆ ಬರಗಾಲ ಇದೆ ಎಂದು ಒಂದು ನಿರ್ಣಯ ಮಾಡಿ ಕಳುಹಿಸಬೇಕಾಗುತ್ತದೆ. ಉದಾಹರಣೆಗೆ, ನಮ್ಮ ಜಿಲ್ಲೆಯಲ್ಲಿ ಕಳೆದ ಐದು ವರ್ಷಗಳಿಂದ ಆಲೂಗಡ್ಡೆ ಬೆಳೆ ಸರ್ವನಾಶವಾಗುತ್ತದೆ. ಅರಿಶಿಣ, ಶುಂಠಿ ಬೆಳೆಗಳು ನಾಶವಾಗಿವೆ. ಶುಂಠಿ ಬೆಳೆಗೆ 1200 ರೂಪಾಯಿಗಳ ಬೆಲೆ ಇದ್ದದ್ದು, ಈಗ ಅದು 300 ರೂಪಾಯಿಗಳು ಆಗಿದೆ. ರೈತರು ವಿಷ ತೆಗೆದುಕೊಳ್ಳುವ ಪರಿಸ್ಥಿತಿ ಆಗಿದೆ. ದಯಮಾಡಿ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಸದನದಲ್ಲಿ ಹೇಳುವುದೇನೆಂದರೆ, at least ಬಡ್ಡಿಯನ್ನಾದರೂ ರೀ-ಷೆಡ್ಯೂಲ್ ಮಾಡುತ್ತೇವೆಂದು ಒಪ್ಪಿಕೊಂಡಿದ್ದೀರಲ್ಲಾ, ಅದಕ್ಕೆ ನಾನು ಅವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಆದರೆ, ರೀ-ಷೆಡ್ಯೂಲ್ ಮಾಡುವುದರ ಜೊತೆಗೆ ಏನು ಸಹಕಾರಿ ಸಾಲದ ಬಡ್ಡಿ ಇದೆಯೆಲ್ಲಾ, ಅದನ್ನು ಮನ್ನಾ ಮಾಡಿ. ಕೇಂದ್ರ ಸರ್ಕಾರಕ್ಕೆ ಸಾಲ ಮನ್ನಾ ಮಾಡಲು ಒಂದು ನಿರ್ಣಯವನ್ನು ಕಳುಹಿಸಿ ಕೊಡಬೇಕು. ರಾಜ್ಯ ಸರ್ಕಾರಕ್ಕೆ ಬಡ್ಡಿ ಮನ್ನಾ ಮಾಡಬೇಕೆಂದು ಮನವಿ ಮಾಡುತ್ತೇನೆ. ಅದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಏನು ಉತ್ತರ ಬರುತ್ತದೆ ಎನ್ನುವುದನ್ನು ನೋಡಿ ನಂತರ ನಿರ್ಣಯ ಮಾಡಬೇಕಾಗುತ್ತದೆ. ದಯಮಾಡಿ ಇದಕ್ಕೆ ಮುಖ್ಯಮಂತ್ರಿಗಳು ಉತ್ತರ ಹೇಳಬೇಕು. ಇಲ್ಲ ಎಂದರೆ ಎದ್ದು ಹೋಗುತ್ತೇವೆ.

(ಗೊಂದಲ)

ಅಧ್ಯಕ್ಷರು : ಆಯಿತು, ಶಾಸನ ರಚನೆ ತೆಗೆದುಕೊಳ್ಳೋಣ. ಮಾನ್ಯ ಸುನಿಲ್ ಹೆಗಡೆಯವರೇ, ಪ್ಲೀಸ್ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಲಕ್ಷ್ಮಣ ಎಸ್. ಸವದಿ (ಮಾನ್ಯ ಸಹಕಾರಿ ಮತ್ತು ಕೃಷಿ ಮಾರುಕಟ್ಟೆ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರು ಬಹಳ ಒಳ್ಳೆಯ ಪ್ರಶ್ನೆಯನ್ನೇ ಎತ್ತಿದ್ದಾರೆ. ಸರ್ಕಾರಕ್ಕೆ ಒಂದು ಡಿಮಾಂಡ್‌ನ್ನು ಕಳುಹಿಸಿದ್ದಾರೆ. ಸಾಲ ಪಡೆದಿರತಕ್ಕಂಥ ರೈತರು ಬಹಳ ಕಷ್ಟದಲ್ಲಿದ್ದಾರೆ. ಅವರಿಗೆ ಬಡ್ಡಿ ಮನ್ನಾ ಮಾಡಬೇಕೆಂದು ಹೇಳಿದ್ದರೆ. ಇಡೀ ರಾಜ್ಯದಲ್ಲಿರತಕ್ಕಂತ ರೈತರಿಗೆ ಸಹಕಾರಿ ಕ್ಷೇತ್ರದ ಮುಖಾಂತರ ಏಳು ಸಾವಿರ ಕೋಟಿ ರೂಪಾಯಿಗಳ ಸಾಲ ಕೊಡಬೇಕೆಂಬ ಗುರಿ ಹಾಕಿಕೊಂಡಿದ್ದೇವೆ. ಆ ನಿಟ್ಟಿನಲ್ಲಿಯೇ ಮುಂದೆ ಹೊರಟಿದ್ದೇವೆ. ಆದರೆ ತಾವು ಬಡ್ಡಿ ಮನ್ನಾ ಮಾಡಬೇಕೆಂದು ಕೇಳುತ್ತಿದ್ದೀರಿ. ಆದರೆ ಸ್ವಾಮಿ, ರೈತರು ಬಡ್ಡಿಯನ್ನೇ ಕಟ್ಟುತ್ತಿಲ್ಲ. ನಾವು ಹೇಳಿರುವ 1% ಬಡ್ಡಿಯೂ ಇಲ್ಲ. ಕೇಂದ್ರ ಸರ್ಕಾರದಿಂದ ಬರತಕ್ಕಂತಹ ಸಬ್ಸಿಡಿಯನ್ನು ರೈತರಿಗೆ ನೇರವಾಗಿ ಕೊಡುತ್ತಿದ್ದೇವೆ. ರೈತರು 1% ಬಡ್ಡಿ ಕಟ್ಟುವುದಕ್ಕೆ ಬದಲಾಗಿ, ರೈತರಿಗೇ 1% ಬಡ್ಡಿ ಸಿಗುತ್ತಿದೆ. ಬಡ್ಡಿ ಮನ್ನಾ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು ತಮ್ಮ ಮುಖಾಂತರ ಹೇಳುವುದಕ್ಕೆ ಬಯಸುತ್ತೇನೆ.

(ಗೊಂದಲ)

ಅಧ್ಯಕ್ಷರು : ಈ ಚರ್ಚೆ ಮುಕ್ತಾಯವಾಯಿತು.

(ಗೊಂದಲ)

ಶ್ರೀ ಹೆಚ್.ಡಿ.ರೇವಣ್ಣ : ಕೇಂದ್ರ ಸರ್ಕಾರಕ್ಕೆ ಸಾಲ ಮನ್ನಾ ಮಾಡುವ ದೃಷ್ಟಿಯಿಂದ ಕಳುಹಿಸಿ. ಹೊಸ ಸಾಲವನ್ನು ಕೊಟ್ಟಿದ್ದೇವೆಂದು ಸಹಕಾರ ಸಚಿವರು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ : ಸಹಕಾರ ಕ್ಷೇತ್ರದಲ್ಲಿ ಎಷ್ಟು ಜನ ರೈತರಿಗೆ ಹೊಸ ಸಾಲ ಕೊಟ್ಟಿದ್ದೀರಿ. ಕರ್ನಾಟಕ ರಾಜ್ಯದಲ್ಲಿ ಎಷ್ಟು ಜನ ರೈತರಿದ್ದಾರೆ ಹೇಳಿ.

(ಗೊಂದಲ)

ಶ್ರೀ ಲಕ್ಷ್ಮಣ ಎಸ್.ಸವದಿ (ಮಾನ್ಯ ಸಹಕಾರಿ ಮತ್ತು ಕೃಷಿ ಮಾರುಕಟ್ಟೆ ಸಚಿವರು) : ಸಹಕಾರಿ ಕ್ಷೇತ್ರದ ಮುಖಾಂತರ ಇಡೀ ರಾಜ್ಯದಲ್ಲಿರುವ ಎಷ್ಟು

ಜನ ರೈತರಿಗೆ ಸಾಲ ಕೊಟ್ಟಿದ್ದೇವೆ ಎನ್ನುವ ಬಗ್ಗೆ ಅಂಕಿ ಅಂಶಗಳನ್ನು ಕೇಳುತ್ತಿದ್ದೀರಿ, ಇದರ ಬಗ್ಗೆ ಅರ್ಧ ಗಂಟೆ ಕಾಲ discussion ಗೆ ಬನ್ನಿ. ನಾವು ಅದಕ್ಕೆ ಉತ್ತರ ಕೊಡುತ್ತೇವೆ.

(ಗೊಂದಲ)

ಅಧ್ಯಕ್ಷರು : ಈಗ ಶಾಸನ ರಚನೆ ಕಲಾಪ.

(ಗೊಂದಲ)

ಶ್ರೀ ಲಕ್ಷ್ಮಣ್ ಸವದಿ (ಸಹಕಾರ ಸಚಿವರು) : ಶಿವಲಿಂಗೇಗೌಡರೆ, ನಮ್ಮ ಸಹಕಾರ ಕ್ಷೇತ್ರದ ಮೂಲಕ ಇಡೀ ರಾಜ್ಯಕ್ಕೆ ಸಾಲ ಕೊಟ್ಟಿರುವ ಅಂಕಿಅಂಶಗಳನ್ನು ಕೇಳುತ್ತಿದ್ದೀರಿ, ಬೇಕಾದರೆ ಆ ಬಗ್ಗೆ ಅರ್ಧಗಂಟೆ ಚರ್ಚೆಗೆ ತನ್ನಿ, ಅದಕ್ಕೆ ನಾವು ಉತ್ತರವನ್ನು ಕೊಡುತ್ತೇವೆ. ನೋಟಿಸ್ ಕೊಟ್ಟು ಅದರ ಬಗ್ಗೆ ಪ್ರತ್ಯೇಕವಾದ ಸೂಚನೆಯನ್ನು ಕೊಡಿ, ಅರ್ಧಗಂಟೆ ಚರ್ಚೆ ಮಾಡೋಣ.

ಶ್ರೀ ಹೆಚ್.ಡಿ.ರೇವಣ್ಣ : ದಯಮಾಡಿ, ಇವತ್ತು ಶುಂಠಿ ಬೆಲೆ, ಆಲೂಗಡ್ಡೆ ಬೆಲೆಗೆ 5 ವರ್ಷಗಳಿಂದ ಸುಮಾರು 300-400 ಕೋಟಿ ನಷ್ಟವಾಗಿದೆ, ಅದರ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಚಿಂತೆ ಇಲ್ಲ, ರೈತರು ಬಡ್ಡಿಯನ್ನೇ ಕಟ್ಟುತ್ತಿಲ್ಲವೆಂದು ಹೇಳುತ್ತೀರಿ, ಬಡ್ಡಿ ಕಟ್ಟದೆ ನೀವು ಫ್ರೀ ಸಾಲವನ್ನು ಕೊಡುತ್ತಿದ್ದೀರಾ? ಈ ಸದನದ ಮೂಲಕ ಇನ್ನು ಮುಂದೆ ಸಹಕಾರಿ ಕ್ಷೇತ್ರದಲ್ಲಿ ಸಾಲ ತೆಗೆದುಕೊಳ್ಳುವವರು ಬಡ್ಡಿ ಕೊಡಬೇಡಿ ಎಂದು ಘೋಷಣೆ ಮಾಡಿಬಿಡಿ, ಇಲ್ಲದಿದ್ದರೆ ನಾವು ಸದನದಿಂದ ವಾಕ್ಔಟ್ ಮಾಡಬೇಕಾಗುತ್ತದೆ...

ಶ್ರೀ ಲಕ್ಷ್ಮಣ್ ಸವದಿ : ಮಾನ್ಯ ಅಧ್ಯಕ್ಷರೆ, ಪ್ರಮುಖವಾಗಿ, ರೇವಣ್ಣನವರಿಗೆ ನಮ್ಮ ಕ್ಷೇತ್ರದ ಮೂಲಕ ಕೊಡುವ ಸಾಲದ ಹಿನ್ನೆಲೆ ಬಗ್ಗೆ ಗೊತ್ತಿದೆ, ಅದಕ್ಕೋಸ್ಕರ ನಾನು ಮಾಹಿತಿಯನ್ನು ಒದಗಿಸಿಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರಿಗೆ ದಯಮಾಡಿ ಮನವಿ ಮಾಡುವುದೇನೆಂದರೆ, ಇವತ್ತು ಆಲೂಗಡ್ಡೆ ಬೆಳೆಗಾರರು ಸಂಕಷ್ಟದಲ್ಲಿದ್ದಾರೆ, ಶುಂಠಿ ಇರಬಹುದು, ಅರಿಶಿಣವಿರಬಹುದು ಅದನ್ನು ಮಾರ್ಕೆಟ್‌ನಲ್ಲಿ ಇವತ್ತು ಕೇಳುವವರು ದಿಕ್ಕಿಲ್ಲ, ಅವರು ವಿಷ ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿದ್ದಾರೆ, ದಯಮಾಡಿ ಸಭಾನಾಯಕರು ಒಂದು ಹೇಳಿಕೆಯನ್ನು ಕೊಡಬೇಕು, ಇಲ್ಲದಿದ್ದರೆ ನಾವು ಸದನದಿಂದ ವಾಕ್ಔಟ್ ಮಾಡಬೇಕಾಗುತ್ತದೆ, ದಯಮಾಡಿ ಸರ್ಕಾರದ ಉತ್ತರವನ್ನು ನಿರೀಕ್ಷೆ ಮಾಡುತ್ತೇವೆ.

ಶ್ರೀ ಡಿ.ವಿ.ಸದಾನಂದಗೌಡ (ಮುಖ್ಯಮಂತ್ರಿಗಳು) : ಮಾನ್ಯ ರೇವಣ್ಣನವರು ಹೇಳಿದಂಥ ವಿಚಾರವನ್ನು ಖಂಡಿತವಾಗಿ ಚರ್ಚೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಹೆಚ್.ಡಿ.ರೇವಣ್ಣ : ಸೂಕ್ತ ಕ್ರಮ ತೆಗೆದುಕೊಳ್ಳುವುದಲ್ಲ, ಒಂದು ನಿರ್ಣಯ ಮಾಡಿ, 5 ವರ್ಷದಿಂದ ರೈತರು ಸಂಕಷ್ಟದಲ್ಲಿದ್ದಾರೆ.

ಶ್ರೀ ಡಿ.ವಿ.ಸದಾನಂದಗೌಡ : ಚರ್ಚೆ ಮಾಡಿ ಇದಕ್ಕೆ ಪರಿಹಾರವನ್ನು ಕಂಡುಕೊಳ್ಳೋಣ.

ಶ್ರೀ ಹೆಚ್.ಡಿ.ರೇವಣ್ಣ : ಪರಿಹಾರ ಕೊಡುತ್ತೀರಾ ಸರ್?

ಶ್ರೀ ಡಿ.ವಿ.ಸದಾನಂದಗೌಡ : ಓ.ಕೆ.

2. ಶಾಸನ ರಚನೆ :

(ಅ) ವಿಧೇಯಕವನ್ನು ಮಂಡಿಸುವುದು

1) ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, 2011 ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು, ಗೃಹ ಮತ್ತು ಸಾರಿಗೆ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, 2011 ರ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವನೆ ಮಂಡಿಸಲಾಗಿದೆ.

ಈಗ ಪ್ರಸ್ತಾವನೆಯನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಪ್ರಸ್ತಾವನೆ ಹೀಗಿದೆ :

2011ನೇ ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಸಭೆಯು ಅನುಮತಿ ನೀಡಬೇಕು